ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರ ಪತ್ರಿಕೆ
ಸಂಪುಟ ೧೧ ಸಂಚಿಕೆ ೩೦ ಆಗಸ್ಟ್ ೬, ೧೯೮೯ ರೂ. ೧.೨೫.

ಹೋರಾಟ ಯಶಸ್ವಿಗೊಳಿಸಿ

ಸಿ.ಪಿ.ಐ.(ಎಂ) ರಾಜ್ಯ ಸಮಿತಿ ಕರೆ

ತಾ: 27-789 ರಂದು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಸಮಿತಿ ಸಭೆ ಜುಲೈ 27ರಂದು ಸೇರಿತ್ತು. ಸಿ.ಪಿ.ಐ.(ಎಂ) ಕೇಂದ್ರ ಸಮಿತಿಯ ಕಾರ್ಯದರ್ಶಿ ಕಾ.ಪಿ.ರಾಮಚಂದ್ರನ್‌ಅವರು ಹಾಜರಿದ್ದು, ದೇಶದ ರಾಜಕೀಯ ಪರಿಸ್ಥಿತಿಯನ್ನು, ಚೀನಾ ದೇಶದ ಇತ್ತೀಚಿನ ಬೆಳವಣಿಗೆಗಳ ಕುರಿತು ಪಕ್ಷದನಿಲುಮೆಯನ್ನು ವಿವರಿಸಿದರು. ರಾಜ್ಯ ಸಮಿತಿಸಭೆಯಲ್ಲಿ ಕೆಲವು ನಿರ್ಣಯಗಳನ್ನು ಕೈಗೊಳ್ಳಲಾಯಿತು.

ನಿರ್ಣಯಗಳು:-

1) ಎ.ಐ.ಡಿ.ಎಂ.ಕೆ. ನ್ಯಾಷನಲ್‌ಕಾನ್ಫರೆನ್ಸ್ ಮತ್ತು ಜನತಾ ಪಕ್ಷದ ಸದಸ್ಯರನ್ನು ಬಿಟ್ಟು ಇತರ ಎಲ್ಲ ವಿರೋಧ ಪಕ್ಷಗಳ ಸದಸ್ಯರು ರಾಜೀನಾಮೆ ಕೊಟ್ಟಿರುವುದನ್ನು ಸ್ವಾಗತಿಸಿ. ದೇಶವನ್ನು ಭ್ರಷ್ಟ ಸರಕಾರದಿಂದ ಉಳಿಸಲು, ರಾಜೀವಗಾಂಧಿಯವರ ರಾಜೀನಾಮೆಗೆ ಒತ್ತಾಯಿಸಲು ಪ್ರತಿಪಕ್ಷಗಳು ಆಗಸ್ಟ್ 31 ರಂದು ಭಾರತ ಬಂದ್ ಆಚರಿಸಬೇಕೆಂದುಕೊಟ್ಟಿರುವ ಕರೆಯನ್ನು ಯಶಸ್ವಿಗೊಳಿಸಬೇಕೆಂದು ತಾ: 27ರಂದು ಸೇರಿದ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್‌ಪಕ್ಷದ ಕರ್ನಾಟಕ ರಾಜ್ಯ ಸಮಿತಿ ತನ್ನ ಘಟಕಗಳಿಗೆ ಕರೆ ಕೊಟ್ಟಿದೆ. ಕಾಂಗ್ರೆ ಸರ್ಕಾರದ ಅಧಿಕಾರ ಮುಂದುವರೆದರೆ ಭಾರತ ದೇಶಕ್ಕೆ ಎಂಥ ಅಪಾಯವಿದೆಯೆಂಬುದನ್ನು ಜನರಿಗೆ ಮನದಟ್ಟು ಮಾಡುವ ಉದ್ದೇಶದಿಂದ ಆಗಸ್ಟ್ 9ರಂದು "ಭಾರತ ರಕ್ಷಿಸಿ" ದಿನವನ್ನು ಆಚರಿಸಿ. ರಾಜೀವ ಗಾಂಧಿ ಆಡಳಿತೆಯ ವೈಖರಿಯನ್ನು ಬಯಲಿಗೆಳೆದು ರಾಜೀವಗಾಂಧಿಯವರ ರಾಜೀನಾಮೆಯ ಮಹತ್ವ ತಿಳಿಸಿಹೇಳಬೇಕೆಂದು ಎಡಪಕ್ಷಗಳು ಕರೆಕೊಟ್ಟಿದ್ದು, ಅದನ್ನು ಯಶಸ್ವಿಗೊಳಿಸಬೇಕೆಂದು ಕರೆ ನೀಡಿದೆ.


2) ರಾಜೀವ್‌ಗಾಂಧಿ ಸರ್ಕಾರದ ರಾಜೀನಾಮೆಯನ್ನು ಸರ್ಕಾರದ ರಾಜೀನಾಮೆಯನ್ನು ಒತ್ತಾಯಿಸಲು ಆಗಸ್ಟ್ 24 ರಿಂದ 30ರವರೆಗೆ ದೇಶಾದ್ಯಂತ ತೀವ್ರ ಪ್ರಚಾರ ಪ್ರಕ್ಷೋಭೆನಡೆಸಬೇಕೆಂದು ಸಿ.ಪಿ.ಐ.(ಎಂ) ಪಕ್ಷದ ಕೇಂದ್ರ ಸಮಿತಿ ಕರೆಕೊಟ್ಟಿದ್ದು, ಕರ್ನಾಟಕದಲ್ಲಿಯೂ ಅದನ್ನು ಯಶಸ್ವಿ ಗೊಳಿಸಬೇಕೆಂದು ಸಭೆ ನಿರ್ಧರಿಸಿತು.

3) ಸಾರ್ವಜನಿಕ ಹಣದ ಉಳಿತಾಯದ ದೃಷ್ಟಿಯಿಂದ ಲೋಕಸಭೆ ಮತ್ತು ವಿಧಾನ ಸಭೆಗಳ ಚುನಾವಣೆಗಳನ್ನು ಏಕಕಾಲದಲ್ಲೇ ನಡೆಸಬೇಕೆಂದು ಪಕ್ಷ ಅಭಿಪ್ರಾಯ ಪಟ್ಟಿದೆ.

4) ಅಖಿಲ ಭಾರತ ಕಿಸಾನ್ ಸಭಾದ ಕರೆಯ ಮೇರೆಗೆ ಕರ್ನಾಟಕ ಪ್ರಾಂತ ರೈತ ಸಂಘದ ನೇತೃತ್ವದಲ್ಲಿನ ಸವದತ್ತಿ, ಆಳಂದ, ಬಾಗೇಪಲ್ಲಿ ಮತ್ತು ಗೌರಿಬಿದನೂರು ತಾಲ್ಲೂಕುಗಳಲ್ಲಿ ಭೂಮಿಆಕ್ರಮಣ ಚಳುವಳಿ ನಡೆಯುತ್ತಿದ್ದು; ಚಳುವಳಿಗಾರರ ಮೇಲೆ ಅರಣ್ಯಾಧಿಕಾರಿಗಳು, ಗೂಂಡಾ ಜನರು ನಡೆಸುತ್ತಿರುವ ದಬ್ಬಾಳಿಕೆಯನ್ನು ರಾಜ್ಯ ಸಮಿತಿ ಖಂಡಿಸಿದೆ. ಸವದತ್ತಿಯಲ್ಲಿ ರೈತರ (ಹಲವಾರು ಮಹಿಳೆಯರು) ನ್ನು ಬಂಧಿಸಿರುವುದನ್ನು ಖಂಡಿಸಲಾಗಿದೆ. ಭೂಮಿ ಆಕ್ರಮಣದ ಚಳುವಳಿಯನ್ನು ಮುಂದು ವರಿಸಬೇಕೆಂದೂ, ಪಕ್ಷ ಅದಕ್ಕೆ ಸಂಪೂರ್ಣ ಬೆಂಬಲ ನೀಡಬೇಕೆಂದು ಕರೆ ನೀಡಿದೆ.

5) ಕಳೆದ ಕೆಲವು ದಿನಗಳಿಂದ ರಾಜ್ಯದ ಹಲವಾರು ಪ್ರದೇಶಗಳಲ್ಲಿ ಅತಿ ಹೆಚ್ಚಿನ ಮಳೆಯಿಂದ, ನೆರೆಹಾವಳಿಯಿಂದ ಬಹಳಷ್ಟು ಹಾನಿಯಾಗಿದ್ದು, ಹಾನಿಗೊಳಗಾದವರಿಗೆ ಸಕಾಲದಲ್ಲೇ ಪರಿಹಾರ ನೀಡಬೇಕೆಂದು ರಾಜ್ಯ ಸಮಿತಿ ಸರ್ಕಾರವನ್ನು ಒತ್ತಾಯಿಸಿದೆ.

(ಎನ್.ಕೆ. ಉಪಾಧ್ಯಾಯ)
ಕಾರ್ಯದರ್ಶಿ ಮಂಡಳಿ ಸದಸ್ಯ
ಸಿ.ಪಿ.ಐ.(ಎಂ), ರಾಜ್ಯ ಸಮಿತಿ.



ಬೆಂದು ಐಕ್ಯತೆ ತಿರುವು

ಸ್ವಾತಂತ್ರ್ಯಾ ನಂತರ, ಸಂವಿಧಾನದ ಘೋಷಣೆಯ ನಂತರ ಹಿಂದೆಂದೂ ಒಂದು ಚುನಾಯಿತ ಬಹುಮತ ಎಲ್ಲಾ ಪ್ರಜಾಪ್ರಭುತ್ವ ನೀತಿಗಳ ಉಲ್ಲಂಘನೆಗಳನ್ನು ಪ್ರತಿಭಟಿಸಿ ವಿರೋಧಿ ಸದಸ್ಯರು ರಾಜೀನಾಮೆ ನೀಡುವಂತೆ ಮಾಡಿರಲಿಲ್ಲ. ಇದು ಕಳೆದ ಐದು ವರ್ಷಗಳಲ್ಲಿ ಸಂವಿಧಾನದ ಪ್ರಜಾಪ್ರಭುತ್ವ ಸ್ವರೂಪವನ್ನು ರಕ್ಷಿಸುವ ನೀತಿಗಳು, ಪರಂಪರೆಗಳು ಮತ್ತು ವಿಧಿಗಳನ್ನು ನಾಶ ಮಾಡಲು ಸರ್ವ ಪ್ರಯತ್ನ ನಡೆಸಿದ ಹೆಚ್ಚುತ್ತಿರುವ ಸರ್ವಾಧಿಕಾರಶಾಹಿಯ ಒಂದು ಕ್ರಮ. ದೇಶದ ಐಕ್ಯತೆ, ಆಡಳಿತದ ಶುದ್ಧತೆಯನ್ನು ತಟ್ಟುವ ಪ್ರಮುಖ ಪ್ರಶ್ನೆಯ ಮೇಲೆ ವಿರೋಧ ಪಕ್ಷಗಳೊಂದಿಗೆ ಅದರ ವರ್ತನೆ, ಸಂಸತ್ತಿನಲ್ಲಿ ಅದು ವ್ಯವಹಾರ ನಡೆಸುವ ರೀತಿ ವಿರೋಧ ಪಕ್ಷಗಳ ಚುನಾಯಿತ ಮುಖಂಡರಿಗೆ ಮಾಡಿರುವ ಒಂದು ಮುಖಭಂಗ. ಸಂಸತ್ತನ್ನು ಏಕ ಪಕ್ಷ ಸರ್ವಾಧಿಕಾರಶಾಹಿ ಆಳ್ವಿಕೆಯನ್ನಾಗಿ ಪರಿವರ್ತಿಸುವ ಸಾಧನವಾಗಿ ಬಹುಮತವನ್ನು ಪರಿವರ್ತಿಸಲಾಯಿತು. ಅದರಲ್ಲಿ ವಿರೋಧ ಪಕ್ಷಗಳಿಗೆ ಏನೂ ಪಾತ್ರವುಳಿದಿರಲಿಲ್ಲ.

ಕಳೆದ ನಾಲ್ಕೆದು ವರ್ಷಗಳಿಂದ ಈ ಸಮರ ಸಾಗುತ್ತಿದೆ. ಅಗಾಧ ಕಮಿಷನ್ ಮತ್ತು ರಕ್ಷಣಾ ಹಿತಾಸಕ್ತಿಗಳಿಗೆ ಕುಂದು ತಂದಿರುವ ಬೋಫೋರ್ಸ್ ಹಗರಣ ಬಯಲಾದ ನಂತರ ಇದು ಇನ್ನಷ್ಟು ತೀವ್ರಗೊಂಡಿತು. ಇದರಲ್ಲಿ ಪುರಾವೆಗಳ ಸಹಿತ ಸಿಕ್ಕಿ ಬಿದ್ದ ಸರಕಾರ ಹಲವು ರೀತಿಯಲ್ಲಿ ನುಣುಚಿಕೊಳ್ಳಲು ಪ್ರಯತ್ನಿಸಿತು. ಅರೆ ಸತ್ಯಗಳನ್ನು ಹೇಳಿತು. ಕೊನೆಯದಾಗಿ ಸುಳ್ಳುಗಳನ್ನೇ ಹೇಳಿತು. ಹಿಂದಿನ ಯಾವ ಪ್ರಧಾನ ಮಂತ್ರಿಯೂ ಇಂತಹ ಹಗರಣದಲ್ಲಿ ಅತ್ಯಂತ ದೂರದಿಂದ ಕೂಡ ಸಿಲುಕಿಕೊಂಡಿರಲಿಲ್ಲ. ರಾಜೀವರಂತೆ ಹಿಂದೆಂದೂ ಪ್ರಧಾನ ಮಂತ್ರಿ ಪದದ ಪ್ರತಿಷ್ಠೆ, ಗೌರವಕ್ಕೆ ಕುಂದು ತಂದಿರಲಿಲ್ಲ.

ಸಿ.ಎ.ಜಿ. ವರದಿಯನ್ನು ಸಂಸತ್ತಿನಲ್ಲಿ ಮಂಡಿಸಿದಾಗ ಸನ್ನಿವೇಶ ತಾರಕಕ್ಕೇರಿತು. ಈ ವರದಿ ಸರಕಾರದ ತಪ್ಪುಗಳ ಮೇಲೆ ಒಂದು ತೀವ್ರತಮ ತೀರ್ಪು. ರಕ್ಷಣೆಗೆ ಬೋಫೋರ್ಸ್ ತೋಪಿನ ಆಯ್ಕೆಯ ಬಗ್ಗೆ ಅದು ಗಂಭೀರ ಸಂಶಯ ವ್ಯಕ್ತಪಡಿಸಿದೆ. ರಾಜೀವಗಾಂಧಿಯ ಅಡಿಯಲ್ಲಿ ರಕ್ಷಣಾ ಸಚಿವಾಲಯ ಬೋಫೋರ್ಸ್ ಪರವಾಗಿ ನಿರ್ಣಯಿಸುವ 15 ದಿನಗಳ ಹಿಂದಿನವರೆಗೂ ಎಲ್ಲಾ ವಲಯಗಳೂ ಎಲ್ಲಾ ಸಮಯದಲ್ಲೂ ಫ್ರೆಂಚ್ ತೋಪು ಉತ್ತಮವೆಂದು ಹೇಳಿದ್ದವು. ಆ ಹದಿನೈದು ದಿನಗಳಲ್ಲಿ ಏನೋ ರಹಸ್ಯ ನಡೆಯಿತು. ವ್ಯವಹಾರ ಬೋಫೋರ್ಸ್ ಪರವಾಗಿ ಪೂರ್ಣಗೊಂಡಿತು. ಅದೇನು ನಡೆಯಿತೆಂದು ಜನರಿಗೆ ಗೊತ್ತಿದೆ.

ಪ್ರಜಾಪ್ರಭುತ್ವ ನಡವಳಿಕೆಯಲ್ಲಿ ನೈತಿಕವಾಗಿ ರಾಜೀವ್‌ಗಾಂಧಿಗಿದ್ದ ಏಕೈಕ ಪ್ರಾಮಾಣಿಕ ದಾರಿಯೆಂದರೆ ರಾಜೀನಾಮೆ ಸಲ್ಲಿಸುವುದು ಮತ್ತು ವರದಿಯಲ್ಲಿನ ಟೀಕೆಯನ್ನು ಒಪ್ಪಿಕೊಳ್ಳುವುದು. ಬದಲಾಗಿ ಆಳುವ ಪಕ್ಷ ಸಿ.ಎ.ಜಿ.ಯನ್ನು ಖಂಡಿಸಲು, ಮಹಾನಿಯಂತ್ರಕ ಮತ್ತು ಲೆಕ್ಕ ಪರಿಶೋಧಕರ ಮೇಲೆ ವೈಯಕ್ತಿಕ ದೋಷ ಹೊರಿಸಲು ನಿರ್ಧರಿಸಿತು. ಇದು ಒಂದು ಪರಿಪೂರ್ಣ ಸರ್ವಾಧಿಕಾರಿ ವಿಧಾನ. ಅವರು ರಾಜೀನಾಮೆಯ ನ್ಯಾಯಬದ್ಧ ಬೇಡಿಕೆಯನ್ನು ತಿರಸ್ಕರಿಸಿ ಪ್ರಧಾನ ಮಂತ್ರಿಗಳ ಪಾಪಕ್ಕೆ ಬಣ್ಣ ಬಳಿದು ಮರೆಮಾಡಲು ವರದಿಯ ಮೇಲೆ ಚರ್ಚೆ ನಡೆಸಲು ನಿರ್ಧರಿಸಿದರು.

ಜನತೆಯ ಸಮ್ಮುಖ ಈ ಕೀಳ್ಮಟ್ಟದ ಆಟವನ್ನು ಬಯಲಿಗೆಳೆಯುವುದು ಮತ್ತು ಪ್ರಧಾನ ಮಂತ್ರಿಗಳು ಸರಕಾರದ ನೇತೃತ್ವವಹಿಸುವ ಎಲ್ಲಾ ರಾಜಕೀಯ, ನೈತಿಕ ನೆಲೆ ಕಳಕೊಂಡಿದ್ದಾರೆ. ಅವರ ನೇತೃತ್ವದ ಸರಕಾರ ಜನತೆಯ ಮೇಲೆ ಇನ್ನಷ್ಟು ಅನಾಹುತಗಳನ್ನು ಹೇರುವುದನ್ನು ಮುಂದುವರಿಸುತ್ತದೆ, ದೇಶದ ಭದ್ರತೆಗೆ ಮತ್ತಷ್ಟು ಅಪಾಯ ತರುತ್ತದೆ ಎಂಬುದನ್ನು ಶಕ್ತಿಯುತವಾಗಿ ಜನತೆಗೆ ತಿಳಿಸುವುದು ವಿರೋಧ ಪಕ್ಷಗಳಿಗೆ ಈಗ ಉಳಿದಿದ್ದ ಏಕ ಮಾತ್ರ ಮಾರ್ಗವಾಗಿತ್ತು.

ಸಾರ್ವಭೌಮ ಜನತೆಗೆ ಮಾಡಿರುವ ಮನವಿ

ಲೋಕಸಭೆಯನ್ನು ತ್ಯಜಿಸಿ ಸಿ.ಎ.ಜಿ. ವರದಿಯ ಮೇಲೆ ಕಾಂಗ್ರೆಸ್(ಐ) ಏಕ ಪಾತ್ರಾಭಿನಯ ನಡೆಸಲು ಬಿಡುವ ವಿರೋಧ ಪಕ್ಷಗಳ ನಿರ್ಣಯ ಜನತೆಯ ವಿಶ್ವಾಸ ಹಾಗೂ ಆದೇಶಕ್ಕೆ ಆಘಾತ ತಂದಿರುವ ಕಾಂಗ್ರೆಸ್(ಐ)ನ ಬಹುಮತದ ವಿರುದ್ಧ ದೇಶದ ಜನತೆಗೆ ಮಾಡಿರುವ ಮನವಿ. ಇದು ಅತ್ಯುಚ್ಚ ಅಧಿಕಾರಿಗೆ, ಭಾರತದ ಸಾರ್ವಭೌಮ ಜನತೆಗೆ ಮಾಡಿಕೊಂಡಿರುವ ಮನವಿ. ಆಳುವ ಪಕ್ಷದ ದುರಾಡಳಿತ ಮತ್ತು ಭ್ರಷ್ಟಾಚಾರದತ್ತ ಅವರ ಗಮನ ಸೆಳೆದಿರುವ ಮನವಿ. ಈ ಪ್ರತಿಭಟನೆಯ ಪ್ರಜಾಸತ್ತಾತ್ಮಕ ಸ್ವರೂಪವನ್ನು ಅದರ ಸಮರ್ಥನೀಯ, ಸಾರ್ವಭೌಮ ಭಾಷೆಯನ್ನು ಪ್ರಶ್ನಿಸಲು ಕಾಂಗ್ರೆಸ್(ಐ) ಮುಖಂಡರು ಹೊಸೆಯುತ್ತಿರುವ, ಟಿ.ವಿ., ರೇಡಿಯೋಗಳಲ್ಲಿ ಪ್ರಸಾರಗೊಳ್ಳುತ್ತಿರುವ ಟೊಳ್ಳು ವಾದಗಳು ಅನಿರೀಕ್ಷಿತವಾಗಿ ಸಿಕ್ಕಿಬಿದ್ದವರ ಬೊಬ್ಬಾಟವಷ್ಟೆ.

ರಾಜೀನಾಮೆಗಳು ಸಂಸದೀಯ ವೇದಿಕೆಯಿಂದ ಪಲಾಯನ ಮಾತ್ರವೇ ಅಲ್ಲ, ಮೇಲಿನ ಅಧಿಕಾರಿಗೆ ಸಲ್ಲಿಸಿರುವ ಮನವಿ ಎಂಬುದು ರಾಜೀವ್ ಗಾಂಧಿ ಮತ್ತು ಅವರ ಸಂಸದೀಯ ಸಹಯೋಗಿಗಳಿಗೆ ಅರ್ಥವಾಗದಿದ್ದರೆ ಅವರು ಪ್ರಜಾಪ್ರಭುತ್ವದ ಬಗ್ಗೆ ಏನೂ ಅರಿತಿಲ್ಲ.

ಪುಟ 5 ನೋಡಿ

ಭಾರತ್ ಬಂದ್ ಮೂಲಕ ಜನತೆಯ ನಿರ್ಣಾಯಕ ಸಂದೇಶ ಸಾರೋಣ

ಎಡಪಕ್ಷಗಳ ಮುಖಂಡರ ಕರೆ

ಲೆಕ್ಕ ಪತ್ರಗಳ ಮಹಾನಿಯಂತ್ರಕರು ಮತ್ತು ಲೆಕ್ಕಪರಿಶೋಧಕರ ವರದಿಯನ್ನು ಕುರಿತಂತೆ ರಾಜೀವ್‌ಗಾಂಧಿ ಸರಕಾರದ ನಿಲುವನ್ನು ಬಯಲಿಗೆಳೆಯುವ ಪ್ರಕ್ಷೋಭೆಯನ್ನು ಮುಂದುವರಿಸಲು ಮತ್ತು ರಾಜೀವ್‌ಗಾಂಧಿ ಸರಕಾರದ ರಾಜಿನಾಮೆಗೆ ಒತ್ತಾಯಿಸಲು ಒಂದು ಸಾಮೂಹಿಕ ಪ್ರಕ್ಷೋಭೆಯನ್ನು ಆರಂಭಿಸಲು ನಾಲ್ಕು ಎಡಪಕ್ಷಗಳು ನಿರ್ಧರಿಸಿವೆ. ಆಗಸ್ಟ್ 1 ರಿಂದ ಆರಂಭವಾಗುವ ಈ ಚಳುವಳಿಯ ಕೊನೆಯಲ್ಲಿ ಆಗಸ್ಟ್ 30 ರಂದು ಭಾರತ್ ಬಂದ್ ನಡೆಸಬೇಕೆಂದು ಜುಲೈ 25ರಂದು ನವದೆಹಲಿಯಲ್ಲಿ ಸಭೆ ಸೇರಿದ ಸಿ.ಪಿ.ಐ. (ಎಂ), ಸಿ.ಪಿ.ಐ., ಫಾರ್ವರ್ಡ್ ಬ್ಲಾಕ್ ಹಾಗೂ ಆರ್.ಎಸ್.ಪಿ. ಮುಖಂಡರು ನಿರ್ಧರಿಸಿದ್ದಾರೆ.

ಈ ಸಭೆಯಲ್ಲಿ, ಲೋಕಸಭೆಯಲ್ಲಿ ಎಲ್ಲಾ ವಿರೋಧ ಪಕ್ಷಗಳ ಸದಸ್ಯರ ರಾಜೀನಾಮೆಯ ನಂತರದ ಸನ್ನಿವೇಶವನ್ನು ಪರಾಮರ್ಶಿಸಲಾಯಿತು. ಈ ಸದಸ್ಯರ ನೀತಿಬದ್ಧವಾದ ಹಾಗೂ ಧೀರ ನಿರ್ಧಾರಕ್ಕಾಗಿ ಅವರನ್ನು ಅಭಿನಂದಿಸಲಾಯಿತು. ಅದೇ ರೀತಿ ರಾಜ್ಯಸಭೆಯಲ್ಲಿ, ರಾಜೀವ್ ಸರ್ಕಾರದ ಸರ್ವಾಧಿಕಾರಿ ಧೋರಣೆಗಳನ್ನು ಬಲ್ಲಕಿಯಿಂದ ವಿರೋಧಿಸುವ ಎಂ.ಪಿ.ಗಳ ನಿರ್ಧಾರವನ್ನು ಪ್ರಶಂಸಿಸಲಾಯಿತು.

ಲೋಕಸಭೆಗೆ ರಾಜೀನಾಮೆ ನೀಡಿದ ಎಡಪಕ್ಷಗಳ ಸದಸ್ಯರು ಆಗಸ್ಟ್ 1ರಿಂದ ಆ ವರೆಗೆ ತಮ್ಮ ಚುನಾವಣಾ ಕ್ಷೇತ್ರಗಳಲ್ಲಿ ಸಂಚರಿಸಿ ರಾಜಿನಾಮೆಗೆ ಕಾರಣವನ್ನು ಜನತೆಗೆ ವಿವರಿಸುವರೆಂದೂ ಸಭೆಯಲ್ಲಿ ನಿರ್ಧರಿಸಲಾಯಿತು.

ಆಗಸ್ಟ್ 9ರಂದು ರ್‍ಯಾಲಿಗಳು, ಮತಪ್ರದರ್ಶನಗಳ ಮೂಲಕ ಸಿ.ಎ.ಜಿ ದೇಶಾದ್ಯಂತ "ಭಾರತ ರಕ್ಷಿಸಿ ದಿನ"ವನ್ನು ಎಡಪಕ್ಷಗಳು ಆಚರಿಸಲಿವೆ.

ಈ ಕೆಳಗಿನ ಏಳು ಬೇಡಿಕೆಗಳ ಮೇಲೆ ಭಾರತ್ ಬಂದ್ ಆಚರಿಸಲು ಎಡಪಕ್ಷಗಳ ಈ ಸಭೆ ಕರೆ ನೀಡಿತು:

1) ರಾಜೀವ್‌ಗಾಂಧಿ ಸರಕಾರದ ರಾಜಿನಾಮೆ ಮತ್ತು ಭ್ರಷ್ಟ ರಕ್ಷಣಾ ವ್ಯವಹಾರಗಳ ಮೂಲಕ ದೇಶದ ಭದ್ರತೆಗೆ ಅಪಾಯ ವೊಡ್ಡಿರುವವರನ್ನು ಪತ್ತೆ ಹಚ್ಚಿ ಶಿಕ್ಷಿಸುವುದು.

2) ರಾಷ್ಟ್ರೀಯ ಐಕ್ಯತೆಯ ರಕ್ಷಣೆ, ಅಲ್ಪಸಂಖ್ಯಾತರ ಹಕ್ಕುಗಳ ರಕ್ಷಣೆ ಮತ್ತು ಕೋಮುವಾದೀ ಮತ್ತು ವಿಚ್ಛಿದ್ರಕಾರಿ ಶಕ್ತಿಗಳನ್ನು ದೂರೀಕರಿಸಬೇಕು.

3) ಭಾರತದ ಆರ್ಥಿಕದ ಮೇಲೆ ಸಾಮ್ರಾಜ್ಯಶಾಹಿಗಳ ಒತ್ತಡಕ್ಕೆ ಪ್ರತಿರೋಧ. ಬೆಲೆಯೇರಿಕೆ ನಿಲ್ಲಿಸಬೇಕು ಮತ್ತು ಕೆಲಸದ ಹಕ್ಕನ್ನು ಮೂಲಭೂತ ಹಕ್ಕಾಗಿ ಮಾಡಬೇಕು.

4) ಕ್ಲೋಷರ್‌ಗಳು, ಲಾಕೌಟ್‌ಗಳು ಮತ್ತು ರಿಟ್ರೆಂಚ್‌ಮೆಂಟ್‌ಗಳು ತಕ್ಷಣ ನಿಲ್ಲಬೇಕು. ಮುಚ್ಚಿರುವ ಕಾರ್ಖಾನೆಗಳನ್ನೆಲ್ಲಾ ತೆರೆಯಬೇಕು.

5) ಭೂಸುಧಾರಣೆಗಳ ಜಾರಿ, ರೈತರ ಬೆಳೆಗೆ ನ್ಯಾಯಪೂರ್ಣ ಬೆಲೆ, ಕೃಷಿ ಕಾರ್ಮಿಕರಿಗೆ ಮತ್ತು ಇತರ ಅಸಂಘಟಿತ ಕಾರ್ಮಿಕರಿಗೆ ಕನಿಷ್ಠ ಕೂಲಿ.

6) ಹರಿಜನ, ಗಿರಿಜನ, ಮಹಿಳೆಯರ ಮೇಲೆ ಅತ್ಯಾಚಾರಗಳುಕೊನೆಗೊಳ್ಳಬೇಕು.

7) ಕಾಂಗ್ರೆಯೇತರ ಸರ್ಕಾರಗಳ ವಿರುದ್ಧ ಪಕ್ಷಪಾತ, ರಾಜ್ಯಗಳ ಈಗಿರುವ ಅಧಿಕಾರಗಳ ಮೇಲೆ ಅತಿಕ್ರಮಣ ನಿಲ್ಲಬೇಕು- ರಾಜ್ಯಗಳಿಗೆ ಹೆಚ್ಚಿನ ಅಧಿಕಾರಗಳು.

ಕಾಂಗ್ರೆಸ್ (ಐ) ಆಳ್ವಿಕೆ ದೇಶದಲ್ಲಿ ಮುಂದುವರಿಯುವುದರ ಅಪಾಯಕಾರಿ ಪರಿಣಾಮಗಳನ್ನು ಮನಗಂಡು, ಮುಂದೆ ಬಂದು ಭಾರತ ಬಂದ್‌ಗೆ ಪೂರ್ವಕ ಬೆಂಬಲ ನೀಡಬೇಕೆಂದು, ಬಂದ್‌ನಲ್ಲಿ ಭಾಗವಹಿಸಬೇಕೆಂದು ಎಲ್ಲಾ ಜನ ವಿಭಾಗಗಳನ್ನು ಎಡಪಕ್ಷಗಳು ವಿನಂತಿಸಿ ಕೊಂಡಿವೆ.

ಈ ಬಂದ್‌ನ ಮೂಲಕ ಸರ್ವಾಧಿಕಾರಿ ಮತ್ತು ಭ್ರಷ್ಟ ಕಾಂಗ್ರೆಸ್(ಐ) ಆಳರಸರು ರಾಜೀನಾಮೆ ನೀಡಲೇಬೇಕೆಂಬ ನಿರ್ಣಾಯಕ ಸಂದೇಶವನ್ನು ಈ ಬಂದ್ ಮೂಲಕ ಭಾರತೀಯ ಜನತೆಯ ಶಕ್ತಿಶಾಲೀ ದನಿ ಸಾರಲಿ ಎಂದು ಇ.ಎಂ.ಎಸ್. ನಂಬೂದರಿ ಪ್ಪಾಡ್, ಇಂದ್ರಜಿತ್ ಗುಪ್ತ, ತ್ರಿದಿಬ್ ಚೌಧುರಿ ಮತ್ತು ಚಿತ್ತಬಸುರವರು ಸಹಿ ಹಾಕಿರುವ ಈ ಹೇಳಿಕೆ ಹಾಕಿಸಿದೆ.

ಕನಿಷ್ಠ ಕೂಲಿ-ದೆಹಲಿ ಹೋರಾಟದ ಅನುಭವಗಳು

ಕಳೆದ ವರ್ಷದ ನವೆಂಬರ್ 22 ರಿಂದ 28 ರವರೆಗೆ ದೆಹಲಿ ಮತ್ತು ಘಜಿಯಾಬಾದ್‌ಗಳಲ್ಲಿ ನಡೆದ 13 ಲಕ್ಷ ಕಾರ್ಮಿಕರ 7 ದಿನಗಳ ಮುಷ್ಕರ ಭಾರತದ ಅಸಂಘಟಿತ ಕಾರ್ಮಿಕರ ಹೋರಾಟದ ಚರಿತ್ರೆಯಲ್ಲಿಯೇ ಅವಿಸ್ಮರಣೀಯ ಘಟನೆಯಾಗಿ ಪರಿಣಮಿಸಿದೆ. ಅಸಂಘಟಿತ ಕಾರ್ಮಿಕರ ಹೋರಾಟಕ್ಕೆ ಒಂದು ಹೊಸದಿಕ್ಕನ್ನು ತೋರಿಸಿದೆ. ಇಡೀ ದೇಶದ ಅಸಂಘಟಿತ ಕಾರ್ಮಿಕ ವರ್ಗ ಕನಿಷ್ಠ ವೇತನಕ್ಕೋಸ್ಕರ ಚಳುವಳಿಯನ್ನು ಆರಂಭಿಸಲು ಸ್ಫೂರ್ತಿ ನೀಡಿದೆ.

ಈಗ ನಮ್ಮ ರಾಜ್ಯದಲ್ಲೂ ಕನಿಷ್ಠ ವೇತನಕ್ಕಾಗಿ ಅಸಂಘಟಿತ ಕಾರ್ಮಿಕರು ಸಿ.ಐ.ಟಿ.ಯು ನಾಯಕತ್ವದಲ್ಲಿ ಹೋರಾಟವನ್ನು ಆರಂಭಿಸಿದ್ದಾರೆ. ಹೋರಾಟವು ಅನೇಕ ಎಡರು ತೊಡರುಗಳನ್ನು ಎದುರಿಸಿ ಮುನ್ನಡೆಯ ಬೇಕಾಗಿದೆ. ಅಸಂಘಟಿತ ಕಾರ್ಮಿಕರ ನಡುವೆ ತೀವ್ರವಾದ ಪ್ರಚಾರ, ಪ್ರತಿಭಟನೆಗಳನ್ನು ನಡೆಸಿ ಅವರುಗಳನ್ನು ಸಂಘಟಿಸಿ ಹೋರಾಟಕ್ಕೆ ಸಜ್ಜುಗೊಳಿಸಬೇಕಾಗಿದೆ. ನಾವು ರೂಪಿಸುವ ಹೋರಾಟದ ವಿಧಾನಗಳ ಬಗ್ಗೆ ಅನುಸರಿಸಬೇಕಾದ ತಂತ್ರಗಳ ಬಗ್ಗೆ ಸ್ಪಷ್ಟವಾದ ತಿಳುವಳಿಕೆಯನ್ನಿಟ್ಟುಕೊಂಡು ಕಾರ್ಯರಂಗಕ್ಕಿಳಿಯ ಬೇಕಾಗುತ್ತದೆ. ಈ ದಿಕ್ಕಿನಲ್ಲಿ ದೆಹಲಿ ಹೋರಾಟದ ಅನುಭವಗಳು ನಮಗೆ ಮಾರ್ಗದರ್ಶನ ಮಾಡುತ್ತವೆ. ದೆಹಲಿ ಹೋರಾಟದ ಅಮೋಘ ಯಶಸ್ಸಿಗೆ ಕಾರಣವಾಗಿರುವ ಕೆಲವು ವಿಶಿಷ್ಟ ಅಂಶಗಳ ಬಗ್ಗೆ ಈ ಲೇಖನದಲ್ಲಿ ಪ್ರಸ್ತಾಪಿಸಲಾಗಿದೆ.

ಬೇಡಿಕೆಗಳು

ದೆಹಲಿ ಹೋರಾಟದಲ್ಲಿ ರೂಪಿಸಲಾದ ಬೇಡಿಕೆಗಳು ಹೆಚ್ಚು ಪ್ರಸ್ತುತ ಸ್ವರೂಪ ಪಡೆದಿದ್ದು ಕಾರ್ಮಿಕರನ್ನು ತೀವ್ರವಾಗಿ ಸೆಳೆಯಿತು.

1. ಕನಿಷ್ಠ ವೇತನ ರೂ.1050 ಸಿಗಬೇಕು.
2. ತುಟ್ಟಿಭತ್ಯೆ ಪ್ರತಿ ಪಾಯಿಂಟಿಗೆ 2 ರೂ. ಹೆಚ್ಚುಬೇಕು.
3. ಕಡಿಮೆ ವೆಚ್ಚದಲ್ಲಿ ವಸತಿ ಸೌಕರ್ಯ
4. ಮಹಿಳಾ ಕಾರ್ಮಿಕರಿರುವ ಕಡೆ ಶಿಶುಪಾಲನಾ ಕೇಂದ್ರಗಳು.
5. ಕಾಂಟ್ರ್ಯಾಕ್ಟ್ ಪದ್ಧತಿಯನ್ನು ರದ್ದುಗೊಳಿಸಬೇಕು.
6. ಮುಚ್ಚಿರುವ ಕಾರ್ಖಾನೆಗಳನ್ನು ಪುನರಾರಂಭಿಸಬೇಕು.
7. ಬೀಗ ಮುದ್ರೆ ಮತ್ತು ರಿಟ್ರೆಂಚ್‌ಮೆಂಟ್ ನಿಲ್ಲಬೇಕು.
8. ಕಾರ್ಮಿಕರ ಹೋರಾಟದಲ್ಲಿ ಪೋಲೀಸರ ಪ್ರವೇಶ ನಿಲ್ಲಬೇಕು.
9. ದೆಹಲಿ ಆಡಳಿತದ ಕಾರ್ಮಿಕ ಇಲಾಖೆಯಲ್ಲಿನ ಭ್ರಷ್ಟಾಚಾರ ಕೊನೆಗೊಳ್ಳಬೇಕು.
10. ಜಾರಿಗೆ ತರಲು ಉದ್ದೇಶಿಸಲಾಗಿರುವ ಎಲ್ಲಾ ಕಾರ್ಮಿಕ ವಿರೋಧಿ ಮಸೂದೆಗಳನ್ನು ಹಿಂತೆಗೆದುಕೊಳ್ಳಬೇಕು.

ಇವು ದೆಹಲಿ ಹೋರಾಟದ ಪ್ರಮುಖ ಬೇಡಿಕೆಗಳಾಗಿದ್ದವು. ಅತ್ಯಂತ ದಾರುಣ ಪರಿಸ್ಥಿತಿಯಲ್ಲಿ ಜೀವಿಸುತ್ತಿದ್ದ ದೆಹಲಿ ಮತ್ತು ಅದರ ಸಮೀಪದ ಘಜಿಯಾಬಾದ್ ಪಟ್ಟಣದ ಅಸಂಘಟಿತ ಕಾರ್ಮಿಕರಿಗೆ ಬೇಡಿಕೆಗಳು ಅನಿವಾರ್ಯ ವೆನಿಸುವಂತಾಗಿ ಹೋರಾಟಕ್ಕೆ ಹೊಸ ಚಾಲನೆಯನ್ನೇ ನೀಡಿತು.

ಇತರ ಕಾರ್ಮಿಕ ಸಂಘಟನೆಗಳ ಬಣ್ಣ ಬಯಲಾಯಿತು.

ಏಳು ದಿನಗಳ ಯಶಸ್ವೀ ಮುಷ್ಕರವು ಇತರ ಕೇಂದ್ರ ಕಾರ್ಮಿಕ ಸಂಘಟನೆಗಳ ಸಂದರ್ಭಸಾಧಕ ಮತ್ತು ಪಲಾಯನವಾದೀ ನೀತಿಯನ್ನು ಬಹಿರಂಗ ಗೊಳಿಸಿತು. ಈ ಪ್ರದೇಶದ ಕಾರ್ಮಿಕರು ದೀರ್ಘ ಹೋರಾಟಕ್ಕೆ ಸಿದ್ಧರಾಗಿಲ್ಲ, ಎಂಬ ಕಾರಣ ನೀಡಿ ಜಂಟೀ ಹೋರಾಟಕ್ಕಾಗಿ ಸಿ.ಐ.ಟಿ.ಯು. ಮುಂದಿಟ್ಟ ಸೂಚನೆಗಳನ್ನೆಲ್ಲವನ್ನೂ ಈ ಕೇಂದ್ರ ಕಾರ್ಮಿಕ ಸಂಘಟನೆಗಳು ತಿರಸ್ಕರಿಸಿದವು.

ವಾಸ್ತವವಾಗಿ ದೆಹಲಿಯಲ್ಲಿ ನಡೆದ ಏಳು ದಿನಗಳ ಮುಷ್ಕರಕ್ಕೆ ಹಿನ್ನೆಲೆಯಾಗಿ 1987 ರ ಜನವರಿ 16 ರಂದು ದೆಹಲಿ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ಅಸಂಘಟಿತ ಕಾರ್ಮಿಕರ ಒಂದು ದಿನದ ಮುಷ್ಕರ ನಡೆಯಿತು. ಆ ದಿನದ ಮುಷ್ಕರವೂ ಸಹ ಮೇಲ್ಕಂಡ ಬೇಡಿಕೆಗಳನ್ನೇ ಒಳಗೊಂಡಿತ್ತು. INTUC ಒಂದನ್ನು ಉಳಿದು ಮಿಕ್ಕೆಲ್ಲಾ ಕೇಂದ್ರ ಕಾರ್ಮಿಕ ಸಂಘಟನೆಗಳ ಜಂಟೀ ಕರೆಯ ಮೇರೆಗೆ ಈ ಮುಷ್ಕರ ನಡೆಯಿತು. ದೆಹಲಿ ಆಡಳಿತ ಕನಿಷ್ಠ ವೇತನವನ್ನು ಕೊಂಚ ಮಾತ್ರವೇ ಹೆಚ್ಚಿಸಿತು. ಇದನ್ನು ಖಂಡಿಸಿ ಸಿ.ಐ.ಟಿ.ಯು. ಹೋರಾಟವನ್ನು ತೀವ್ರ ಗೊಳಿಸುವ ಸಲುವಾಗಿ ಮೂರು ದಿನಗಳ ಮುಷ್ಕರ ನಡೆಸಲು ಸೂಚನೆ ಕೊಟ್ಟಿತು. ಆದರೆ ಇತರ ಸಂಘಟನೆಗಳು ಕೊಟ್ಟಿತು. ಆದರೆ ಇತರ ಸಂಘಟನೆಗಳು ಇದಕ್ಕೆ ಒಪ್ಪಲಿಲ್ಲ. ಆಗ ಸಿ.ಐ.ಟಿ.ಯು. ಅನಿವಾರ್ಯವಾಗಿ ಮೂರು ದಿನಗಳ ಮುಷ್ಕರಕ್ಕೆ ಕರೆ ನೀಡಿತು.

1987 ರ ನವೆಂಬರ್ 25 ರಿಂದ 27 ರ ವರೆಗೆ ನಡೆದ ಮೂರು ದಿನಗಳ ಮುಷ್ಕರ ಅಭೂತಪೂರ್ವ ಯಶಸ್ಸು ಪಡೆದು ಆ ಪ್ರದೇಶದ ಕಾರ್ಮಿಕ ಚಳವಳಿಯಲ್ಲಿ ಒಂದು ಹೊಸ ಚರಿತ್ರೆಯನ್ನೇ ನಿರ್ಮಿಸಿ ಸಿ.ಐ.ಟಿ.ಯು. ನ ನಿಲುವು ಸರಿಯಾದು ದೆಂಬುದನ್ನು ನಿರೂಪಿಸಿತು.

ಆದರೆ ಇದರಿಂದ ಪಾಠವನ್ನು ಕಲಿಯದೆ AITUC ಒಳಗೊಂಡು BMS,HMS, UTUC(L.S) ಮತ್ತಿತರ ಸಂಘಟನೆಗಳು ಹಠಾತ್ತೆಯಿಂದ CITUನ ವಿರುದ್ಧ ತಿರುಗಿಬಿದ್ದವು. ಮೂರುದಿನಗಳ ಮುಷ್ಕರದ ಸಂದರ್ಭದಲ್ಲಿ ಸಾಧಿಸಲಾಗಿದ್ದ ಕಾರ್ಮಿಕ ಐಕ್ಯತೆಯನ್ನು ಹಾಳು ಮಾಡಲು ಪ್ರಯತ್ನಿಸಿದವು. ಆದರೆ ಸಿ.ಐ.ಟಿ.ಯು. ನ್ನ ಪರಂಪರೆಗೆ ಅನುಗುಣವಾಗಿ ಕಾರ್ಮಿಕ ವರ್ಗದ ಐಕ್ಯತೆ ಮತ್ತು ಹೋರಾಟದಲ್ಲಿ ದೃಢವಾಗಿ ಮುನ್ನಡೆಯಿತು. ಇದರ ಪರಿಣಾಮವಾಗಿ ಸಿ.ಐ.ಟಿ.ಯು. ಮತ್ತೊಮ್ಮೆ 1988 ರ ಆಗಸ್ಟ್ 24 ರಂದು ಪೂರ್ವ ಸಮಾಲೋಚನೆಯ ನಂತರವೇ ಕೇಂದ್ರಕಾರ್ಮಿಕ ಸಂಘಟನೆಗಳು ಸಭೆಯನ್ನು ಕರೆಯಿತು; ಕೇಂದ್ರ ಕಾರ್ಮಿಕ ಸಂಘಟನೆಗಳ ಸಭೆಯನ್ನು ಕರೆಯಿತು. ಆದರೆ ಇವುಗಳೆಲ್ಲಾ ಒಳ ಸಂಚು ನಡೆಸಿ ಜಂಟೀ ತೀರ್ಮಾನ ತೆಗೆದುಕೊಂಡು ಸಭೆಯನ್ನು ಬಹಿಷ್ಕರಿಸಿ ಮತ್ತೊಮ್ಮೆ ಕಾರ್ಮಿಕ ವರ್ಗಕ್ಕೆ ದ್ರೋಹ ಬಗೆದವು ಮತ್ತು CITU ನಡೆಸಲು ಉದ್ದೇಶಿಸಿದ ಏಳು ದಿನಗಳ ಮುಷ್ಕರ ವನ್ನು ಮುರಿಯಲು ಕುಟಿಲೋಪಾಯ ನಡೆಸಿದವು. ಆದರೆ ಸಿ.ಐ.ಟಿ.ಯು ಬೇರೆ ಮಾರ್ಗವಿಲ್ಲದೆ ಸ್ವತಂತ್ರವಾಗಿಯೇ ಏಳು ದಿನಗಳ ಮುಷ್ಕರಕ್ಕೆ ಕರೆ ನೀಡಿತು. ಈ ಮಧ್ಯೆ ಇತರ ಸಂಘಟನೆಗಳು ಕಾರ್ಮಿಕರಲ್ಲಿ ಗೊಂದಲವನ್ನು ಸೃಷ್ಟಿಸಲು ನವೆಂಬರ್ 16 ರಂದು ಒಂದು ದಿನದ ಮುಷ್ಕರಕ್ಕೆ ಕರೆ ನೀಡಿದವು. ಆದರೆ ಕಾರ್ಮಿಕರು ಇದಕ್ಕೆ ಪ್ರತಿಕ್ರಿಯೆ ನೀಡಲಿಲ್ಲ. ಮೂರು ದಿನಗಳ ಸತತ ಮುಷ್ಕರದ ಅವಶ್ಯಕತೆ ಏನಿತ್ತೆಂಬುದೇ ಕಾರ್ಮಿಕರಿಗೆ ಅರ್ಥವಾಗಲಿಲ್ಲ. ತಮ್ಮ ಕರೆಗೆ ಉಂಟಾದ ಸೋಲಿನಿಂದ ರೊಚ್ಚಿಗೆದ್ದ ಇತರ ಕಾರ್ಮಿಕ ಸಂಘಟನೆಗಳು ಬಹಿರಂಗ ವಾಗಿಯೇ ಏಳು ದಿನಗಳ ಮುಷ್ಕರವನ್ನು ವಿರೋಧಿಸಿದವು.

ಆದರೆ ಬೇರೆ ಬೇರೆ ಸಂಘಟನೆಗಳಿಗೆ ಸೇರಿದ್ದ ಕಾರ್ಮಿಕರೂ, ಯಾವ ಸಂಘಟನೆ ಗೂ ಸೇರದೆ ಇದ್ದವರೂ ಸಿ.ಐ.ಟಿ.ಯುನ ಕರೆಗೆ ಓಗೊಟ್ಟು ಮಾಲೀಕರನ್ನೂ, ಪೋಲೀಸರನ್ನೂ ಎದುರಿಸಿ ಏಳು ದಿನಗಳ ಧೀರ ಮುಷ್ಕರವನ್ನು ನಡೆಸಿ ಇತರೆಲ್ಲಾ ಕಾರ್ಮಿಕ ಸಂಘಟನೆಗಳನ್ನು ಧಿಕ್ಕರಿಸಿದರು.

ಮುಷ್ಕರದ ಪ್ರಚಾರ ಕಾರ್ಯ:

ಮುಷ್ಕರದ ಯಶಸ್ಸಿನಲ್ಲಿ ಪಾರ್ಟಿಯು ಪ್ರಮುಖ ಪಾತ್ರವನ್ನು ನಿರ್ವಹಿಸಿತು. ಪಾರ್ಟಿಯು ತನ್ನ ಸದಸ್ಯರನ್ನೂ ಹಿತೈಷಿಗಳನ್ನೂ ಸಿ.ಐ.ಟಿ.ಯುಗೆ ಬೆಂಬಲವಾಗಿ ಅಣಿನೆರೆಸುವಲ್ಲಿ ಯಶಸ್ವಿಯಾಯಿತು. ವಾಸ್ತವವಾಗಿ 20 ದಿನಗಳ ಬಿರುಸಿನ ಪ್ರಚಾರ ಕಾರ್ಯದಲ್ಲಿ ಮತ್ತು ಮುಷ್ಕರದ ಸಂಘಟನೆಯಲ್ಲಿ ಪಾರ್ಟಿಯು ತನ್ನೆಲ್ಲಾ ಶಕ್ತಿಯನ್ನು ಬಳಸಿತು. ಪಾರ್ಟಿಯು ತನ್ನೆಲ್ಲಾ ಸಾಮೂಹಿಕ ಸಂಘಟನೆಗಳ ಸಂಗಾತಿಗಳನ್ನು-ವಿದ್ಯಾರ್ಥಿ ಗಳು, ಯುವಜನರು, ಅಧ್ಯಾಪಕರು, ವಕೀಲರು, ಪತ್ರಕರ್ತರು, ಮಹಿಳೆಯರು ಎಲ್ಲರನ್ನೂ ಮುಷ್ಕರದ ಯಶಸ್ಸಿಗಾಗಿ ದುಡಿಮೆಗೆ ಇಳಿಸಿತು. ಹದಿನೆಂಟು ಮುಷ್ಕರ ಸಮಿತಿಗಳು ದೆಹಲಿ ಮತ್ತು ಘಜಿಯಾಬಾದ್ ಗಳಲ್ಲಿ ಮುಷ್ಕರದ ಮೇಲ್ವಿಚಾರಣೆಯನ್ನು ನೋಡಿಕೊಂಡವು.

ಪಾರ್ಟಿ ಸದಸ್ಯರ ತಂಡಗಳು CITU ಕಾರ್ಯಕರ್ತರ ಜೊತೆ ಹಗಲು ರಾತ್ರಿಗಳೆನ್ನದೆ ಕೆಲಸ ಮಾಡಿದ್ದಲ್ಲದೆ ಸ್ವತಂತ್ರವಾಗಿಯೂ ಕೂಡ ಕರಪತ್ರಗಳನ್ನು ಹಂಚುವ, ರಸ್ತೆ ಬದಿಯ ಸಭೆಗಳನ್ನು ಏರ್ಪಡಿಸುವ, ಕಾರ್ಮಿಕರ ಕಾಲೋನಿಗಳಲ್ಲಿ ಮನೆ ಮನೆಗೆ ಸಂಚರಿಸಿ ಕಾರ್ಮಿಕರೊಂದಿಗೂ ಅವರ ಕುಟುಂಬ ವರ್ಗದೊಂದಿಗೂ ಜೀವಂತ ಸಂಪರ್ಕವನ್ನು ಸ್ಥಾಪಿಸಿಕೊಳ್ಳುವ ಮಹತ್ತರ ಕಾರ್ಯಭಾರವನ್ನು ನೆರವೇರಿಸಿದವು.

ಸೈಕಲ್ ರಿಕ್ಷಾಗಳೂ, ಟೆಂಪೋಗಳೂ ಧ್ವನಿವರ್ಧಕಗಳನ್ನೂ, ಬೇಡಿಕೆಗಳ ಪ್ಲೇ ಕಾರ್ಡುಗಳನ್ನು ಅಳವಡಿಸಿಕೊಂಡು ಮುಷ್ಕರದ ಸಂದೇಶವನ್ನು ಸತತವಾಗಿ ಕಾರ್ಮಿಕರ ನಡುವೆ ಇತರ ಜನವರ್ಗಗಳ ನಡುವೆ ಕೊಂಡೊಯ್ದವು ಮತ್ತು ಕಾರ್ಯಕರ್ತರು ಅಲ್ಲಲ್ಲೇ ಪುಟ್ಟ ಸಭೆಗಳನ್ನು ನಡೆಸಿದರು.

ಕರಪತ್ರಗಳು,ಕಿರುಹೊತ್ತಿಗೆಗಳು, ಪೋಸ್ಟರುಗಳು:

ಮುಷ್ಕರದ ಪ್ರಚಾರಕಾರ್ಯಕ್ಕಾಗಿ CITU ನಾಲ್ಕು ಲಕ್ಷ ಕರಪತ್ರಗಳನ್ನು ಹಂಚಿತು. 20 ಸಾವಿರ ದೊಡ್ಡ ಪೋಸ್ಟರುಗಳು ಮತ್ತು 30 ಸಾವಿರ ಚಿಕ್ಕ ಪೋಸ್ಟರುಗಳನ್ನು ಎಲ್ಲೆಡೆ ಹಚ್ಚಿತು. ಪಾರ್ಟಿಯು ಒಂದೂವರೆ ಲಕ್ಷ ಕಿರು ಹೊತ್ತಿಗೆಗಳನ್ನು 8 ಸಾವಿರ ಪೋಸ್ಟರುಗಳನ್ನು ಮುದ್ರಿಸಿ ಪ್ರಚಾರ ಮಾಡಿತು. ಜನವಾದಿ ಮಹಿಳಾ ಸಮಿತಿಯು 15 ಸಾವಿರ ಕಿರುಹೊತ್ತಿಗೆಗಳನ್ನು ಮತ್ತು DYFI 24 ಸಾವಿರ ಕಿರುಹೊತ್ತಿಗೆಗಳನ್ನೂ ಮುದ್ರಿಸಿ ಪ್ರಚಾರ ನಡೆಸಿದೆ. ಇತರ CITU ಸಂಘಗಳೂ ಸಹ ಕಿರು ಹೊತ್ತಿಗೆಗಳನ್ನು ಪೋಸ್ಟರುಗಳನ್ನ ಹೊರತಂದವು.

ಎಲ್ಲಾ ಕೈಗಾರಿಕಾ ಪ್ರದೇಶಗಳ ಮತ್ತು ಕಾರ್ಮಿಕರ ವಸತಿಪ್ರದೇಶಗಳ ಗೋಡೆಗಳೆಲ್ಲಾ ಮುಷ್ಕರದ ಘೋಷಣೆಗಳಿಂದ ತುಂಬಿಹೋದವು.

ಸಾಂಸ್ಕೃತಿಕ ತಂಡಗಳ ಅಪೂರ್ವ ಕೊಡುಗೆ

ಜನ ನಾಟ್ಯಮಂಚ ಮತ್ತು ಪರ್ಚಮ್ ಹಾಡಿನ ತಂಡಗಳು ಪ್ರಚಾರ ಕಾರ್ಯದಲ್ಲಿ ಪ್ರಾರಂಭ ದಿನದಿಂದಲೇ ಸತತವಾಗಿ ಭಾಗವಹಿಸಿದವು. ಪ್ರತಿ ದಿನವೂ ಮೂರು ವಿವಿಧ ವರ್ಗಗಳ ಪ್ರೇಕ್ಷಕರೆದುರು ಕಾರ್ಯಕ್ರಮಗಳನ್ನು ನೀಡಿದವು. ಜನನಾಟ್ಯ ಮಂಚ್ ಮುಷ್ಕರಕ್ಕೆ ಸಂಬಂಧಿಸಿ 'ಚಕ್ಕಾ ಜಾಮ್' ಎಂಬ ಹೊಸ ನಾಟಕವನ್ನು ತಯಾರಿಸಿತು. ಈ ನಾಟಕವು ಸೃಜನಶೀಲತೆ ಯಿಂದ ಕೂಡಿದ್ದು ಮುಷ್ಕರದ ಕೇಂದ್ರಬಿಂದುವನ್ನು ಪರಿಣಾಮಕಾರಿಯಾಗಿ ಅಭಿವ್ಯಕ್ತಗೊಳಿಸಲು ಶಕ್ತವಾದದ್ದಲ್ಲದೆ ಪ್ರೇಕ್ಷಕ ವರ್ಗದ ಅಪಾರ ಪ್ರಶಂಸೆಯನ್ನು ಪಡೆದುಕೊಂಡಿತು.

ಜನನಾಟ್ಯ ಮಂಚದ ಜೀವನಾಡಿ ಯಾಗಿದ್ದ ಅಪ್ರತಿಮ ಕಲಾವಿದ ಸಫ್ದರ್ ಹಷ್ಮಿ ಮುಷ್ಕರಕ್ಕಾಗಿ ತಾವೇ ನಿರ್ದೇಶಿಸಿದ 'ಹಲ್ಲಾಬೋಲ್' ನಾಟಕವನ್ನು ಪ್ರದರ್ಶಿಸು ತ್ತಿದ್ದಾಗಲೇ ಕಾಂಗ್ರೆಸ್ ಗೂಂಡಾಗಳಿಂದ ಕೊಲೆಯಾಗಿ ಇಡೀ ದೇಶದ ಸಾಹಿತಿ ಕಲಾವಿದರುಗಳು ಆಕ್ರೋಶ ಪೂರ್ಣ ಪ್ರತಿಭಟನೆ ನಡೆಸಿದ್ದನ್ನು ಇಲ್ಲಿ ಸ್ಮರಿಸಬಹುದು

ಮಹಿಳಾ ಸಂಗಾತಿಗಳ ಪಾತ್ರ:

ಪಾರ್ಟಿಯ ಮಹಿಳಾ ಸಂಗಾತಿಗಳು ಮುಷ್ಕರದ ಸಿದ್ಧತೆಯಲ್ಲಿ ಅಪಾರ ಶ್ರಮವಹಿಸಿ ದುಡಿದಿದ್ದಾರೆ. ಜನವಾದಿ ಮಹಿಳಾ ಸಮಿತಿ (AIDWA) ಯ ಸದಸ್ಯರು ದೊಡ್ಡ ಪ್ರಮಾಣದಲ್ಲಿ ಹೋರಾಟ ದಲ್ಲಿ ವಿಶೇಷವಾಗಿ ಧುಮುಕಿದರು. ಮತ್ತು ಅದರ ಫಲವಾಗಿ ಪೋಲಿಸರ ಧಾಳಿಗೆ ವಿಶೇಷವಾಗಿ ಗುರಿಯಾದರು.

ಯಾವುದೇ ಸಂಘಕ್ಕೂ ಸೇರದೆ ಉಳಿದಿದ್ದ ಮತ್ತು ಕೆಲಸವನ್ನು ಕಳೆದುಕೊಳ್ಳುವ ಭಯದಿಂದ ಸದಾ ಆತಂಕಗೊಂಡಿದ್ದ ಕಾಂಟ್ರ್ಯಾಕ್ಟ್ ಕಾರ್ಮಿಕರನ್ನು ಭೇಟಿಯಾಗಿ ಅವರಲ್ಲಿ ಆತ್ಮವಿಶ್ವಾಸವನ್ನು ತುಂಬಿ ಹೋರಾಟದಲ್ಲಿ ಇಳಿಸುವಲ್ಲಿ ಮಹಿಳಾ ಸಂಗಾತಿಗಳು ಉತ್ತಮ ಕೊಡುಗೆ ನೀಡಿದ್ದಾರೆ.

ಇದೇ ರೀತಿಯಲ್ಲಿ ಅನೇಕ ಸಂಘಟನೆ ಗಳು ಮುಷ್ಕರಕ್ಕೆ ಸೌಹಾರ್ದ ಬೆಂಬಲ ಸೂಚಿಸಿದವು. ಮಹಿಳೆಯರು, ವಿದ್ಯಾರ್ಥಿಗಳು, ಬರಹಗಾರರು, ಅಧ್ಯಾಪಕರು, ಕಲಾವಿದರು, ವಕೀಲರು, ರಾಜ್ಯ ಮತ್ತು ಕೇಂದ್ರ ಸರ್ಕಾರದ ನೌಕರರು, ಬ್ಯಾಂಕ್ ನೌಕರರು ತಮ್ಮ ಸೌಹಾರ್ದ ಬೆಂಬಲವನ್ನು ವ್ಯಕ್ತಪಡಿಸಿದರು. ಅನೇಕ ನಿವೃತ್ತ ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್ ನ್ಯಾಯಾಧೀಶರು ಸಹಿ ಮಾಡಿದ ಹೇಳಿಕೆಗಳನ್ನು ಪ್ರಕಟಿಸಿ ಮುಷ್ಕರಕ್ಕೆ ತಮ್ಮ ಬೆಂಬಲವನ್ನು ವ್ಯಕ್ತಪಡಿಸಿದರು. ಅಲ್ಲದೆ ದೆಹಲಿ ಆಡಳಿತ, ಪೋಲೀಸರು ಮತ್ತು ಉತ್ತರ ಪ್ರದೇಶ ಸರ್ಕಾರಗಳನ್ನು ಅವುಗಳ ಸಂವಿಧಾನ ಬಾಹಿರ ಚಟುವಟಿಕೆಗಳಿಗಾಗಿ ತೀವ್ರ ತರಾಟೆಗೆ ತೆಗೆದುಕೊಂಡಿದ್ದರು.

ಇತರ ರಾಜಕೀಯ ಪಕ್ಷಗಳಿಂದ ಬೆಂಬಲ:

ಮೆಟ್ರೋಪಾಲಿಟನ್ ಕೌನ್ಸಿಲ್ ಸದಸ್ಯರು, ಮುನಿಸಿಪಲ್ ಕೌನ್ಸಿಲರುಗಳು ಮತ್ತು ಲೋಕದಳ(ಬಿ), ಜನಮೋರ್ಚಾ, ಜನತಾಪಕ್ಷ ಮತ್ತು ಜನತಾದಳದ ಮುಖಂಡರುಗಳು ಮುಷ್ಕರಕ್ಕೆ ತಮ್ಮ ಬೆಂಬಲವನ್ನು ಪ್ರಕಟಿಸಿದರು.

ಕಾಂಗ್ರೆಸ್(ಐ) ಮತ್ತು ಬಿ.ಜೆ.ಪಿ. ಮುಷ್ಕರವನ್ನು ವಿರೋಧಿಸಿದವು.

ಮುಷ್ಕರದ ಸಂದರ್ಭದ ಅಪರೂಪದ ಬೆಳವಣಿಗೆಯೆಂದರೆ ನೂರಾರು ರಂಗಭೂಮಿ ಕಲಾವಿದರು, ಸಾಹಿತಿಗಳು, ಪತ್ರಕರ್ತರು ಮತ್ತು ಬುದ್ಧಿಜೀವಿಗಳು ಮುಷ್ಕರದ ಸಮಯದಲ್ಲಿ ಬೋಟ್ ಕ್ಲಬ್‌ಗೆ ಮೆರವಣಿಗೆಯಲ್ಲಿ ತೆರಳಿ ಮುಷ್ಕರಕ್ಕೆ ಮತ್ತು ಬೇಡಿಕೆಗಳಿಗೆ ತಮ್ಮ ಬೆಂಬಲವನ್ನು ಸೂಚಿಸಿದರು. ಇದು ಪತ್ರಿಕೆಗಳ ಮುಖಪುಟ ಗಳಲ್ಲಿ ವರದಿಯಾಗಿ ಮುಷ್ಕರಕ್ಕೆ ಮತ್ತಷ್ಟು ಬಲ ನೀಡಿತು.

ಪೋಲಿಸ್ ದೌರ್ಜನ್ಯಗಳು:

ನವೆಂಬರ್ 22 ರಂದು ಮುಷ್ಕರ ಪ್ರಾರಂಭವಾದಾಗ ಅಸಂಘಟಿತ ಕಾರ್ಮಿಕರ ಬೃಹತ್ ಪ್ರದರ್ಶನಗಳು ಕೈಗಾರಿಕಾ ಪ್ರದೇಶಗಳಲ್ಲಿ ನಡೆದವು. ಕ್ರಮೇಣ ಹೆಚ್ಚೆಚ್ಚು ಕಾರ್ಮಿಕರು ಫ್ಯಾಕ್ಟರಿಗಳಿಂದ ಹೊರಬಂದು ಪ್ರದರ್ಶನಗಳಲ್ಲಿ ಸೇರಿ ಕೊಂಡರು ಇದನ್ನೆಲ್ಲಾ ಮೊದಲೇ ಊಹಿಸಿದ್ದ ಪೋಲಿಸರು ಮಾಲಿಕವರ್ಗದ ಏಜೆಂಟರು ಗಳಂತೆ ವರ್ತಿಸಿ ಕಾರ್ಮಿಕರ ಮೇಲೆ ತಮ್ಮ ಆಕ್ರಮಣವನ್ನು ಆರಂಭಿಸಿದರು. ಹೆಚ್ಚು ಕಡಿಮೆ ಎಲ್ಲಾ ಪ್ರದೇಶಗಳಲ್ಲೂ ಪೋಲಿಸರು ಕಾರ್ಮಿಕರ ಮೇಲೆ ಲಾಠಿ ಚಾರ್ಜ್ ನಡೆಸಿದ್ದಾರೆ, ಅಶ್ರುವಾಯು ಶೆಲ್‌ಗಳನ್ನು ಸಿಡಿಸಿದ್ದಾರೆ ಮತ್ತು ಅಧಿಕ ಪ್ರಮಾಣದಲ್ಲಿ ಕಾರ್ಮಿಕರನ್ನು ಬಂಧಿಸಿದ್ದಾರೆ.

ಹೀಗೆ ಬಂಧಿಸಿದವರನ್ನು ಅನೇಕ ದಿನಗಳ ಕಾಲ ತಿಹಾರ್ ಜೈಲಿನಲ್ಲಿ ಇರಿಸಿಕೊಂಡಿದ್ದಾರೆ. ಬಂಧಿತರಲ್ಲಿ ಕೈಗೂಸುಗಳಿದ್ದ ಮಹಿಳೆಯರೂ ಸೇರಿದ್ದು ಒಂದಲ್ಲ ಒಂದು ಕಾರಣ ನೀಡಿ ಜೈಲಿನ ಅಧಿಕಾರಿಗಳು ಜಾಮೀನು ಸಹಿತ ಬಿಡುಗಡೆಗೂ ಸಹ ಅವಕಾಶ ನೀಡಲಿಲ್ಲ. ಇತರ ಕಾರ್ಮಿಕರನ್ನು ಹೆದರಿಸಲು ಪೋಲಿಸರು ಹೂಡಿದ ತಂತ್ರ ಫಲಿಸಲಿಲ್ಲ. ಸಂಗಾತಿಗಳು ಯಾರೂ ಹೆದರಲಿಲ್ಲ. ಮುಷ್ಕರದ ವೇಗವೂ ತಗ್ಗಲಿಲ್ಲ.

ಮುಷ್ಕರದ ಎರಡನೆಯ ದಿನ ತಿಹಾರ್ ಜೈಲಿನಲ್ಲಿ ನಡೆದ ಘಟನೆ ಪೋಲಿಸರ ನಿಲುವನ್ನು ಎತ್ತಿತೋರಿಸುವುದಲ್ಲದೆ ಒಂದು ರೀತಿಯಲ್ಲಿ ಹೋರಾಟಕ್ಕೆ ಇನ್ನೂ ಹೆಚ್ಚಿನ ಪ್ರಚಾರವನ್ನು ಒದಗಿಸಿಕೊಟ್ಟಿತೆಂದೇ ಹೇಳಬಹುದು.

ಪಾರ್ಟಿಯ ರಾಜ್ಯಸಭಾ ಸದಸ್ಯರಾದ ಕಾ.ಎಂ.ಎ.ಬೇಬಿ ಮತ್ತು ದುಡಿಯುವ ಮಹಿಳೆಯರ ಸಮನ್ವಯ ಸಮಿತಿಯ ಕಾ.ಪ್ರಮೀಳಪಂಥೆ ಅವರುಗಳು ಬಂಧಿತ ಕಾರ್ಮಿಕರನ್ನು ಭೇಟಿ ಮಾಡಲೆಂದು ತಿಹಾರ್‌ಜೈಲಿಗೆ ಹೋದಾಗ ಜೈಲಿನ ಅಧಿಕಾರಿ ಭೇಟಿಗೆ ಅವಕಾಶ ನಿರಾಕರಿಸಿದ್ದೇ ಅಲ್ಲದೆ ಅವರುಗಳ ಮೇಲೆ ಕೈ ಮಾಡಿ ಅವರನ್ನು ಜೈಲಿನ ಆವರಣದಿಂದ ಹೊರಕ್ಕೆ ಎತ್ತಿಕೊಂಡು ಹೋಗಿ ಬಿಸಾಡಿದ್ದಲ್ಲದೆ ಬೆನ್ನಿನ ಮೇಲೆ ಒದ್ದರು.

ಇದನ್ನು ಪ್ರತಿಭಟಿಸಿ ಕಾ.ಬೇಬಿ ಮತ್ತು ಕಾ.ಪ್ರಮೀಳ ಜೈಲಿನ ಗೇಟಿನ ಮುಂದೆ ಧರಣಿ ಕೂತರು. ಇವರೊಂದಿಗೆ ಸಿ.ಪಿ.ಐ. (ಎಂ) ನ ಪಾರ್ಲಿಮೆಂಟ್ ಸದಸ್ಯರಾದ ಅಮಲ್‌ದತ್ತಾ, ಹನುಮಂತರಾವ್, ರಮೇಶ್‌ಪೊದ್ದಾರ್ ಮತ್ತು ಗದಾಧರ ಸಹ, ತೆಲುಗುದೇಶಂನ ಎಂ.ಪಿ.ಗಳಾದ ಸತ್ಯನಾರಾಯಣರೆಡ್ಡಿ ಮತ್ತು ವಿಜಯಮೋಹನ ರೆಡ್ಡಿ ಧರಣಿ ಸತ್ಯಾಗ್ರಹ ನಡೆಸಿದರು. ಕೊಂಚ ಸಮಯದ ನಂತರ ಸಿ.ಪಿ.ಐ(ಎಂ) ಎಂ.ಪಿ.ಗಳಾದ ಸಮರ ಮುಖರ್ಜಿ, ದೀಪನ್‌ಘೋಷ್, ಪಿ.ಕೆ. ಕುಂಞನ್ಚನ್, ಜನತಾ ಎಂ.ಪಿ.ತಂಪನ ಥಾಮಸ್, R.S.P ಯ ಅರಿಂಗಿಲ್ ಶ್ರೀಧರನ್ ಧರಣಿಯಲ್ಲಿ ಭಾಗ ವಹಿಸಿದರು.

ತಪ್ಪಿತಸ್ಥ ಅಧಿಕಾರಿಯ ಮೇಲೆ ಕ್ರಮ ಕೈಗೊಳ್ಳುವುದಾಗಿ ಕೇಂದ್ರ ಗೃಹ ಮಂತ್ರಿಗಳು ಭರವಸೆ ನೀಡಿದ ನಂತರವೇ ಧರಣಿಯನ್ನು ಹಿಂತೆಗೆದು ಕೊಳ್ಳಲಾಯಿತು.

ಪೋಲೀಸ್ ದೌರ್ಜನ್ಯ ದೆಹಲಿ ಮತ್ತು ಘಜಿಯಾಬಾದ್‌ಗಳಲ್ಲಿ ಅವ್ಯಾಹತವಾಗಿ ನಡೆಯಿತು. ವಾಜಿರ್‌ಪುರ್ ಎಂಬಲ್ಲಿ ಕಾಂಗ್ರೆಸ್(ಐ) ಮತ್ತು ಮಾಲಿಕರ ಗೂಂಡಾಗಳು ತಲೆಗೆ ಹೆಲ್ಮೆಟ್ಟುಗಳನ್ನು ಧರಿಸಿಕೊಂಡು ಕಾರ್ಮಿಕರ ಪ್ರದರ್ಶನದ ಮೇಲೆ ಕಲ್ಲುಗಳಿಂದ, ಸೋಡಾ ಬಾಟಲುಗಳಿಂದ ಧಾಳಿ ಮಾಡಿದರು. ಮತ್ತೊಂದು ಕಡೆಯಿಂದ ಪೋಲೀಸರು ಆಕ್ರಮಣ ನಡೆಸಿದರು. ಇದರಿಂದ ಹೆಚ್ಚು ಕಾರ್ಮಿಕರು ಗಾಯಗೊಂಡರು. ಮಾಯಾಪುರಿ ಎಂಬಲ್ಲಿ ತುರ್ತು ಪರಿಸ್ಥಿತಿಯನ್ನೇ ಜಾರಿ ಮಾಡಲಾಗಿತ್ತು. ಸಿಕ್ಕಾಪಟ್ಟೆ ಪೋಲೀಸರನ್ನು ಕರೆಸಲಾಗಿತ್ತು. ಕಾರ್ಮಿಕರು ಗುಂಪು ಸೇರುವ ಮೊದಲೇ ಪೋಲಿಸರು ಅವರನ್ನು ಬಂಧಿಸುತ್ತಿದ್ದರು. ಈ ಎಲ್ಲಾ ಕಿರುಕುಳ ಗಳನ್ನು ಎದುರಿಸಿ ಕಾರ್ಮಿಕರು ಮೆರವಣಿಗೆಗಳನ್ನು ಎಲ್ಲಾ ಕೈಗಾರಿಕಾ ಪ್ರದೇಶಗಳಲ್ಲೂ ನಡೆಸಿದರು.

ಏಳುದಿನಗಳ ಮುಷ್ಕರದ ಸಮಯ ದಲ್ಲಿ ದೆಹಲಿ ಆಡಳಿತ, ಉತ್ತರಪ್ರದೇಶ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರಗಳು ಕಾರ್ಮಿಕರ ಬೇಡಿಕೆಗಳ ಬಗ್ಗೆ ಯಾವುದೇ ಪ್ರತಿಕ್ರಿಯೆ ವ್ಯಕ್ತ ಪಡಿಸಲಿಲ್ಲ. ಇವುಗಳ ಒಂದೇಪ್ರತಿಕ್ರಿಯೆ ಎಂದರೆ ಪೋಲಿಸರ ಮೂಲಕ ದಬ್ಬಾಳಿಕೆ ನಡೆಸಿದ್ದು.

ಈ ಏಳು ದಿನಗಳ ಐತಿಹಾಸಿಕ ಮುಷ್ಕರ ಈ ಪ್ರದೇಶದ ಕಾರ್ಮಿಕ ವರ್ಗದ ಹೋರಾಟದ ಶಕ್ತಿಯನ್ನು ಸಾಬೀತು ಗೊಳಿಸಿತು. ಅಸಂಘಟಿತ ಕಾರ್ಮಿಕರ ದಾರುಣ ಜೀವನವನ್ನು ಸಾರ್ವಜನಿಕರೆದುರು ತೆರೆದಿಟ್ಟು ಅವರ ಅನುಕಂಪ ಮತ್ತು ಬೆಂಬಲವನ್ನು ಗಳಿಸಿಕೊಂಡಿತು.

ಎಲ್ಲಕ್ಕಿಂತ ಹೆಚ್ಚಾಗಿ ಕಾಂಗ್ರೆಸ್ ನೇತೃತ್ವದ ಕೇಂದ್ರ ಸರ್ಕಾರಕ್ಕೂ, ದೆಹಲಿ ಆಡಳಿತಕ್ಕೂ, ಉತ್ತರಪ್ರದೇಶ ಸರ್ಕಾರಕ್ಕೂ ಏಳುದಿನಗಳ ಮುಷ್ಕರ ತೀವ್ರ ಎಚ್ಚರಿಕೆ ನೀಡಿದೆ. ಕಾರ್ಮಿಕರು ತಮ್ಮ ಮೇಲೆ ನಡೆಯುತ್ತಿರುವ ಭೀಕರ ಶೋಷಣೆಯನ್ನು ಇನ್ನೆಂದಿಗೂ ಸಹಿಸಿ ಕೊಂಡಿರಲಾರರು ಎಂಬುದನ್ನು ಸ್ಪಷ್ಟಪಡಿಸಿದೆ.

ನವೆಂಬರ್28 ರಂದು ದೆಹಲಿ ಕಾರ್ಮಿಕರ ಮುಷ್ಕರವನ್ನು ಬೆಂಬಲಿಸಿ ಬಿಹಾರ್, ಯು.ಪಿ. ರಾಜಸ್ಥಾನ್, ಮಧ್ಯಪ್ರದೇಶ ಮತ್ತು ಹಿಮಾಚಲ ಪ್ರದೇಶ ರಾಜ್ಯಗಳಲ್ಲಿ ಒಂದು ದಿನದ ಸಾಂಕೇತಿಕ ಮುಷ್ಕರಗಳು ಸಹ ನಡೆದಿವೆ.

ಈಗ ದೇಶವ್ಯಾಪಿಯಾಗಿ ಆರಂಭ ವಾಗಿರುವ ಸಿ.ಐ.ಟಿ.ಯು ನೇತೃತ್ವದ ಅಸಂಘಟಿತ ಕಾರ್ಮಿಕರ ಹೋರಾಟಕ್ಕೆ ದೆಹಲಿ ಹೋರಾಟದ ಅನುಭವಗಳು ಅತ್ಯುತ್ತಮ ಕೊಡುಗೆ ನೀಡಿವೆ. ನಾವೂ ಸಹ ನಮ್ಮ ರಾಜ್ಯದಲ್ಲಿ ಅಸಂಘಟಿತ ಕಾರ್ಮಿಕರ ಒಂದು ಶಕ್ತಿಶಾಲೀ ಆಂದೋಲನವನ್ನು ಆರಂಭಿಸುವ ತೀವ್ರ ಅವಶ್ಯಕತೆಯನ್ನು ಮನಗಂಡು ಹೋರಾಟಕ್ಕೆ ಇಳಿದಿದ್ದೇವೆ ದೆಹಲಿ ಹೋರಾಟದ ಶ್ರೀಮಂತ ಅನುಭವದ ಬೆಳಕಿನಲ್ಲಿ ನಾವು ಮುನ್ನಡೆಯೋಣ.

— ಸಂಗ್ರಹಾನುವಾದ 'ಉದಯ'

ಆಗಸ್ಟ್ 16 ರಾಜ್ಯ ಭೂಸುಧಾರಣಾ ಸಮಾವೇಶ

ಒಂದು ವರ್ಷದ ಹಿಂದೆ ನಡೆಯ ಬೇಕಿದ್ದ ಭೂಸುಧಾರಣಾ ಸಮಾವೇಶವನ್ನು 16-8-89ರಂದು ಬೆಂಗಳೂರಲ್ಲಿ ನಡೆಯಲಿದೆ.

ಪಶ್ಚಿಮ ಬಂಗಾಳದ ಎಡರಂಗ ಸರಕಾರ ತಂದ ಪ್ರಗತಿ ಪರ ಭೂಸುಧಾರಣೆಯನ್ನು ದೇಶದ ಎಲ್ಲಾ ರಾಜ್ಯಗಳಲ್ಲಿ ತರಬೇಕೆಂದು ಅಖಿಲ ಭಾರತ ಕಿಸಾನ್ ಸಭಾ ಕರೆಕೊಟ್ಟಿದೆ. ಆದರೆ ಪಶ್ಚಿಮ ಬಂಗಾಳದಲ್ಲಿ ತಂದ ಸುಧಾರಣೆಗಳೇನು. ಆ ಸುಧಾರಣೆಗಳನ್ನು ಕರ್ನಾಟಕ ರಾಜ್ಯದಲ್ಲಿ ಹೇಗೆ ಅಳವಡಿಸುವುದು ಎಂಬ ನಿರ್ದಿಷ್ಟ ಚರ್ಚೆಯನ್ನು ಮಾಡಿ ತರಬೇಕಾದ ತಿದ್ದುಪಡಿಗಳನ್ನು ಸೂಚಿಸುವುದಕ್ಕಾಗಿಯೇ ರಾಜ್ಯದಲ್ಲಿ ಭೂಸುಧಾರಣಾ ಸಮಾವೇಶವನ್ನು ಕರೆಯಲಾಗಿದೆ. ಅದಕ್ಕಾಗಿಯೇ ರಚಿಸಿದ ಉಪಸಮಿತಿ ಕೆಲವು ತಿದ್ದುಪಡಿಗಳನ್ನು ಸೂಚಿಸುವ ವರದಿಯನ್ನು ಮಂಡಿಸುತ್ತದೆ. ರಾಜ್ಯದ ಎಲ್ಲಾ ಜಿಲ್ಲೆಗಳಿಂದ ಬಂದ ಪ್ರತಿನಿಧಿಗಳು ವರದಿಯ ಮೇಲೆ ತಮ್ಮ ಅಭಿಪ್ರಾಯವನ್ನು ಮಂಡಿಸುವರು. ಅಖಿಲಭಾರತ ಕಿಸಾನ ಸಭಾದ ಮುಖಂಡರು, ಪಶ್ಚಿಮ ಬಂಗಾಳ ಹಾಗೂ ಇತರೆಡೆ ಪಡೆದ ಅನುಭವದ ಆಧಾರದಲ್ಲಿ ಸಹಾಯ ನೀಡುವ ಮುಖಾಂತರ, ತಿದ್ದುಪಡಿಗಳನ್ನು ತರುವ ಕುರಿತು ಗೊತ್ತುವಳಿಯನ್ನು ಸ್ವೀಕರಿಸುವುದು. ಆ ತಿದ್ದುಪಡಿಗಳನ್ನು ತರುವಂತೆ ರಾಜ್ಯದಲ್ಲಿ ರೈತರ ಹೋರಾಟವನ್ನು ಬೆಳೆಸುವದಾಗಿದೆ. ಭೂಸುಧಾರಣೆಯನ್ನು ಪ್ರಗತಿ ಪರ ದಿಕ್ಕಿನಲ್ಲಿ ಕೊಂಡೊಯ್ಯಲು ಮಾನದಂಡಗಳು, ಇವುಗಳೇ ಚರ್ಚೆಗೆ ಪ್ರಮುಖ ತಳಹದಿಯಾಗಿದೆ.

1) ಭೂ-ದಾಖಲಾತಿಗಳು ಇದಕ್ಕಾಗಿಯೇ ಒಂದು ಆಡಳಿತ ವಿಭಾಗವನ್ನು ಮಾಡುವ ಮುಖಾಂತರ, ಭೂಮಿಯ ಮಾಲೀಕ, ಸಾಗುವಳಿದಾರ ಅವರಿಗಿರುವ ಭೂಮಿಯ ಮೊತ್ತದ ಕುರಿತು ಕೇವಲ ತಾಲೂಕು, ಅಥವಾ ಜಿಲ್ಲಾ ಕಂದಾಯ ವಿಭಾಗದಲ್ಲಿದ್ದರೆ ಸಾಲದು ಎರಡು ಮೂರು ಜಿಲ್ಲೆಗಳಲ್ಲಿ ಭೂಮಿಯನ್ನು ಹೊಂದಲು ಸಾಧ್ಯವಾಗುತ್ತದೆ. ಕಾರಣ ರಾಜ್ಯ ಮಟ್ಟದಲ್ಲಿ ಭೂದಾಖಲಾತಿಯ ವ್ಯವಸ್ಥೆ.

2) ಸರಕಾರಕ್ಕೆ ಸೇರಿದ ಎಲ್ಲಾ ರೀತಿಯ ಭೂಮಿ, ಗೈರಾಣಿ, ಪಡಾ, ಅರಣ್ಯ ಇತರೆ ಭೂಮಿ, ವ್ಯವಸಾಯಕ್ಕೆ ಯೋಗ್ಯವಾಗಿರುವ ಎಲ್ಲಾ ಭೂಮಿಯನ್ನು ಭೂರಹಿತರಿಗೆ ಹಂಚುವುದು (ಕಾಯ್ದಿಟ್ಟ ಅರಣ್ಯವೆಂದು ಘೋಷಿಸಿದ ಅರಣ್ಯ ಬೆಳೆಸಿದ ಭೂಮಿ ಬಿಟ್ಟು)

3) ವೈಜ್ಞಾನಿಕವಾಗಿ ಭೂಮಿಯ ವರ್ಗೀಕರಣ. ಅದರ ಫಲವತ್ತತೆ ಹಾಗೂ ಬೆಲೆಯನ್ನಾಧರಿಸಿ ಭೂಮಿಯನ್ನು ವರ್ಗೀಕರಣ ಮಾಡುವಂತಾಗಬೇಕು.

4) ಭೂಮಿತಿಯನ್ನು ಹೇರುವುದು ಒಂದು ಕುಟುಂಬಕ್ಕೆ ಬೇರೆ ಆದಾಯವಿಲ್ಲದೆ ಭೂಮಿಯ ಮೇಲೆ ಅವಲಂಬನೆಯಾಗಿದ್ದು ಕನಿಷ್ಠ ಎಷ್ಟು ಭೂಮಿ ಬೇಕಾಗುತ್ತದೆ ಎಂಬುದರ ಮೇಲೆ ಭೂಮಿತಿಯನ್ನು ನಿಗದಿ ಮಾಡುವುದು.

5) ಕುಟುಂಬದ ವ್ಯಾಖ್ಯಾನ. ಕುಟುಂಬವೆಂದರೆ ಯಾರ್ಯಾರು ಎಷ್ಟು ಜನರಿರಬಹುದು.

6) ಬೇಸಾಯಗಾರನಾದವನು ಮಾತ್ರ ಭೂಮಿಯನ್ನು ಹೊಂದುವಂತೆ ಮಾಡುವುದು ಹಾಗಾದರೆ ಬೇಸಾಯಗಾರನೆಂದರೆ ಯಾರು. ಭೂಮಿಯ ಹೊರತು ಪಡಿಸಿ ಸಾಕಷ್ಟು ಆದಾಯವಿರುವವರು, ಭೂಮಿಯಿಂದ ದೂರ ಸ್ಥಳಗಳಲ್ಲಿ ಇರುವವರು ಭೂಮಿಯನ್ನು ಹೊಂದುವ ಕುರಿತು ವ್ಯಾಖ್ಯಾನಿಸುವದು.

7) ಬಡನೌಕರ, ಕಾರ್ಮಿಕ, ವಿಧವೆ, ಅಪ್ರಾಪ್ತ ವಯಸ್ಕರ, ಅಂಗಹೀನರು ಭೂಮಿಯನ್ನು ಹೊಂದುವ ಕುರಿತು.

8) ಕಾಯ್ದೆಯಲ್ಲಿ ಗೇಣಿ ರದ್ದಾಗಿದ್ದರೂ ವಾಸ್ತವಿಕವಾಗಿ ಗೇಣಿಪದ್ಧತಿ ಹಾಗೂ ಬೆಳೆ ಪಾಲು ಪದ್ಧತಿ ನಡೆಯುವ ಕುರಿತು. ತೆಗೆದುಕೊಳ್ಳಬೇಕಾದ ಕ್ರಮ.

9) ಭೂಪಂಚಾಯ್ತಿಗಳ ರಚನೆ ಹಾಗು ಕಾರ್ಯಾಚರಣೆ ಹೇಗಿರಬೇಕೆಂಬ ಪ್ರಶ್ನೆ.

10) ಭೂಮಿ ಪಡೆದವರಿಗೆ ಕೃಷಿಮಾಡಲು ಸ್ವಾತಂತ್ರ ಅಸ್ತಿತ್ವವನ್ನು ಕಲ್ಪಿಸಲು ಬೇಕಾದ ಸರಕಾರಿ ಸಹಾಯ ಕುರಿತು.

ಈ ಮೇಲಿನ ಅಂಶಗಳನ್ನು ಆಧರಿಸಿ ಚರ್ಚೆ ಮಾಡುವಾಗ ಭೂಮಾಲೀಕರು ಹೇಗೆ ಭೂಮಿಯನ್ನು ಉಳಿಸಿ ಕೊಂಡಿದ್ದಾರೆಂಬುದನ್ನು ಪತ್ತೆಹಚ್ಚಿ, ಅಂತಹ ಕಳ್ಳಗಿಂಡಿಗಳನ್ನು ಮುಚ್ಚಲು ಬೇಕಾದ ಕ್ರಮಗಳೇನು ಎಂಬುದನ್ನು ಸೇರಿಸಿ ಚರ್ಚಿಸುವ ಮುಖಾಂತರ, ರಾಜ್ಯದಲ್ಲಿ ಭೂಸುಧಾರಣೆಗಳಿಗೆ ತಿದ್ದು ಪಡಿಗಳನ್ನು ಸೂಚಿಸುವದಾಗಿದೆ, ಅದಕ್ಕಾಗಿ ನಿರಂತರ ಹೋರಾಟ ರೂಪಿಸುವುದಾಗಿದೆ. ಪಶ್ಚಿಮ ಬಂಗಾಳದ ರೈತರ ದಾರಿ ನಮ್ಮ ದಾರಿಯನ್ನಾಗಿಸಿಕೊಳ್ಳುವದಾಗಿದೆ.

ಸರಕಾರಿ ಭೂಮಿಗಾಗಿ ಹೋರಾಟ

ಭೂಸುಧಾರಣಾ ಸಮಾವೇಶದಲ್ಲಿ ಚರ್ಚಿಸಬೇಕಾದ ಎರಡನೇ ಅಂಶ ಸರಕಾರಿ ಭೂಮಿಯ ಕುರಿತು. ಈಗಾಗಲೇ ಸಾಕಷ್ಟು ಹೋರಾಟವನ್ನು ಪ್ರಾಂತ ರೈತ ಸಂಘ ನಡೆಸಿದೆ.

ರಾಜ್ಯದಲ್ಲಿರುವ ಸರ್ಕಾರಿ ಭೂಮಿ 90 ಲಕ್ಷ ಎಕರೆ. ಒಂದು ಕೋಟಿ ಅರಣ್ಯ ಭೂಮಿಯೆಂದು ಘೋಷಿಸಲಾಗಿದೆ. ಅದರಲ್ಲಿ ಸಸ್ಯಗಳೇ ಇಲ್ಲದ ಭೂಮಿ 50ಲಕ್ಷ ಇದೆ. ಅಂದರೆ ಒಟ್ಟು 1ಕೋಟಿ 40ಲಕ್ಷ ಎಕರೆ ಹಾಗೂ ಪಶ್ಚಿಮ ಘಟ್ಟಗಳಲ್ಲಿರುವ, ಬಾನಿ, ಕುಮ್ಕಿಕಾನು,ಸೊಪ್ಪಿನ ಬೆಟ್ಟ ಎಂದು ಹೇಳುವ ಭೂಮಿಯು ಸೇರಿದಂತೆ. 1ಕೋಟಿ 50ಲಕ್ಷ ಎಕರೆ.ಭೂಮಿ ಭೂರಹಿತರಿಗೆ, ಬಡರೈತರಿಗೆ ಸಿಗಬೇಕಾಗಿದೆ.

ಇಂತಹ ಭೂಮಿಯಲ್ಲಿ ಈಗಾಗಲೇ ಒಂದೆಡೆ ಲಕ್ಷಾಂತರ ಭೂರಹಿತರು, ಬಡ ರೈತರು ಒತ್ತುವರಿ ಹಾಗೂ ಅಕ್ರಮ ಸಾಗುವಳಿ ಮಾಡಿದ್ದಾರೆ. ಇನ್ನೊಂದೆಡೆ ಲಕ್ಷಾಂತರ ಎಕರೆ ಭೂಮಿಯನ್ನು ಭೂಮಾಲೀಕರು, ಪ್ಲಾಂಟರ್‌ಗಳು. ಭೂಮಿ ಕಾಯ್ದೆಗಿಂತ ಹೆಚ್ಚು ಭೂಮಿಯಿರುವವರು ಒತ್ತುವರಿ ಮಾಡಿದ್ದಾರೆ. ಹಾಗೆಯೇ ಲಕ್ಷಾಂತರ ಎಕರೆ ಬಡವರಿಗೆ ಹಂಚಿದ ಭೂಮಿಯನ್ನು, ಭೂಮಾಲೀಕರೇ ಉಳುಮೆಮಾಡುತ್ತಿದ್ದಾರೆ.

ರಾಜ್ಯದಲ್ಲಿ ಭೂರಹಿತರು ಹಿಡಿದ ಭೂಮಿಗೆ ಪಟ್ಟಾಗಾಗಿ, ಭೂಮಾಲೀಕರು ಹಿಡಿದ ಭೂಮಿಯನ್ನು ವಶಪಡಿಸಿಕೊಳ್ಳಲು ಚಳುವಳಿ ನಡೆಸಬೇಕಾಗಿದೆ.

► 8 ಪುಟ

ಕೈ ಮಗ್ಗ ನೇಕಾರರ ರಾಜ್ಯ ಸಮ್ಮೇಳನ

ರಾಜ್ಯದ ಹಲವು ಭಾಗಗಳಿಂದ ಸಹಸ್ರಾರು ಕೈಮಗ್ಗ ನೇಕಾರರನ್ನು ಪ್ರತಿನಿಧಿಸಿ 500 ಮಂದಿ ಪ್ರತಿ ನಿಧಿಗಳು ಭಾಗವಹಿಸಿದ್ದ ರಾಜ್ಯ ಮಟ್ಟದ ಕೈಮಗ್ಗ ನೇಕಾರರ ಸಮ್ಮೇಳನ ಚಿತ್ರದುರ್ಗ ಜಿಲ್ಲೆ ರಾಣಿ ಬೆನ್ನೂರಿನಲ್ಲಿ ಜೂನ್ 28 ರಂದು ಜರುಗಿತು. ಸಿ.ಐ.ಟಿ.ಯು. ರಾಜ್ಯ ಅಧ್ಯಕ್ಷ ಕಾ॥ ಎಸ್.ಸೂರ್ಯನಾರಾಯಣರಾವ್ ರವರು ಉದ್ಘಾಟಿಸಿದರು. ಕಾ॥ ವಿ.ಜೆ.ಕೆ. ನಾಯರ್ ರವರು ಅಧ್ಯಕ್ಷತೆವಹಿಸಿದ್ದರು. ಮುಖ್ಯ ಅತಿಥಿಗಳಾಗಿ ತಮಿಳುನಾಡಿನ ಕೈಮಗ್ಗ ನೇಕಾರ ಕಾರ್ಮಿಕರ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಕಾ॥ ಕಾರ್ಮೆಗಂ ಭಾಗವಹಿಸಿ ಮಾತನಾಡಿದರು.

ನೂತನ ಜವಳಿ ನೀತಿ ಕುರಿತು ಸಮ್ಮೇಳನ ದೀರ್ಘವಾಗಿ ಚರ್ಚಿಸಿತು. ಉದ್ಯೋಗದ ಹಕ್ಕನ್ನು ಸಂವಿಧಾನದಲ್ಲಿ ಮೂಲಭೂತ ಹಕ್ಕಾಗಿ ಮಾಡಬೇಕೆಂದು ಕರ್ನಾಟಕದಲ್ಲಿರುವ 1ಲಕ್ಷದಷ್ಟು ಕಾರ್ಮಿಕರನ್ನು ಕರ್ನಾಟಕ ಕೈಮಗ್ಗ ನಿಗಮದ ಕಾರ್ಮಿಕರೆಂದು ಪರಿಗಣಿಸಬೇಕೆಂದು ಸಮ್ಮೇಳನ ಒತ್ತಾಯಿಸಿತು. ನೇಕಾರರಿಗೆ ಕನಿಷ್ಠ ವೇತನ ರೂ. 1050 ನೀಡಬೇಕು, ತುಟ್ಟಿ ಭತ್ಯೆ, ರಜಾ ದಿನಗಳ ಸಂಬಳ, ಹೆರಿಗೆ ಭತ್ಯೆ ಮತ್ತು ವಾರ್ಷಿಕ ಬೋನಸ್ಸು ನೀಡಬೇಕೆಂದು ಸಮ್ಮೇಳನ ಆಗ್ರಹಿಸಿತು.

ರಾಜ್ಯದ ಎಲ್ಲಾ ನೇಕಾರ ಸಂಘಗಳನ್ನೊಳಗೊಂಡ ಒಂದು ಸಮನ್ವಯ ಸಮಿತಿಯನ್ನು ಆಯ್ಕೆ ಮಾಡಿದೆ. ಕಾ॥ ನಿತ್ಯಾನಂದಸ್ವಾಮಿಯವರನ್ನು ರಾಜ್ಯ ಸಮನ್ವಯ ಸಮಿತಿ ಸಂಚಾಲಕರನ್ನಾಗಿ ಆಯ್ಕೆ ಮಾಡಿ ಇನ್ನುಳಿದ ಜಿಲ್ಲೆಗಳ ನೇಕಾರ ಸಂಘಗಳನ್ನು ಸಂಪರ್ಕಿಸಿ ಪ್ರತಿನಿಧಿಗಳನ್ನು ಸೇರಿಸಿಕೊಳ್ಳುವ ಅಧಿಕಾರ ನೀಡಲಾಗಿದೆ.

ಹೈಸ್ಕೂಲ್ ವಿದ್ಯಾರ್ಥಿ ಬೇಡಿಕೆ ಒತ್ತಾಯಿಸಿ

ಜಿಲ್ಲಾ ಪರಿಷತ್ ಚಲೋ

ಭಾರತ ವಿದ್ಯಾರ್ಥಿ ಫೆಡರೇಷನ್ ಕರ್ನಾಟಕ ರಾಜ್ಯ ಸಮಿತಿ ರಾಜ್ಯದ ಹೈಸ್ಕೂಲ್ ವಿದ್ಯಾರ್ಥಿ ಸಮುದಾಯವನ್ನು ಜಾಗೃತ ಗೊಳಿಸಿ ಜುಲೈ 25ರಂದು 'ಜಿಲ್ಲಾಪರಿಷತ್ ಚಲೋ' ಹಮ್ಮಿಕೊಳ್ಳಲು ನೀಡಿದ ಕರೆ ಯಂತೆ ರಾಜ್ಯಾದ್ಯಂತ ಚಳುವಳಿ ಯಶಸ್ವಿ ಗೊಂಡಿದೆ.

ಸಹಿಸಂಗ್ರಹ, ಪ್ರಚಾರ ಸಭೆಗಳು ಪ್ರದರ್ಶನಗಳಲ್ಲಿ ಸುಮಾರು 25ಸಾವಿರಕ್ಕೂ ಅಧಿಕ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ರಾಯಚೂರು

ಜಿಲ್ಲೆಯ 6 ತಾಲೂಕುಗಳಲ್ಲಿ ಸುಮಾರು ಒಂದು ಸಹಸ್ರ ವಿದ್ಯಾರ್ಥಿಗಳು 'ಜಿಲ್ಲಾಪರಿಷತ್ ಚಲೋ' ಚಳುವಳಿಯಲ್ಲಿ ಪಾಲ್ಗೊಂಡರು. ಜಿಲ್ಲಾ ಪರಿಷತ್ ಅಧ್ಯಕ್ಷೆ ಶ್ರೀಮತಿ ಮೈಲ್ಯಾ ಪಾಟೀಲ್ ಮುನೇಶ್ವರಿ ಕ್ರಮ ಜರುಗಿಸುವುದಾಗಿ ಆಶ್ವಾಸನೆ ನೀಡಿದರು. ಜಿಲ್ಲೆಯಲ್ಲೆ ಇಂದೆಂದೂ ಕಂಡರಿಯದ ರೀತಿಯ ಈ ರ್‍ಯಾಲಿ ಕಂಡು ರಾಯಚೂರು ಜನತೆ ಬೆರಗಾದರು. ಶೇಷಾದ್ರಿ, ರಾಮನಗೌಡ, ಪ್ರಭುಗೌಡ, ಬಸವಂತರಾಯ ಸಭೆಯಲ್ಲಿ ಮಾತನಾಡಿದರು.

ಬೀದರ್

800ಮಂದಿ ವಿದ್ಯಾರ್ಥಿಗಳ ಜಿಲ್ಲಾ ಪರಿಷತ್ ಚಲೋದಲ್ಲಿ ಭಾಗವಹಿಸಿದ್ದರು. 15 ಖಾಸಗಿ ಶಾಲೆಗಳಿಗೆ ಅನುಮತಿ ನೀಡಿರುವುದನ್ನು ಹಿಂತೆಗೆದುಕೊಳ್ಳಬೇಕೆಂಬ ಪ್ರಮುಖ ಬೇಡಿಕೆ ಒತ್ತಾಯಿಸಲಾಯಿತು. ಪಠ್ಯಪುಸ್ತಕ, ಕುಡಿಯುವ ನೀರಿನ ವ್ಯವಸ್ಥೆ ಬಸ್ ಸೌಲಭ್ಯ ಒದಗಿಸುವುದಾಗಿ ಅಧಿಕಾರಿಗಳು ಆಶ್ವಾಸನೆ ನೀಡಿದರು. ನಾರಾಯಣ ರಾಂಪುರೆ, ಮಹಿಳಾ ಸಂಘಟನೆಯ ಸಂಚಾಲಕಿ ಕೆ.ನೀಲಾರವರು ಮಾತನಾಡಿದರು.

ಕೋಲಾರ

ಜಿಲ್ಲೆಯ ವಿವಿಧ ತಾಲೂಕುಗಳಿಂದ ಬಂದ 1500ಕ್ಕೂ ಮೀರಿದ ಬೃಹತ್ ವಿದ್ಯಾರ್ಥಿಗಳು ರ್‍ಯಾಲಿ ನಡೆಸಿ ಜಿಲ್ಲಾ ಪರಿಷತ್ ಅಧ್ಯಕ್ಷ-ಉಪಾಧ್ಯಕ್ಷರಿಗೆ ಮನವಿ ಅರ್ಪಿಸಲಾಯಿತು. ಹಾಸ್ಟೆಲ್ ವಿದ್ಯಾರ್ಥಿಗಳಿಗೆ ಒಂದು ದಿನದ ಊಟಕ್ಕೆ 3ರೂ ಬದಲು 5ರೂ ನೀಡುವಂತೆ ಒತ್ತಾಯಿಸಲು ನಿಯೋಗ ತೆರಳಿದೆ. ಶಾಸಕರಾದ ಆರ್.ವೆಂಕಟರಾಮಯ್ಯ ಹಾಗೂ ಪಿ. ವೆಂಕಟಗಿರಿಯಪ್ಪನವರ ಸಲಹೆಯಂತೆ ಹುಡುಗರ ಊಟದ ದೂರಿಗೆ ಕ್ರಮ ಕೈಗೊಳ್ಳುವದಾಗಿ ತಿಳಿಸಿದರು. ಸಭೆಯನ್ನುದ್ದೇಶಿಸಿ ಎಸ್.ಎಫ್.ಐ.ರಾಜ್ಯ ಅಧ್ಯಕ್ಷ ಕಾ॥ ಜಿ.ಸಿ. ಬಯ್ಯಾರೆಡ್ಡಿ ಹಾಗೂ ಜಿಲ್ಲಾ ಅಧ್ಯಕ್ಷ ನಾರಾಯಣಸ್ವಾಮಿ ಮಾತನಾಡಿ ಬೇಡಿಕೆಗಳನ್ನು ಪಡೆಯಲು ಬಲಿಷ್ಠವಾದ ಹೋರಾಟ ನಡೆಸಬೇಕೆಂದು ಕರೆ ನೀಡಿದರು.

ಗುಲ್ಬರ್ಗಾ

ಸಾವಿರಾರು ವಿದ್ಯಾರ್ಥಿಗಳು ತರಗತಿ ಬಹಿಷ್ಕರಿಸಿ ಜಿಲ್ಲಾ ಪರಿಷತ್ ಕಛೇರಿಗೆ ಮೆರವಣಿಗೆ ಬಂದು ಅಧ್ಯಕ್ಷರಿಗೆ ಮನವಿ ಅರ್ಪಿಸಿದರು. ಸುರಪುರ ಶಹಾಪುರಗಳಿಂದ ಜಿಲ್ಲಾ ಕೇಂದ್ರಕ್ಕೆ ಬಂದ ವಿದ್ಯಾರ್ಥಿಗಳು ಪ್ರತ್ಯೇಕ ಪ್ರತ್ಯೇಕ ಮೆರವಣಿಗೆ ಮಾಡಿ ಮನವಿ ಅರ್ಪಿಸಿದರು. ನೆರೆದ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಎಸ್.ಎಫ್.ಐ. ಜಿಲ್ಲಾ ಕಾರ್ಯದರ್ಶಿ ಈಶ್ವರ್‌ಚಂದ್ರ, ಅಧ್ಯಕ್ಷ ಚೆನ್ನಬಸಪ್ಪನವರು ಮಾತನಾಡಿ ಶಿಕ್ಷಣಕ್ಕಾಗಿ ಹೆಚ್ಚು ಹಣ ವಿನಿಯೋಗಿಸಬೇಕೆಂದು ಜಿಲ್ಲಾ ಪರಿಷತ್ ಅಧ್ಯಕ್ಷರಿಗೆ ಮನವಿಮಾಡಿದರು.

ಮೈಸೂರು

ಜಿಲ್ಲೆಯಲ್ಲಿ ಸಂಗ್ರಹ ಚಳುವಳಿ ನಡೆಸಿ ಜಿಲ್ಲಾ ಪರಿಷತ್ ಕಛೇರಿ ಎದುರು ಸಾಂಕೇತಿಕ ಪ್ರತಿಭಟನಾಪ್ರದರ್ಶನ ನಡೆಸಿ ಮನವಿ ಪತ್ರ ಅರ್ಪಿಸಲಾಗಿದೆ.

ತುಮಕೂರು

ಜುಲೈ 25ರಂದು ವಿವಿಧ ಶಾಲೆಗಳಿಂದ ಬಂದ 500ಕ್ಕೆ ಮೀರಿದ ವಿದ್ಯಾರ್ಥಿ - ವಿದ್ಯಾರ್ಥಿನಿಯರು ಮೆರವಣಿಗೆ ನಡೆಸಿ ಜಿಲ್ಲಾ ಪರಿಷತ್ ಕಛೇರಿ ತಲುಪಿ ಮನವಿ ಅರ್ಪಿಸಿದರು. ಜಿಲ್ಲಾ ಅಧ್ಯಕ್ಷ ಕಾ॥ ಈ ಬಸವರಾಜು, ಕಾರ್ಯದರ್ಶಿ ಬಿ. ಉಮೇಶ್, ಸುರೇಂದ್ರ, ಪ್ರಸನ್ನ ಕುಮಾರ್, ಸಿದ್ಧಲಿಂಗಪ್ಪ, ರವಿಶಂಕರ್, ಸೈಯದ್‌ಮುಜೀಬ್, ಮುಂತಾದವರು.

> **ಹೂ- ಅರಳುತ್ತವೆ**
>
> ಸೂರ್ಯಕಿರಣಗಳಿಗಡ್ಡವಾಗಿ
> ಕಟ್ಟಿರುವ ಪರದೆ ಕಿತ್ತೆಸೆದು
> ಕುಡುಗೋಲು, ಸುತ್ತಿಗೆ ಹಿಡಿದವರ
> ಕೈಗಳಿಗೆ ಬಲಕೊಟ್ಟು
> ವಿಜಯ ಪತಾಕೆ ಹಾರಿಸಿದ
> "ಸಂಗಾತಿ"
> ಸದಾ ಹೊಳೆವ ನಕ್ಷತ್ರವಾಗಿದ್ದಾರೆ
> ಅವರು ಕಟ್ಟಿದ ಗೋಡೆಗಳ
> ನಡುವೆ ನೆಮ್ಮದಿಯ
> ಉಸಿರುಗಳು
> ವಿಶ್ವದ ಚಿರಶಾಂತಿಗಾಗಿ
> ಪರಿತಾಪ ಪಡುವ
> ಗಂಟಲುಗಳು
> ಕ್ಷಣ-ಕ್ಷಣಕ್ಕೂ ಬದಲಾವಣೆ
> ಬಯಸುವ ಹೋರಾಟದ ಒಡಲಲ್ಲಿ
> ನಿಮ್ಮ ಬಯಕೆಯ
> ಹೂ ಅರಳುತ್ತವೆ.
>
> ಕೆ. ನೀಲಾ
> ಬೀದರ್
>
> ★ ಎಸ್.ಎಲ್. ಪಿನಿಸಿಗೆ

ರಾಜ್ಯಾದ್ಯಂತ "ರಾಷ್ಟ್ರೀಯ ಕನಿಷ್ಟ ಕೂಲಿ ದಿನ"

ಬೆಂಗಳೂರಿನಲ್ಲಿ ಕಾರ್ಮಿಕರ ಆಯುಕ್ತರಿಗೆ ಮನವಿ

ನವದೆಹಲಿಯಲ್ಲಿ ನಡೆದ ಕನಿಷ್ಠ ಕೂಲಿ ಕಾರ್ಮಿಕರ ಸಮಾವೇಶದ ಕರೆಯಂತೆ ಆಗಸ್ಟ್ 2ರಂದು ರಾಜ್ಯಾದ್ಯಂತ 'ಕನಿಷ್ಠಕೂಲಿ ಬೇಡಿಕೆ ದಿನಾಚರಣೆ' ಆಚರಿಸಲಾಗಿದೆ.

ಬೆಂಗಳೂರಿನಲ್ಲಿ ಲಕ್ಷಾಂತರ ಅಸಂಘಟಿತ ಕಾರ್ಮಿಕರನ್ನು ಪ್ರತಿನಿಧಿಸಿದ ಸಾವಿರಾರು ಹೋಟೇಲು ಮತ್ತು ಇತರ ಸಣ್ಣ ಪುಟ್ಟ ಕೈಗಾರಿಕೆಗಳ ಕಾರ್ಮಿಕರ ಒಂದು ಮೆರವಣಿಗೆ ಮೈಸೂರು ಬ್ಯಾಂಕ್ ಚೌಕದಿಂದ ಹೊರಟು ಕಾರ್ಮಿಕ ಆಯುಕ್ತರ ಕಚೇರಿಯೆದುರು ಮತ ಪ್ರದರ್ಶನ ನಡೆಸಲಾಯಿತು. ರಾಜ್ಯ ಸಿ.ಐ.ಟಿ.ಯು. ಅಧ್ಯಕ್ಷ ಎಸ್.ಸೂರ್ಯ ನಾರಾಯಣರಾವ್ ಮತ್ತು ಪ್ರಧಾನ ಕಾರ್ಯದರ್ಶಿ ವಿ.ಜೆ.ಕೆ. ನಾಯರ್ ನೇತೃತ್ವದಲ್ಲಿ ಮೆರವಣಿಗೆ ನಡೆಯಿತು. ನಂತರ ಆಯುಕ್ತರವರಿಗೆ ಒಂದು ಮನವಿಯನ್ನು ಸಲ್ಲಿಸಲಾಯಿತು.

ಮನವಿಯಲ್ಲಿ ಅಕುಶಲ ಅರೆಕುಶಲ ಮತ್ತು ಕುಶಲ ಕಾರ್ಮಿಕರಿಗೆ ಈ ಕೆಳಗಿನ ದರದಲ್ಲಿ ಕನಿಷ್ಠ ವೇತನ ನೀಡಬೇಕೆಂದು ಒತ್ತಾಯಿಸಲಾಯಿತು-

	ಮಾಸಿಕ	ದಿನಗೂಲಿ
ಅಕುಶಲ	1050	40.38
ಅರೆಕುಶಲ	21190	45.77
ಕುಶಲ	1400	53.85

ತುಟ್ಟಿ ಭತ್ಯೆ ದರ ಮಾಸಿಕ ರೂ1-65 ಪಾಯಿಂಟಿಗೆ ಕರ್ನಾಟಕದಲ್ಲಿ 1967-68 ರಿಂದಲೂ ಅನೇಕ ಉದ್ದಿಮೆಗಳಲ್ಲಿ ಕನಿಷ್ಠ ವೇತನವನ್ನು ಪರಿಷ್ಕರಿಸಿಲ್ಲವೆಂಬ ಅನ್ಯಾಯವನ್ನು ಎತ್ತಿತೋರಿಸಿರುವ ಈ ಮನವಿ ಬಳಕೆದಾರರ ಬೆಲೆ ಸೂಚ್ಯಂಕದಲ್ಲಿ 50ಪಾಯಿಂಟ್ ಏರಿಕೆಯಾದ ತಕ್ಷಣವೇ ಕನಿಷ್ಠ ಕೂಲಿಯನ್ನು ಪರಿಷ್ಕರಿಸಬೇಕೆಂಬ ನಿಯಮವನ್ನು ಪಾಲಿಸಬೇಕೆಂದು ಒತ್ತಾಯಿಸಿದೆ.

ಅನೇಕ ರಾಜ್ಯಗಳಲ್ಲಿ ಕೈಗಾರಿಕೆಗಳ ನಡುವೆ ಮತ್ತು ಪ್ರದೇಶಗಳ ನಡುವೆ ಕನಿಷ್ಠ ಕೂಲಿ ನಿಗದಿಯಾದಲ್ಲಿ ವ್ಯತ್ಯಾಸವಿಲ್ಲ ಎಂಬುದನ್ನು ತಿಳಿಸಿದ ಮನವಿ ರಾಜ್ಯಾದ್ಯಂತ ಕನಿಷ್ಠ ಕೂಲಿ ಸಮಾನ ದರದಲ್ಲಿ ನೀಡಬೇಕೆಂದೂ ನಗರದ ಹೆಚ್ಚಿನ ಜೀವನ ವೆಚ್ಚಕ್ಕಾಗಿ ಹೆಚ್ಚಿನ ಕೂಲಿ ನಿಗದಿಪಡಿಸಬೇಕೆಂದು ಒತ್ತಾಯಿಸಿತು.

ಇವಲ್ಲದೆ ಕನಿಷ್ಠ ಕೂಲಿ ಶಾಸನದಲ್ಲಿ ಇದುವರೆಗೆ ಸೇರಿಸಿರದ ಇನ್ನೂ ಹಲವು ಉದ್ದಿಮೆಗಳಿದ್ದು, ಅಲ್ಲಿಯೂ ಕನಿಷ್ಠಕೂಲಿ ನಿಗದಿ, ಕಾನೂನು ಉಲ್ಲಂಘಿಸಿದ ಮಾಲೀಕರಿಗೆ ಶಿಕ್ಷೆ, ಕಾರ್ಮಿಕ ಕಾನೂನುಗಳನ್ನು ಎಲ್ಲಾ ಕನಿಷ್ಠಕೂಲಿ ಉದ್ದಿಮೆಗಳಿಗೂ ಅನ್ವಯ, ವಸತಿ ಸೌಲಭ್ಯ, ಇತ್ಯಾದಿಗಳನ್ನು ಮನವಿ ಒಳಗೊಂಡಿತ್ತು.

ಈ ಬೇಡಿಕೆ ದಿನಾಚರಣೆಯ ನಂತರ ಆಗಸ್ಟ್ 28, 29 ಹಾಗೂ 30 ರಂದು ಕನಿಷ್ಠ ಕೂಲಿ ಒತ್ತಾಯಿಸಿ ಮೂರು ದಿನಗಳ ಮುಷ್ಕರ ನಡೆಸಲು ಹಾಗೂ ಸೆಪ್ಟೆಂಬರ್ 23ರಂದು ನವದೆಹಲಿಯಲ್ಲಿ ನಡೆಯಲಿರುವ ಅಖಿಲ ಭಾರತ ಸಮಾವೇಶದ ಕರೆಯಂತೆ ಮುಂದಿನ ಚಟುವಟಿಕೆಗಳನ್ನು ನಡೆಸಲು ನಿರ್ಧರಿಸಲಾಗಿದೆ.

ಸಾಮ್ರಾಜ್ಯಶಾಹಿ ಒತ್ತಡಕ್ಕೆ ಮಣಿದ ರಾಜೀವ್ ಸರ್ಕಾರ

ನಮ್ಮ ವೈಜ್ಞಾನಿಕ ಬುದ್ಧಿಶಕ್ತಿಗೆ ಮಂಕು ಬಡಿ
“ಬೌದ್ಧಿಕ ಆಸ್ತಿಹಕ್ಕು” ಗಳನ್ನುಮನ್ನಿಸಬೇಕೆ

ಬೌದ್ಧಿಕ ಆಸ್ತಿಹಕ್ಕುಗಳು ಅಂತ ಬೇರೆ ಇದೆಯೆ? ಎಂದು ಹುಬ್ಬೇರಿಸಬೇಡಿ! ಇಂತಹ ಹಕ್ಕುಗಳು ಇವೆ ಮಾತ್ರವಲ್ಲ, ಶ್ರೀಮಂತರ ಆಸ್ತಿ ಹಕ್ಕುಗಳು ಬಡವರ ಶೋಷಣೆಯ ಉಪಕರಣವಾದಂತೆ, ಬೌದ್ಧಿಕ ಆಸ್ತಿ ಹಕ್ಕುಗಳು ಸಾಮ್ರಾಜ್ಯಶಾಹಿ ಶ್ರೀಮಂತ ದೇಶಗಳು ಮೂರನೇ ಜಗತ್ತಿನ ಬಡದೇಶಗಳ ಶೋಷಣೆಗೆ ಪ್ರಮುಖ ಉಪಕರಣವೂ ಹೌದು.

ಇತ್ತೀಚೆಗೆ GATT ನ ಉರುಗ್ವೇ ಸುತ್ತಿನ ಮಾತುಕತೆಗಳ ವಿಷಯಸೂಚಿಯನ್ನು ತಯಾರಿಸಲು ಜಿನೇವಾದಲ್ಲಿ ನಡೆದ ಸಭೆಯಲ್ಲಿ, “ಬೌದ್ಧಿಕ ಆಸ್ತಿ ಹಕ್ಕುಗಳು” ಮತ್ತು ಸೇವಾಕ್ಷೇತ್ರದಲ್ಲಿ ವ್ಯಾಪಾರವನ್ನು ಸೇರಿಸಬೇಕೆಂಬ ಸಾಮ್ರಾಜ್ಯಶಾಹಿ ಒತ್ತಡಕ್ಕೆ ಭಾರತ ಮಣಿದಿದೆ. ಈ ಮೂಲಕ ರಾಜೀವ್‌ಗಾಂಧಿ ಸರ್ಕಾರ ಭಾರತ ಮಾತ್ರವಲ್ಲ, ಇಡೀ ಮೂರನೇ ಜಗತ್ತಿನ ದೇಶಗಳ ಹಿತಾಸಕ್ತಿಗಳಿಗೆ ತಿಲಾಂಜಲಿ ಇತ್ತಿದೆ. ಅಷ್ಟೇ ಅಲ್ಲ, ಈವರೆಗೆ ಭಾರತ-ಬ್ರೆಜಿಲ್‌ನ ಸಮರ್ಥ ಬೆಂಬಲದಿಂದ-ಸಾಮ್ರಾಜ್ಯಶಾಹಿ ಒತ್ತಡಕ್ಕೆ ನೀಡಿದ ಪ್ರತಿರೋಧದ ನೀತಿ ತಲೆಕೆಳಗಾದಂತಾಗಿದೆ. ಭಾರತ ಮತ್ತು ಬ್ರೆಜಿಲ್ ಇಂತಹ ಪ್ರತಿರೋಧದ ನಾಯಕತ್ವವನ್ನು ಈ ಹಿಂದೆ ವಹಿಸಿದ್ದು ಅಮೇರಿಕ ಎರಡೂ ದೇಶಗಳ ಕೈತಿರುಚಲು ಪ್ರಯತ್ನಿಸುತ್ತಿತ್ತು. ಬ್ರೆಜಿಲನ ಮೇಲೆ ವ್ಯಾಪಾರ ನಿರ್ಬಂಧ ಹಾಕಲು ಹವಣಿಸುತ್ತಿದ್ದಾಗ, GATT ಗೆ ದೂರು ನೀಡಿ ಅದಕ್ಕೆ ಬ್ರೆಜಿಲ್ ತಡೆಹಾಡುವ ಮೂಲಕ ತೀವ್ರ ಪ್ರತಿರೋಧ ಒಡ್ಡಿತು. ಆದರೆ ಭಾರತ ಈ ಒತ್ತಡಕ್ಕೆ ಮಣಿದಿದೆ.

ಭಾರತದ ಮೇಲೆ ಒತ್ತಡ ಹಲವು ರೂಪತಾಳಿತ್ತು. ವಿಜ್ಞಾನ ಮತ್ತು ತಂತ್ರಜ್ಞಾನ ಒಪ್ಪಂದ ನವೀಕರಿಸಲು ಭಾರತ ಪೇಟೆಂಟ್ಸ್ ಕಾನೂನು-1970 ಬದಲಾಯಿಸಬೇಕೆಂದು ಹಾಗೂ ಪ್ಯಾರಿಸ್ ಸಮಾವೇಶಕ್ಕೆ ಸಹಿ ಮಾಡಬೇಕೆಂಬ ಶರತ್ತು ಹಾಕಿತ್ತು. ಇದೇ ಶರತ್ತುಗಳನ್ನು ಸೂಪರ್ ಕಂಪ್ಯೂಟರ್ ಮಾರಾಟಕ್ಕೂ, LCA ನಂತಹ ಮಿಲಿಟರಿ ಉಚ್ಚ ತಂತ್ರಜ್ಞಾನದ ಕಾರ್ಯಕ್ರಮಗಳಿಗೆ ಸಹಾಯ ಮಾಡಲು ಅಮೇರಿಕ ವಿಧಿಸಲು ಪ್ರಯತ್ನಿಸುತ್ತಿತ್ತು.

‘ಬೌದ್ಧಿಕ ಆಸ್ತಿ ಹಕ್ಕು’ ಗಳೆಂದರೇನು?

ಆಧುನಿಕ ಕೈಗಾರಿಕಾ ಉತ್ಪಾದನಾ ಶಕ್ತಿಗಳನ್ನು ಬೆಳೆಸುವುದರಲ್ಲಿ, ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರಗಳಲ್ಲಿ ಸಂಶೋಧನೆಗೆ ಭಾರಿ ಪ್ರಮಾಣದಲ್ಲಿ ಹಣ ತೊಡಗಿಸಬೇಕಾಗುತ್ತದೆ. ಇಂತಹ ಹಲವು ಕಾರ್ಯಕ್ರಮಗಳಲ್ಲಿ ಕೆಲವೇ ಹೊಸ ಕೈಗಾರಿಕಾ ಉತ್ಪನ್ನ ಅಥವಾ ಪ್ರಕ್ರಿಯೆಯಾಗಿ ಪರಿಣಮಿಸಬಹುದು. ಆದ್ದರಿಂದ ತೊಡಗಿಸಿದ ಈ ಹಣ ವಾಪಸು ಪಡೆಯಲು ಉಳಿದವರು ಈ ಜ್ಞಾನವನ್ನು ಎರವಲು ಪಡೆಯಲು, ಕದಿಯಲು ಆಗದಿರಲು ಇಂತಹ ಉತ್ಪನ್ನ ಅಥವಾ ಪ್ರಕ್ರಿಯೆ ಜ್ಞಾನವನ್ನು ಖಾಸಗಿ ಆಸ್ತಿ ತರಹ ಪರಿಗಣಿಸಬೇಕೆಂದು, ಈ ರೀತಿ ಮಾತ್ರ ಅವಿಷ್ಕಾರಕ್ಕೆ ಪ್ರೋತ್ಸಾಹಕೊಡಬಹುದೆಂದು ಹಲವರ ವಾದ. ಇದಕ್ಕಾಗಿ ಬಂಡವಾಳಶಾಹಿ ದೇಶಗಳಲ್ಲಿ ಬಹಳ ಹಿಂದೆ ಪೇಟೆಂಟ್ ವ್ಯವಸ್ಥೆ ಆರಂಭವಾಯಿತು. ಪೇಟೆಂಟ್ಸ್ ಅಲ್ಲದೆ ಟ್ರೇಡ್‌ಮಾರ್ಕ್ ನೊಂದಾವಣಿ ಮತ್ತು ಕಾಪಿರೈಟ್‌ಗಳನ್ನೊಳಗೊಂಡಂತೆ ಜ್ಞಾನವನ್ನು ಒಂದು ಖಾಸಗಿ ಆಸ್ತಿಹಕ್ಕಿನಂತೆ ಪರಿಗಣಿಸುವ ಒಟ್ಟಾರೆ ವ್ಯವಸ್ಥೆಯನ್ನು ‘ಬೌದ್ಧಿಕ ಆಸ್ತಿಹಕ್ಕು’ಗಳು ಎನ್ನುತ್ತಾರೆ. ಇದರಲ್ಲಿ ಪೇಟೆಂಟ್ ವ್ಯವಸ್ಥೆ ವಸಾಹತು ಶಾಹಿ ಸಂದರ್ಭದಲ್ಲಿ ಹುಟ್ಟಿ ಬಂದಿದ್ದು, ನವ ವಸಾಹತುಶಾಹಿ ಹಿನ್ನೆಲೆಯಲ್ಲಿ ಶ್ರೀಮಂತ ಸಾಮ್ರಾಜ್ಯಶಾಹಿ ದೇಶಗಳಿಗೆ ಅನುಕೂಲಕರವಾಗಿದೆ. ಜ್ಞಾನದ ಏಕ ಸ್ವಾಮ್ಯ ಸಾಧಿಸುವಲ್ಲಿ, ಮೂರನೇ ಜಗತ್ತಿನ ದೇಶಗಳ ಸಂಶೋಧನೆ, ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಸ್ವಾವಲಂಬನೆ ಹಿಚುಕುವಲ್ಲಿ ಸಾಮ್ರಾಜ್ಯಶಾಹಿ ಉಪಕರಣವಾಗಿದೆ. ಜಗತ್ತಿನಲ್ಲಿ ನೊಂದಣಿಯಾದ ಪೇಟೆಂಟ್ ಗಳಲ್ಲಿ ಶೇಕಡಾ 85 ಕೆಲವೇ ಕೆಲವು ಬಹು ರಾಷ್ಟ್ರೀಯ ಸಂಸ್ಥೆಗಳ ಕೈಯಲ್ಲಿದೆ. ಆದ್ದರಿಂದ ಸ್ವಾವಲಂಬನೆ ಸಾಧಿಸಲು ಪ್ರಯತ್ನಿಸಿದ ಪ್ರಮುಖ ಮೂರನೆಯ ಜಗತ್ತಿನ ದೇಶಗಳು, (ಭಾರತ, ಬ್ರೆಜಿಲ್ ಇವುಗಳಲ್ಲಿ ಪ್ರಮುಖ) ಈ ಪೇಟೆಂಟ್ ವ್ಯವಸ್ಥೆಯನ್ನು ವಿರೋಧಿಸಿ, ತಮ್ಮ ಹಿತಾಸಕ್ತಿಗಳಿಗೆ ಅನುಗುಣವಾದ ಪೇಟೆಂಟ್ ಕಾನೂನುಗಳನ್ನು ತಂದವು. ಭಾರತ ಪೇಟೆಂಟ್ ಕಾನೂನು (1970) ಇಂತಹ ಕಾನೂನು. (ಇದರ ಮುಖ್ಯ ಅಂಶಗಳಿಗೆ ಬಾಕ್ಸ್‌ನೋಡಿ) ಈ ಕಾನೂನು ಭಾರತ ಆಗ ಅನುಸರಿಸುತ್ತಿದ್ದ-ಆಮದಾಗುತ್ತಿದ್ದ ಉತ್ಪನ್ನಗಳಿಗೆ, ಪೇಟೆಂಟ್ ಆದ ಬದಲಿ ಉತ್ಪನ್ನಗಳಿಗೆ ಉತ್ಪನ್ನಗಳನ್ನು ತಯಾರಿಸುವ ತಂತ್ರಜ್ಞಾನ ಕರಗತ ಮಾಡುವ ನೀತಿಗೆ ಅನುಗುಣವಾಗಿತ್ತು. ಈ ಕಾನೂನು ಭಾರತದ ಸ್ವಾವಲಂಬನೆಗೆ ಅಂತ ರ್ರಾಷ್ಟ್ರೀಯ ಪೇಟೆಂಟ್ ವ್ಯವಸ್ಥೆಯಿಂದ ಆಗುತ್ತಿದ್ದ ತೊಂದರೆಗಳ ಅನುಭವದ ಆಧಾರದ ಮೇಲೆ ರಚಿಸಲಾಗಿತ್ತು. ಸ್ಥಳೀಯ ವಿಜ್ಞಾನ ಮತ್ತು ತಂತ್ರಜ್ಞಾನ ಬೆಳವಣಿಗೆ, ಕೈಗಾರಿಕೆಯ ರಕ್ಷಣೆಯ ಉದ್ದೇಶ ಹೊಂದಿತ್ತು.

ಇದರ ಮೊದಲು ವಿದೇಶೀ ಕಂಪನಿಗಳು ತಮ್ಮ ಉತ್ಪನ್ನಗಳಿಗೆ ಭಾರತದಲ್ಲಿ ಪೇಟೆಂಟ್ ತೆಗೆದುಕೊಂಡು, ಆ ಉತ್ಪನ್ನಗಳನ್ನು ದೇಶದಲ್ಲಿ ತಯಾರಿಸು ತ್ತಿರಲಿಲ್ಲ. ತಮ್ಮ ಮೂಲಕ ವಿದೇಶಿ ಕಂಪನಿಗಳಿಂದ ಆಮದುಮಾಡಿ ಭಾರೀ ದುಬಾರಿ ಬೆಲೆಗೆ ಮಾರುತ್ತಿದ್ದವು. ಅಂದರೆ ಪೇಟೆಂಟ್ ದೇಶೀ ಕಂಪನಿಗಳು ಇದೇ ಉತ್ಪನ್ನವನ್ನು ತಯಾರಿಸದಂತೆ ತಡೆಯುವ ಉಪಕರಣ ಮಾತ್ರವಾಗಿತ್ತು. ಅಲ್ಲದೆ ತಮ್ಮ ವಿಶಿಷ್ಟ ಉತ್ಪನ್ನಗಳನ್ನು, ದೇಶೀ ಕಂಪನಿಗಳು ತಾವೇ ಸಂಶೋಧನೆ ಮಾಡಿ ಅಭಿವೃದ್ಧಿಗೊಳಿಸುವ ಬೇರೆ ಉತ್ಪದನಾ ಪ್ರಕ್ರಿಯೆಯಿಂದ ತಯಾರಿಸು ವುದರ ವಿರುದ್ಧ ಕೋರ್ಟಿಗೆ ಹೋಗಿ ತಮ್ಮ ಏಕಸ್ವಾಮ್ಯ ಉಳಿಸಿ ಕೊಳ್ಳುತ್ತಿದ್ದವು. ಹೆಯ್ಸ್ಟ್ (HOECHST) ಎಂಬ ಸ್ವಿಸ್ ಕಂಪನಿ ಲ್ಯಾಬ್ಸ್ ಎಂಬ ಭಾರತೀಯ ಕಂಪನಿ ವಿರುದ್ಧ ಟೋಲ್ ಬುಟಾಮೈಡ್ (tolbutamide) ಎಂಬ ಪೇಟೆಂಟ್ ಆದ ಔಷಧಿಯನ್ನು ಬೇರೆ ರೀತಿಯಲ್ಲಿ ಉತ್ಪಾದಿಸುವುದರ ವಿರುದ್ಧ ಕೋರ್ಟಿಗೆ ಹೋಗಿ ವಿಜಯಿಯಾಯಿತು. ಅಂದರೆ ಆಗಿದ್ದ ಕಾನೂನು ಪ್ರಕಾರ ಬರೇ ಉತ್ಪಾದನಾ ತಂತ್ರಜ್ಞಾನ ಮಾತ್ರವಲ್ಲ, ಉತ್ಪನ್ನವೇ ಕಂಪನಿಯ ಏಕಸ್ವಾಮ್ಯ ಎಂದಾಯಿತು.

ಔಷಧಿ ಕೈಗಾರಿಕೆಯಲ್ಲಿ ಸ್ವಾವಲಂಬನೆ

ಹೊಸದಾಗಿ ಬಂದ ಈ ಕಾನೂನು ತತ್‌ಕ್ಷಣ ಪರಿಣಾಮ ಬೀರಿತು. ನೊಂದಣಿಯಾಗುವ ವಿದೇಶೀ ಪೇಟೆಂಟ್‌ಗಳ ಸಂಖ್ಯೆ ಅರ್ಧಕ್ಕಿಳಿಯಿತು. ದೇಶದೊಳಗಿನ ಪೇಟೆಂಟ್‌ಗಳ ಸಂಖ್ಯೆ ಮೊದಲಿನಷ್ಟೇ ಇತ್ತು. ಅತ್ಯಂತ ಉತ್ತಮ ಪರಿಣಾಮ ಬೀರಿದ್ದು ಔಷಧಿ ಕೈಗಾರಿಕೆ ಮೇಲೆ. ಔಷಧಿ ವಸ್ತುಗಳಲ್ಲಿ ಉತ್ಪಾದನಾ ಪ್ರಕ್ರಿಯೆಯ ಮೇಲೆ ಮಾತ್ರ ಪೇಟೆಂಟ್ ಅನ್ವಯವಾಗುವುದುದರಿಂದ ಅದೇ ಔಷಧಿಯನ್ನು ಬೇರೆ ರೀತಿಯಲ್ಲಿ ತಯಾರಿಸುವುದರಲ್ಲಿ ಸಂಶೋಧನಾ ಕಾರ್ಯದಲ್ಲಿ ತೊಡಗಿ ಔಷಧಿ ಕೈಗಾರಿಕೆಯ ‘ದೇಶೀಯ’ ಕ್ಷೇತ್ರ ಹೆಮ್ಮರವಾಗಿ ಬೆಳೆಯಿತು. ದೇಶೀಯ ಔಷಧಿ ಕೈಗಾರಿಕಾ ಉತ್ಪಾದನೆ 1974-75 ರಲ್ಲಿ 56 ಕೋಟಿ ರೂ. ಇದ್ದಿದ್ದು 1985-86 ರಲ್ಲಿ 341 ಕೋಟಿರೂ-ಆಗಿದೆ. ಅದೇ ಅವಧಿಯಲ್ಲಿ ವಿದೇಶೀ ಕಂಪನಿಗಳ ಉತ್ಪಾದನೆ 34 ಕೋಟಿ ರೂ.ಗಳಿಂದ 75 ಕೋಟಿ ರೂ. ಗಳಿಗೇರಿದೆ. ಹೊಸ ಔಷಧಿಗಳು ಅಂತರ್ರಾಷ್ಟ್ರೀಯ ಮಾರುಕಟ್ಟೆಗೆ ಬಂದು, ಅದು ಭಾರತದಲ್ಲಿ ಸ್ಥಳೀಯವಾಗಿ ತಯಾರಾಗಿ ಲಭ್ಯವಾಗುವ ಕಾಲಾವಧಿ 5 ರಿಂದ 10 ವರ್ಷಗಳಷ್ಟು ಕಡಿಮೆಯಾಯಿತು. ಅಂದರೆ ಬೇಗ ಬೇಗ ಮಾರುಕಟ್ಟೆಗೆ ಬರಲಾರಂಭಿಸಿತು.

ಸ್ವಾಭಾವಿಕವಾಗಿಯೇ ಇಂತಹ ಪೇಟೆಂಟ್ ಕಾನೂನನ್ನು ಬದಲಾಯಿಸಲು ಬಹುರಾಷ್ಟ್ರೀಯ ಕಂಪನಿಗಳು ಎಲ್ಲಾ ಪ್ರಯತ್ನಮಾಡುತ್ತಿವೆ. 80 ರ ದಶಕದ ‘ಉದಾರನೀತಿ’ ಯ ‘ಹೊಸ ಉಚ್ಚ ತಂತ್ರಜ್ಞಾನ ಸಿಗುವುದಾದರೆ ಏನಕ್ಕೂ ತಯಾರು’ ಎಂಬ ರಾಜೀವ್ ಸರ್ಕಾರ ನೀತಿ ಇದಕ್ಕೆ ಪೂರಕವಾಗಿದೆ. ದೇಶದ ಅಧಿಕಾರಶಾಹಿ ವಲಯಗಳಲ್ಲೂ, ಕೆಲವು ಕೈಗಾರಿಕೋದ್ಯಮಿ ವಲಯಗಳಲ್ಲೂ ಪೇಟೆಂಟ್ ಕಾನೂನು ಬದಲಾಗದೆ ನಮಗೆ ಹೊಸ ಉಚ್ಚ ತಂತ್ರಜ್ಞಾನ ಸಿಗುವುದಿಲ್ಲ. ವಿದೇಶೀ ಕಂಪನಿಗಳು ದೇಶದಲ್ಲಿ ಬಂಡವಾಳ ತೊಡಗಿಸಲು ಹಿಂದೆ ಮುಂದೆ ನೋಡುತ್ತಿವೆ ಎಂಬ ವಾದ ಎದ್ದಿದೆ.

ಪೇಟೆಂಟ್ ಕಾನೂನು ಬದಲಾವಣೆ ಏಕೆ ಬೇಡ?

ಇದು ರಾಜೀವ್ ಸರ್ಕಾರ ಸಾಮ್ರಾಜ್ಯಶಾಹಿ (ಅದರಲ್ಲೂ ಅಮೇರಿಕನ್) ಒತ್ತಡಕ್ಕೆ ಮಣಿಯುತ್ತಿರುವುದರ ಸಂಕೇತ. ಇಂತಹ ದ್ರೋಹಕ್ಕೆ ರಂಗ ಸಿದ್ಧ ಮಾಡುತ್ತಿರುವ ಸೂಚನೆ. ಪೇಟೆಂಟ್ ಕಾನೂನು ಬದಲಾಯಿಸಿ, ಪ್ಯಾರೀಸ್ ಒಪ್ಪಂದಕ್ಕೆ ಸಹಿ ಹಾಕಿ ಬಹುರಾಷ್ಟ್ರೀಯ ಸಂಸ್ಥೆಗಳ ‘ಬೌದ್ಧಿಕ ಆಸ್ತಿ ಹಕ್ಕುಗಳನ್ನು’ ಮಾನ್ಯ ಮಾಡುವುದರ ಪರಿಣಾಮ ಏನು?

ಇಂತಹ ಬದಲಾವಣೆಗೆ ವಾದಿಸುತ್ತಿರುವವರು ಹೇಳುವಂತೆ ಇದರಿಂದ ಉಚ್ಚ ತಂತ್ರಜ್ಞಾನ ನ್ಯಾಯಬೆಲೆಯಲ್ಲಿ ದೇಶಕ್ಕೆ ಲಭ್ಯವಾಗುತ್ತದೆಯೆ? ಇಲ್ಲವೆನ್ನುತ್ತಾರೆ ವಿದೇಶೀ ತಂತ್ರಜ್ಞಾನ ಆಮದನ್ನು ಭಾರತ ಮಾತ್ರವಲ್ಲ, ಇತರ ಮೂರನೆಯ ಜಗತ್ತಿನ ದೇಶಗಳಲ್ಲೂ ಅಧ್ಯಯನ ಮಾಡಿರುವವರು. ಸಾಮಾನ್ಯವಾಗಿ ಮೂರನೇಯ ಜಗತ್ತು ಆಮದು ಮಾಡುವುದು ಪೇಟೆಂಟ್ ಆಗಿರದ ತಂತ್ರಜ್ಞಾನ. ಏಕೆಂದರೆ ಪೇಟೆಂಟ್ ಆದ ತಂತ್ರಜ್ಞಾನ ಅತಿ ದುಬಾರಿಯಾಗಿರುತ್ತದೆ.

1970 ಪೇಟೆಂಟ್ ಕಾನೂನು ತಂದಾಗ ವಿದೇಶೀ ಉಚ್ಚ ತಂತ್ರಜ್ಞಾನ ನಿಂತು ಹೋಗಬಹುದು ಎಂಬ ಮಾತನ್ನು ಹೇಳಲಾಗುತ್ತಿತ್ತು. ಆದರೆ ಅಧ್ಯಯನದ ಪ್ರಕಾರ ಇಂತಹ ಏನೂ ಪರಿಣಾಮ ಕಂಡುಬಂದಿಲ್ಲ. 1965-70ರಲ್ಲಿ ಒಟ್ಟಾರೆ ವಿದೇಶೀ ತಂತ್ರಜ್ಞಾನ ಆಮದಿನಲ್ಲಿ ಕಾಲು ಭಾಗ ಪೇಟೆಂಟ್ ಆದ ತಂತ್ರಜ್ಞಾನವಿದ್ದು 1970-75 ರ ಅವಧಿಯಲ್ಲೂ (ಪೇಟೆಂಟ್ ಕಾನೂನು ಬಂದ ನಂತರ) ಅಷ್ಟೇ ಇತ್ತು.

ಆದರೆ ಪೇಟೆಂಟ್ ಕಾನೂನನ್ನು ಪ್ಯಾರೀಸ್ ಒಪ್ಪಂದಕ್ಕೆ ಅನುಗುಣವಾಗಿ ಬದಲಾಯಿಸುವುದರ ದುಷ್ಪರಿಣಾಮಗಳು ಹಲವು. ತತ್‌ಕ್ಷಣದ ಪರಿಣಾಮ ಔಷಧಿ ಕೈಗಾರಿಕೆ ಮೇಲೆ. ಔಷಧಿಗಳ ಬೆಲೆ ಮತ್ತು ಲಭ್ಯತೆಯ ಮೇಲೆ ಆಗುತ್ತದೆ. ದೇಶಿಯ ಔಷಧಿ ಕಂಪನಿಗಳು ಪೇಟೆಂಟ್ ಆದ ಹಲವು ಪ್ರಮುಖ ಔಷಧಿ ರಾಸಾಯನಿಕಗಳನ್ನು ತಮ್ಮದೇ ಆದ ಉತ್ಪಾದನಾ ವಿಧಾನಗಳಿಂದ ತಯಾರಿಸುತ್ತಿವೆ. ಪೇಟೆಂಟ್ ಕಾನೂನು ಬದಲಾಯಿಸಿದರೆ ಈ ಔಷಧಿಗಳನ್ನು ತಯಾರಿಸುವಂತೆ ಇಲ್ಲ. ಪೇಟೆಂಟ್ ಮಾಡಿದ ವಿದೇಶೀ ಕಂಪನಿ ಸ್ಥಳೀಯ ವಾಗಿ ಈ ಔಷಧಿ ತಯಾರಿಸಲು ಹೆಚ್ಚಾಗಿ ಸಿದ್ಧವಿರುವುದಿಲ್ಲ. ಅದನ್ನು ದುಬಾರಿ ಬೆಲೆಯಲ್ಲಿ ಆಮದು ಮಾಡಬಹುದು. ಸ್ಥಳೀಯವಾಗಿ ತಯಾರಿಸಿದರೂ (ಪೇಟೆಂಟ್ ಶುಲ್ಕ ಕೊಟ್ಟು) ಅದು ಅಂತರ್ರಾಷ್ಟ್ರೀಯ ಬೆಲೆಗಳಿಗಿಂತ ಜಾಸ್ತಿ ಆಗಬಹುದು. ಆಮದು ಮಾಡುವುದಾದರೆ ಔಷಧಿ ಸುಲಭ ಲಭ್ಯತೆ ಅನುಮಾನಾಸ್ಪದವೇ. ಪ್ಯಾರೀಸ್ ಒಪ್ಪಂದಕ್ಕೆ ಸಹಿಹಾಕಿದರೆ ಔಷಧಿ ಕೈಗಾರಿಕೆ ಕ್ಷೇತ್ರ ಒಂದರಲ್ಲೇ ಸುಮಾರು 400-500 ಕೋಟಿ ರೂ.ಗಳಷ್ಟು ವಿದೇಶೀ ವಿನಿಮಯ ದೇಶಕ್ಕೆ ನಷ್ಟವಾಗುಹುದು ಎಂದು ಅಂದಾಜು ಮಾಡಲಾಗಿದೆ.

ಪ್ಯಾರಿಸ್ ಒಪ್ಪಂದ-1883

ಪೇಟೆಂಟ್ ವಾಣಿಜ್ಯ ಮಹತ್ವವಿರುವ ವಿಜ್ಞಾನ ಮತ್ತು ತಂತ್ರಜ್ಞಾನ ಅವಿಷ್ಕಾರಗಳ ವಾಣಿಜ್ಯ ಉಪಯೋಗದ ಏಕಸ್ವಾಮ್ಯ ಹಕ್ಕನ್ನು ಅವಿಷ್ಕಾರ ಮಾಡಿದ ವ್ಯಕ್ತಿ ಅಥವಾ ಕಂಪನಿಗೆ ಒದಗಿಸುವ ವ್ಯವಸ್ಥೆ. ಇಂತಹ ಪೇಟೆಂಟ್‌ಗಳಿಗೆ ಅಂತರ್ರಾಷ್ಟ್ರೀಯ ಮಾನ್ಯತೆ ಇಲ್ಲದೆ, ಸರಕುಗಳ ಅಂತರ್ರಾಷ್ಟ್ರೀಯ ವ್ಯಾಪಾರ ಹೆಚ್ಚುತ್ತಿರುವ ಈ ಕಾಲ ಘಟ್ಟದಲ್ಲಿ ಏನೂ ಅರ್ಥವಿಲ್ಲ. ಪ್ಯಾರಿಸ್‌ನಲ್ಲಿ 1883ರಲ್ಲಿ 91ದೇಶಗಳು ಸೇರಿ ಪೇಟೆಂಟ್‌ಗಳ ಬಗ್ಗೆ ಒಂದು ಅಂತರ್ರಾಷ್ಟ್ರೀಯ ಒಪ್ಪಂದಕ್ಕೆ ಸಹಿ ಹಾಕಿದವು. ಈ ಒಪ್ಪಂದದ ಆಧಾರದ ಮೇಲೆ ಈ ಎಲ್ಲಾ ದೇಶಗಳ ಪೇಟೆಂಟ್ ಕಾನೂನುಗಳು ಇರುತ್ತವೆ.

ಇದರ ಕೆಲವು ಮುಖ್ಯ ಅಂಶಗಳು:

★ ಯಾವುದೇ ಉತ್ಪನ್ನ ಮತ್ತು ಅದರ ಉತ್ಪಾದನಾ ಪ್ರಕ್ರಿಯೆ ಮತ್ತು ಅದೇ ಜಾತಿಯ ಎಲ್ಲಾ ಉತ್ಪನ್ನಗಳು ಒಂದೇ ಪೇಟೆಂಟ್ ವ್ಯಾಪ್ತಿಗೆ ಒಳಪಡುತ್ತವೆ.

★ ಎಲ್ಲಾ ರೀತಿಯ ಉತ್ಪನ್ನಗಳನ್ನೂ, ಉತ್ಪಾದನಾ ಪ್ರಕ್ರಿಯೆಗಳನ್ನು ಪೇಟೆಂಟ್ ಮಾಡಬಹುದು.

★ ಪೇಟೆಂಟ್‌ಗೆ ಯಾವುದೇ ಗರಿಷ್ಟ ಅವಧಿ ಇಲ್ಲ. ಆದರೆ ಪ್ಯಾರಿಸ್ ಒಪ್ಪಂದಕ್ಕೆ ಸಹಿ ಹಾಕಿರುವ ಅಭಿವೃದ್ಧಿದೇಶಗಳಲ್ಲಿ 15-20 ವರ್ಷಗಳ ಅವಧಿ ಸಾಮಾನ್ಯ.

ಇದೇರೀತಿ ಕಾಪಿರೈಟ್‌ಗಳ ಬಗ್ಗೆ 75-ದೇಶಗಳು ಬಾನ್‌ನಲ್ಲಿ ಒಪ್ಪಂದ ಮಾಡಿಕೊಂಡಿವೆ. ಇವೆರಡು ಒಪ್ಪಂದಗಳ ಜಾರಿ ಮತ್ತು ಇತರ ಉಸ್ತುವಾರಿಯನ್ನು ಜಿನೇವಾದಲ್ಲಿರುವ “ವಿಶ್ವ ಬೌದ್ಧಿಕ ಆಸ್ತಿ ಹಕ್ಕು”ಗಳ ಸಂಘಟನೆ ನೋಡಿಕೊಳ್ಳುತ್ತದೆ. ಭಾರತ ಈ ಸಂಘಟನೆಗಾಗಲಿ ಪ್ಯಾರೀಸ್, ಬಾನ್, ಸಮಾವೇಶಗಳಿಗೆ ಸದಸ್ಯ ದೇಶವಲ್ಲ. ಅಂದರೆ “ಬೌದ್ಧಿಕ ಆಸ್ತಿ ಹಕ್ಕು”ಗಳಿಗೆ ಮಾನ್ಯತೆ ನೀಡಿಲ್ಲ ಈವರೆಗೆ.

ಭಾರತದ ಪೇಟೆಂಟ್ಸ್ ಕಾನೂನು1970

1970-ರಲ್ಲಿ ಭಾರತ ಸರ್ಕಾರ ಒಂದು ಹೊಸ ಪೇಟೆಂಟ್ಸ್ ಕಾನೂನು ಜಾರಿಗೆ ತಂದಿತು. ಇದಕ್ಕಿಂತ ಮೊದಲು 1971ರಿಂದ ಜಾರಿಯಲ್ಲಿದ್ದ ಕಾನೂನು, ಪ್ಯಾರಿಸ್ ಒಪ್ಪಂದದ ಆಧಾರದ ಮೇಲೆ ಇತ್ತು. ಆದರೂ ಭಾರತ ಈ ಒಪ್ಪಂದಕ್ಕೆ ಸಹಿ ಮಾಡಿರಲಿಲ್ಲ. ಸಾಮ್ರಾಜ್ಯಶಾಹೀ ದೇಶಗಳಿಗೆ ಅನುಕೂಲಕರವಾದ ಪೇಟೆಂಟ್ಸ್ ವ್ಯವಸ್ಥೆಗೆ ವಿರುದ್ಧವಾದ ಮತ್ತು ಭಾರತದ ಸ್ವಾವಲಂಬನೆಗೆ ಕ್ರಮಗಳನ್ನು ಪೇಟೆಂಟ್ಸ್ ಕಾನೂನು ಒಳಗೊಂಡಿದೆ.

ಈ ಕಾನೂನಿನ ಕೆಲವು ಮುಖ್ಯ ಅಂಶಗಳು

ಯಾವುದೇ ಉತ್ಪನ್ನ ಅಥವಾ ಉತ್ಪಾದಿಸುವ ಪ್ರಕ್ರಿಯೆಗೆ ಪೇಟೆಂಟ್‌ಗಳನ್ನು ಪಡೆಯುವುದು ಸಾಧ್ಯ. ಈಗಾಗಲೇ ಆಹಾರ,ರಾಸಾಯನಿಕ ಮತ್ತು ಔಷಧಿಗಳಲ್ಲಿ ಪ್ರಕ್ರಿಯೆಗಳ ಮೇಲೆ ಮಾತ್ರ ಪೇಟೆಂಟ್ ಮಾಡಲು ಸಾಧ್ಯ.

★ ಪ್ರಾಣಿಗಳು ಮತ್ತು ಮನುಷ್ಯರ ಶು[illegible]ಷೆಗೆ ಸಂಬಂಧಪಟ್ಟ ಕೃಷಿ ಉತ್ಪನ್ನಗಳು ಮತ್ತು ಪಕ್ರಿಯೆಗಳನ್ನು ಪೇಟೆಂಟ್ ಮಾಡಲು ಬರುವುದಿಲ್ಲ. ಏಕೆಂದರೆ ಇವನ್ನು ಅವಿಷ್ಕಾರಗಳು ಎಂದು ಪರಿಗಣಿಸಲಾಗುವುದಿಲ್ಲ. ಅಣು ತಂತ್ರಜ್ಞಾನಗಳಿಗೆ ಸಂಬಂಧಪಟ್ಟಂತೆ ಸಹ ಪೇಟೆಂಟ್‌ಗಳನ್ನು ಅಂಗೀಕರಿಸ ಲಾಗುವುದಿಲ್ಲ.

★ ಯಾವುದೇ ಪೇಟೆಂಟ್ ಪಡೆದ ವ್ಯಕ್ತಿ ಅಥವಾ ಕಂಪನಿ ಅವಿಷ್ಕಾರವನ್ನು ಉಪಯೋಗಿಸದಿದ್ದರೆ ಅಥವಾ ವಿಪರೀತ ದುಬಾರಿ ಬೆಲೆಗಳನ್ನು ಹೇರಿದರೆ, ಇತರ ಕಂಪನಿಗಳಿಗೆ ಅದೇ ಉತ್ಪನ್ನ ತಯಾರಿಸುವ ಲೈಸೆನ್ಸ್ ಕೊಡುವ ಅಧಿಕಾರ ಸರ್ಕಾರಕ್ಕಿರುತ್ತದೆ.

★ ಆಹಾರ, ರಾಸಾಯನಿಕಗಳು ಮತ್ತು ಔಷಧಿಗಳ ಪೇಟೆಂಟ್ ಅವಧಿ 5-7 ವರ್ಷಗಳಾದರೆ, ಇತರ ಎಲ್ಲಾ ಪೇಟೆಂಟ್‌ಗಳ ಅವಧಿ 14ವರ್ಷಗಳು.

ಬೌದ್ಧಿಕ ಗುಲ

“ಭಾರತ ಪೇಟೆಂಟ್ಸ್ ಕ
ಬದಲಾಯಿಸಿದರೆ, ಇದು ಭ
ನೀಡಿದಂತೆ. ಅವು ಮುಚ್ಚಬೇಕ
....ಔಷಧಿ ಬೆಲೆಗಳು ಪೇ
ಬೆಲೆಗಳಿಗಿಂತಲೂ ಹೆಚ್ಚಾಗಬಹುದ
-ವಿನೂಬಾಯಿ ಶಾ

★ “ಪ್ಯಾರಿಸ್ ಒಪ್ಪಂದಕ್ಕೆ ಸ
ಪತ್ರಕ್ಕೆ ಸಹಿ ಹಾಕಿ ಅಭಿವೃದ್ಧ ದೇ
-ನ್ಯಾಯಮೂರ್ತಿ ಜೆ.ಸಿ.ಶಾಹ

★ (ಪೇಟೆಂಟ್ ಕಾನೂನು ಬ
ದೇಶೀಯ ಕೈಗಾರಿಕಾ ಮತ್ತು
ಮೇಲೆ ದುಷ್ಪರಿಣಾಮ ಬೀರಬ
ನಮ್ಮ ಸಂಶೋಧನಾ ಸಂಸ್ಥೆಗಳು
-ಪೇಟೆಂಟ್ ಕಾನೂನು ಬದ
ಕೈಗಾರಿಕೋದ್ಯಮಿಗಳ ಸಂಘಟನೆ.
“ವಿದೇಶೀ ಪೇಟೆಂಟ್‌ದಾರರ ಏಕ
ಮಾಜಿ ನ್ಯಾಯಮೂರ್ತಿ ವ್ಹ.ವಿ

ಹೊಸ ತಂತ್ರಜ್ಞಾನಗಳಿಗೆ ಕಡಿವಾಣ

ಇನ್ನೂ ಹಲವು ಕ್ಷೇತ್ರಗಳಲ್ಲಿ ಪರಿಣಾಮ ತತ್‌ಕ್ಷಣಕ್ಕೆ ಕಾಣದಿದ್ದರೂ, ಇಂತಹುದೇ ಪರಿಣಾಮಗಳು ಕಂಡು ಬರಬಹುದು ಉತ್ತಮ ತಳಿಯ ಕೃಷಿ ಬೀಜಗಳು ಪ್ಯಾರೀಸ್ ಒಪ್ಪಂದದ ಪ್ರಕಾರ ಪೇಟೆಂಟ್‌ಗೆ ಒಳಪಡುತ್ತವೆ. ನೂತನ ಬೀಜ ನೀತಿಯ ಪ್ರಕಾರ ಇದರ ಆಮದನ್ನು ಸುಲಭಗೊಳಿಸಿದ್ದು,ಸ್ಥಳೀಯ ಸಂಶೋಧನೆ ಬೆಳವಣಿಗೆಗೆ ಕೊಡಲಿ ಏಟು ಕೊಡಲಾಗಿದೆ. ಬೆಲೆಗಳೂ ಏರುವ ಸಂಭವವಿದೆ. ಇದು ದೇಶದಲ್ಲಿ ಹೊಸದಾಗಿ ಬೆಳೆಯುತ್ತಿರುವ ಜೈವಿಕ ತಂತ್ರಜ್ಞಾನದ ಭವಿಷ್ಯತ್ತಿನ ಮೇಲೆ ಪ್ರಶ್ನೆ ಚಿಹ್ನೆಹಾಕಲಿದೆ. ಜೈವಿಕ ತಂತ್ರಜ್ಞಾನ ಉಪಯೋಗಿಸಿ ಕೃಷಿ-ಕೈಗಾರಿಕೆಗಳಲ್ಲಿ ಉಪಯೋಗವಾಗಬಹುದಾದ ಕೃತಕಸೂಕ್ಷ್ಮ ಜೀವಾಣುಗಳು ಪೇಟೆಂಟ್‌ಗೆ ಒಳಪಡುತ್ತವೆ!

ಜೈವಿಕ ತಂತ್ರಜ್ಞಾನ (Biotechnology) ಉಪಯೋಗಿಸಿ ಈವರೆಗೆ ಕೃಷಿ ಆಧಾರಿತವಾಗಿ ತಯಾರಿಸುತ್ತಿದ್ದ ಸಕ್ಕರೆ, ಕೋಕೋ, (ಕೆಲವು ಔಷಧಿ ಸಹ) ಇತ್ಯಾದಿಗಳನ್ನು ತಯಾರು ಮಾಡುವ ವಿಧಾನಗಳನ್ನು ಯೋಜಿಸಲಾಗುತ್ತಿದೆ. ಇಂತಹ ಹೊಸ ತಂತ್ರಜ್ಞಾನಗಳ ಏಕಸ್ವಾಮ್ಯ ಕೆಲವೇ ಕೆಲವು ಬಹುರಾಷ್ಟ್ರೀಯಸಂಸ್ಥೆಗಳ ಕೈಯಲ್ಲಿದ್ದರೆ, ಅವು ಮೂರನೆಯ ಜಗತ್ತಿನ (ಅದರಲ್ಲೂ ಇಂತಹ ವಸ್ತುಗಳ ಮೇಲೆ ಹೆಚ್ಚು ಕಡಿಮೆ ಆಧಾರಿತ ಆರ್ಥಿಕತೆ ಇರುವ ದೇಶಗಳಲ್ಲಿ) ಆರ್ಥಿಕತೆಯನ್ನು ತಮ್ಮ ಕಪಿಮುಷ್ಟಿಗೆ ಇನ್ನೂ ಭದ್ರವಾಗಿ ತೆಗೆದುಕೊಳ್ಳಬಹುದು. ಇದೇ ಹೊಸದಾಗಿ ಶರವೇಗದಿಂದ ಬೆಳೆಯುತ್ತಿರುವ ಕಂಪ್ಯೂಟರ್‌ನ ತಂತ್ರಜ್ಞಾನಕ್ಕೂ ಅನ್ವಯಿಸುತ್ತದೆ.

ಇಂತಹ ಹೊಸ ತಂತ್ರಜ್ಞಾನಗಳಲ್ಲಿ ಮೂರನೆಯ ಜಗತ್ತಿನ ದೇಶಗಳು ಕಾಲಿಡದಂತೆ, ಬೆಳೆಸದಂತೆ ಪೇಟೆಂಟ್ ಅಸ್ತ್ರಬಳಸಬಹುದು. ಹಾಗೂ ಅದರ ಉತ್ಪನ್ನಗಳನ್ನು ದುಬಾರಿ ಬೆಲೆಗೆ ಈ ದೇಶಗಳನ್ನೇ ಅಸಹಾಯಕ ಮಾರುಕಟ್ಟೆಗಳನ್ನಾಗಿಸಬಹುದು. ಇಂತಹ ಹೊಸ ತಂತ್ರ ಜ್ಞಾನಕ್ಕೆ ಅನಾಥವಾಗಿ ಈ ಬಹು ರಾಷ್ಟ್ರೀಯ ಸಂಸ್ಥೆಗಳು ಖರ್ಚು ಮಾಡಿವೆ ನಿಜ. ಆದರೆ ಇಂತಹ ವೆಚ್ಚ ಸಹ ಹಿಂದಿನ ಪೇಟೆಂಟ್‌ನ ಉತ್ಪನ್ನಗಳ ಮೇಲೆ ಹಾಕಿದ್ದ ಏಕಸ್ವಾಮ್ಯ ಬೆಲೆಗಳನ್ನೇ ಆಧಾರಿಸಿದ್ದು ಎಂದು ನೆನಪಿನಲ್ಲಿಡ ಬೇಕು.

ಪೇಟೆಂಟ್ ಮತ್ತು ಈ ಕಂಪನಿಗಳ 6 'ಬೌದ್ಧಿಕ ಆಸ್ತಿಹಕ್ಕು'ಗಳ ರಕ್ಷಣೆಯ ಘೋಷಣೆ, ಜಪಾನು ಮತ್ತು ಪ.ಯುರೋಪಿನ ಕಂಪನಿಗಳಿಂದ ಸ್ವದೇಶೀ ಮಾರುಕಟ್ಟೆಗಳಿಂದ ದಬ್ಬಲ್ಪಡುತ್ತಿರುವ ಅಮೇರಿಕನ್ ಕಂಪನಿಗಳ ತಂತ್ರ. ಇದರಲ್ಲಿ ಭಾರತವನ್ನು ಮಣಿಸಿದರೆ ಅವರಿಗೆ ಜಯ ನಿಶ್ಚಿತ. ಭಾರತ ಇದಕ್ಕೆ ಒಪ್ಪಿದರೆ, ನಮ್ಮ ಮತ್ತು ಇಡೀ ಮೂರನೇ ಜಗತ್ತಿನ ಸ್ವಾವಲಂಬನೆ ಸಮಾಧಿ ಮಾಡಿದಂತೆ. ನಮ್ಮ ವಿಜ್ಞಾನವನ್ನು ಕೊಲ್ಲುವ ಸ್ವಾವಲಂಬನೆಯನ್ನು ಬಲಿ ಕೊಡುವ ಈ ರಾಜೀವ ಸರ್ಕಾರ ಕ್ರಮವನ್ನು ಎಲ್ಲಾ ದೇಶಪ್ರೇಮಿಗಳು ವಿರೋಧಿಸಬೇಕು. ಇಂತಹ ಶರಣಾಗತಿ ಆಗಗೊಡದಂತೆ ಚಳುವಳಿ ಹೂಡಬೇಕು.

...ು ವಿರುದ್ಧ ದನಿ

...ತ ರೂಪ ಅಥವಾ ಸಾರವನ್ನು
...ಧಿ ಕಂಪನಿಗಳಿಗೆ ಪಾರಣದಂಡನೆ

ಔಷಧಿಗಳ ಅಂತರಾಷ್ಟ್ರೀಯ

...ರತದ ಔಷಧಿ ತಯಾರಕರ ಸಂಘ
...ಭಾರತ ಬೌದ್ಧಿಕ ಗುಲಾಮಗಿರಿಯ
...ಪ್ರೇರಿತವಾಗಿ ಕೊಟ್ಟಂತೆ"
...ೋರ್ಟ್ ಮುಖ್ಯ ನ್ಯಾಯಾಧೀಶ
...ವೃದಾದರೆ) "ಈ ಬದಲಾವಣೆಗಳು
...ಸ್ಥೆಗಳ ಸಂಶೋಧನಾ ಕಾರ್ಯಗಳ
...ದೇಶೀ ಪೇಟೆಂಟ್‌ದಾರರ ಮುಂದೆ
...ು ಅವಕಾಶ ಕೊಡಬೇಕು."
...ವ FICCI ಮತ್ತು ASSOCHAM

... ಬಹಳಷ್ಟು ಹೆಚ್ಚಾಗುತ್ತದೆ."

GATT-ಉರುಗುವೆ ಸುತ್ತಿನ ಮಾತುಕತೆಗಳು

GATT (General Agreement on Trade and Tariffs) ಅಂತರ್‍ರಾಷ್ಟ್ರೀಯ ವ್ಯಾಪಾರದ ನಿಯಮಗಳನ್ನು ಬೆಲೆಗಳನ್ನು ಮಾತುಕತೆ ಮೂಲಕ ನಿಗದಿ ಮಾಡುವ ಅಂತರ್‍ರಾಷ್ಟ್ರೀಯ ಸಂಘಟನೆ. ಇದರಲ್ಲಿ ಮೂರನೇ ಜಗತ್ತಿನ ದೇಶಗಳು ಬಹುಸಂಖ್ಯಾತವಾಗಿದ್ದರೂ, ಸಾಮ್ರಾಜ್ಯಶಾಹಿ ದೇಶಗಳ ಆರ್ಥಿಕ ಬಲದಿಂದಾಗಿ ಅವರಿಗೆ ಲಾಭದಾಯಕವಾದ ವ್ಯಾಪಾರ ನಿಬಂಧನೆ ಗಳನ್ನು ಈ ಬಹುಮುಖಿ ಮಾತುಕತೆಗಳಲ್ಲಿ ನಮ್ಮ ಮೇಲೆ ಹೇರಲಾಗುತ್ತದೆ. ಈವರೆಗೆ ಈ ಮಾತು ಕತೆಗಳಲ್ಲಿ ಸರಕುಗಳ ವ್ಯಾಪಾರ ಮಾತ್ರ ಸೇರಿತ್ತು. ಈಗ ನಡೆಯುತ್ತಿರುವ ಮಾತುಕತೆಗಳಿಗೆ ಉರುಗುವೇ ಸುತ್ತಿನ ಮಾತುಕತೆಗಳು ಎನ್ನಲಾಗುತ್ತದೆ. ಈ ಮಾತುಕತೆಗಳಲ್ಲಿ ಸರಕುಗಳ ಜತೆ ಸೇವೆಗಳಲ್ಲಿ ಅಂತರ್‍ರಾಷ್ಟ್ರೀಯ ವ್ಯಾಪಾರ ಮತ್ತು "ಬೌದ್ಧಿಕ ಆಸ್ತಿ ಹಕ್ಕು"ಗಳು ಸೇರಬೇಕೆಂದು ಸಾಮ್ರಾಜ್ಯಶಾಹೀ ದೇಶ ಗಳು ಒತ್ತಾಯಿಸುತ್ತಿವೆ.

ಸೇವೆಗಳು ಎಂದರೆ ಸರಕುಗಳ ಉತ್ಪಾದನೆಯಲ್ಲಿ ತೊಡಗಿರದ ಆದರೆ, ಆರ್ಥಿಕತೆಗೆ ಅಗತ್ಯವಾದ ಕ್ಷೇತ್ರ. ಬ್ಯಾಂಕಿಂಗ್, ವಿಮೆ, ಸಾಗಣಿಕೆ (ರಸ್ತೆ ಸಾರಿಗೆ, ರೈಲು ಸಾಗಾಣಿಕೆ, ಸಾಗರ ಸಾಗಾಣಿಕೆ, ಇತ್ಯಾದಿ ಸೇರಿದಂತೆ) ದೂರ ಸಂಪರ್ಕ ಸೇವೆಗಳು ರೇಡಿಯೋ, ಟಿವಿ, ಟೆಲಿಫೋನ್ ಟೆಲಿಗ್ರಾಫ್, ಕಂಪ್ಯೂಟರ್ ಮಾಹಿತಿ ಮುಂತಾದವು ಸೇರಿದಂತೆ, ಸಾರ್ವಜನಿಕ ಆಡಳಿತ, ಈಗೀಗ ಕಂಪ್ಯೂಟರ್ ಸಾಫ್ಟ್‌ವೇರ್ ಇವನ್ನು ಆರ್ಥಿಕತೆಗೆ ಅಗತ್ಯವಾದ ಸೇವೆಗಳು ಎನ್ನಲಾಗುತ್ತದೆ. ಸಾಮಾನ್ಯವಾಗಿ ಈ ಸೇವಾಕ್ಷೇತ್ರಗಳಲ್ಲಿ, ಸಾಮ್ರಾಜ್ಯಶಾಹೀ ದೇಶಗಳು ಸೇರಿದಂತೆ ಎಲ್ಲಾ ದೇಶಗಳಲ್ಲಿ ವಿದೇಶಿಯರಿಗೆ ಪ್ರವೇಶ ವಿರುವುದಿಲ್ಲ. ಸೇವಾಕ್ಷೇತ್ರಗಳಲ್ಲಿ, ವಿದೇಶಿಯರು ಭಾಗವಹಿಸಲು ನಿರ್ಬಂಧವಿರುತ್ತದೆ.

ಸರಕುಗಳ ವ್ಯಾಪಾರ ನಿಯಮ-ನಿಬಂಧನೆಗಳಲ್ಲಿ, ಮೂರನೇ ಜಗತ್ತಿನ ದೇಶಗಳಿಗೆ ಅನುಕೂಲಕರವಾದ ವಿಚಾರಗಳನ್ನು ಸೇರಿಸಬೇಕಾದರೆ, ಸೇವೆಗಳ ಕ್ಷೇತ್ರದ ವ್ಯಾಪಾರವನ್ನು GATT ಮಾತುಕತೆಗಳ ವ್ಯಾಪ್ತಿಗೆ ಸೇರಿಸಬೇಕೆಂದು (ಅಂದರೆ ಸೇವಾಕ್ಷೇತ್ರಗಳಲ್ಲಿ, ಲಾಭದಾಯಕ ವಾದ ಕ್ಷೇತ್ರಗಳಲ್ಲಿ, ಸಾಮ್ರಾಜ್ಯಶಾಹಿಯ ಹಿಡಿತವನ್ನು ಒಪ್ಪಿಸಬೇಕೆಂದು) ಸಾಮ್ರಾಜ್ಯಶಾಹಿ ದೇಶಗಳು ಹಲವು ತಿಂಗಳುಗಳಿಂದ ಲೌಕಾಶಿ ನಡೆಸುತ್ತಿವೆ.

(ಪುಟ 1 ರಿಂದ)

ವಿರೋಧ ಪಕ್ಷಗಳು ರಾಜ್ಯ ಸಭೆಯಲ್ಲಿ ಸರಕಾರವನ್ನು ವಿರೋಧಿಸುವುದನ್ನು ಮುಂದುವರಿಸುತ್ತವೆ. ಪಂಚಾಯತೀ ಮಸೂದೆ ಮೂಲಕ ರಾಜ್ಯಗಳ ಅಧಿಕಾರಗಳ ಅತಿಕ್ರಮಣದ ಆದರ ಪ್ರಯತ್ನಗಳ ವಿರುದ್ಧ ಹೋರಾಡುತ್ತವೆ.

ಲೋಕಸಭೆ ತ್ಯಜಿಸುವ ಈ ಧೀರ ನಿರ್ಧಾರದಿಂದ ವಿರೋಧ ಪಕ್ಷಗಳು ಜನತೆಯನಡುವೆ ಹೋರಾಟಕ್ಕೆ ಮೊದಲಾದಂತಾಗಿದೆ. ಇದುವರೆಗೆ ಎಡ ಪಕ್ಷಗಳನ್ನು ಬಿಟ್ಟರೆ ಇವುಗಳ ಚಟುವಟಿಕೆಗಳು ಸಂಸತ್ತಿಗೇ ಸೀಮಿತಗೊಂಡಿದ್ದವು. ಜನತೆಯನ್ನು ಕಾಂಗ್ರೆಸ್(ಐ) ಮತ್ತು ವಿಭಿನ್ನ ಪ್ರತಿಗಾಮಿ ಶಕ್ತಿಗಳಿಗೆ ಅವರು ಬಿಟ್ಟಿದ್ದರು. ಈಗ ಲೋಕಸಭೆಯ ನಾಲ್ಕು ಗೋಡೆಗಳಿಂದ ಮುಕ್ತರಾಗಿರುವ ಅವರು ಜನತೆಯ ನಡುವೆ ನೇರವಾಗಿ ಹೋಗಲು ರಾಜೀವ್‌ಗಾಂಧಿಯ ರಾಜೀನಾಮೆ ಮತ್ತು ಜನತೆಯ ತುರ್ತು ಬೇಡಿಕೆಗಳ ಬಗ್ಗೆ ಪ್ರಕ್ಷೋಭೆ ನಡೆಸಲು ಸಾಧ್ಯವಾಗಿದೆ.

ಈಗ ಈ ಜಂಟಿ ಕಾರ್ಯಾಚರಣೆ ಜಾಗೃತ ಗೊಳಿಸಿರುವ ಮಹಾನ್ ಉತ್ಸಾಹವನ್ನು ಕ್ರೋಢೀಕರಿಸುವುದು ಈ ತಕ್ಷಣದ ಆವಶ್ಯಕತೆಯೆಂದರೆ ಎಡ ಮತ್ತು ಜಾತ್ಯತೀತ ಶಕ್ತಿಗಳತ್ತ ಒಂದು ಪರ್ಯಾಯ ಗಮನ ಕೇಂದ್ರೀಕರಿಸಿವೆ. ರಾಜೀವ್‌ಗಾಂಧಿ ಮತ್ತು ಅವರ ಸರಕಾರವನ್ನು ಬಯಲಿಗೆಳೆಯುವಲ್ಲಿ, ಅತ್ಯುತ್ತಮ ರೀತಿಯಲ್ಲಿ ಯಶಸ್ವಿಯಾಗಿವೆ. ಸರಕಾರ ಮತ್ತು ಕಾಂಗ್ರೆಸ್(ಐ)ನ ವಿಶ್ವಾಸಾರ್ಹತೆಯನ್ನು ಇಳಿಸುವಲ್ಲಿ ಯಶಸ್ವಿಯಾಗಿವೆ. ಆದರೂ ಬೊಫೋರ್ಸ್ ಪ್ರಶ್ನೆಯನ್ನೇ ಜನತೆಯ ನಡುವೆ ಒಯ್ಯುವುದೇ ತಮ್ಮ ಪ್ರಮುಖ ಕಾರ್ಯಭಾರ ಎಂದು ಅವರು ಭಾವಿಸಿದರೆ ಅವರೊಂದು ಗಂಭೀರ ತಪ್ಪು ಮಾಡಿದಂತಾಗುತ್ತದೆ. ಇದರಿಂದಾಗಿ ಚುನಾವಣಾ ವಿಜಯವನ್ನೂಕಳಕೊಳ್ಳಬೇಕಾಗಿ ಬರಬಹುದು.

ಬೊಫೋರ್ಸ್ ಭ್ರಷ್ಟಾಚಾರದ ವಿರುದ್ಧ ಅಗತ್ಯ ಹಾಗೂ ಅಮೂಲ್ಯ ಹೋರಾಟದಲ್ಲಿ ರಾಷ್ಟ್ರೀಯ ಮಹತ್ವದ ಹಲವು ಇತರ ಪ್ರಶ್ನೆಗಳು ಬದಿಗೊತ್ತಲ್ಪಟ್ಟಿವೆ. ಎಂಬುದನ್ನು ನೆನಪಿಟ್ಟುಕೊಳ್ಳಬೇಕು. ಅಗಾಧ ನಿರುದ್ಯೋಗ, ಕ್ಲೋಶರ್‌ಗಳು, ರೋಗಗ್ರಸ್ತ ಕೈಗಾರಿಕೆಗಳು, ರೈತರ ಸಂಕಷ್ಟಗಳು, ಅಪಾರ ಗ್ರಾಮೀಣ ನಿರುದ್ಯೋಗ, ಮಹಿಳೆಯರು ಮತ್ತು ಹರಿಜನರ ಮೇಲೆ ಅತ್ಯಾಚಾರ, ಅಲ್ಪ ಸಂಖ್ಯಾತರಿಗೆ ಅನ್ಯಾಯ ಇವು ಮತ್ತು ಇನ್ನೂ ಹಲವಾರು ಪ್ರಶ್ನೆಗಳು ಜನತೆಯಲ್ಲಿ ಅಸಂತೃಪ್ತಿ ಬಿತ್ತುತ್ತಿವೆ.

ಜಾತ್ಯತೀತ ವಿರೋಧ ಪಕ್ಷಗಳು ಜನತೆಯ ನಡುವೆ ಐಕ್ಯತೆಯಿಂದ ಕೆಲಸ ಮಾಡಬೇಕು. ಅವರ ತುರ್ತುಬೇಡಿಕೆಗಳ ಆಧಾರದ ಮೇಲೆ ಅವರನ್ನು ಜಾಗೃತ ಗೊಳಿಸಬೇಕು. ಅವರು ಪಶ್ಚಿಮಬಂಗಾಳ, ಕೇರಳ ಮತ್ತಿತರ ಕಡೆ ಹಗಲು-ರಾತ್ರಿ ದಲಿತ, ಶೋಷಿತ ವಿಭಾಗಗಳೊಂದಿಗೆ, ಬಹು ಪಾಲು ಜನತೆಯೊಂದಿಗೆ ಇರುವ ಎಡ ಪಕ್ಷಗಳಿಂದ ಪಾಠ ಕಲಿಯಬೇಕು. ಭ್ರಷ್ಟಾಚಾರದ ಮೇಲೆ ಗಮನ ಕೇಂದ್ರೀಕರಿಸುವ ಹೆಸರಿನಲ್ಲಿ, ವರ್ಗ ಬೇಡಿಕೆಗಳನ್ನು ಬದಿಗೊತ್ತುವ ಯಾವುದೇ ಪ್ರಯತ್ನವನ್ನು ಜನಸಮೂಹಗಳು ವಿಶ್ವಾಸಘಾತವೆಂದು ಬಗೆಯುತ್ತವೆ.

ಈ ಚುನಾವಣಾ ಸಮರ ನಮ್ಮ ಆರ್ಥಿಕ, ನಮ್ಮ ಸಮಗ್ರತೆ, ನಮ್ಮ ವಿದೇಶಾಂಗ ನೀತಿಯ ಮೇಲೆ ಭಾರೀ ಅಮೆರಿಕನ್ ಸಾಮ್ರಾಜ್ಯಶಾಹಿ ಒತ್ತಡದ ಹಿನ್ನೆಲೆಯಲ್ಲಿ ಬರುತ್ತಿದೆ ಎನ್ನುವುದನ್ನು ಅರಿಯಬೇಕು. ಬಿ.ಜೆ.ಪಿ.ಯ ನಿರ್ಣಯಗಳಲ್ಲಿ ಕಾಣುತ್ತಿರುವಂತೆ ಸಾಮ್ರಾಜ್ಯಶಾಹೀ ಪಿತೂರಿಗಳ ಬಗ್ಗೆ ಕುರುಡಾಗಿರುವ ಪ್ರವೃತ್ತಿ ಒಂದು ದೇಶ - ವಿರೋಧಿ ಕ್ರಮ.

ಸಂಸದೀಯ ಹೋರಾಟದಿಂದ ಸಾಮೂಹಿಕ ಚಳುವಳಿಯತ್ತ ಐಕ್ಯ ತಿರುವು

...ಕ್ಕಾಗಿ ನೋಡುತ್ತಿರುವ ಎಲ್ಲಾ ಶಕ್ತಿಗಳನ್ನು ಕಾರ್ಯಾಚರಣೆಗೆ ಅಣಿಗೊಳಿಸುವ ಒಂದು ಕರೆ. ರಾಜೀವ್ ಗಾಂಧಿ ರಾಜೀನಾಮೆ ನೀಡುವಂತೆ ಅಗತ್ಯ ಮಂಜೂರಾತಿ ಪಡೆಯುವಲ್ಲಿ ಬೃಹತ್ ಭಾರತ ಬಂದ್‌ಗೆ ಈ ಪಕ್ಷಗಳ ಒಂದು ಕರೆ ಬಹಳ ನೆರವಾಗುತ್ತದೆ. ಈ ಕರೆ ಎಲ್ಲಾ ಸಾಮೂಹಿಕ ಸಂಘಟನೆಗಳಿಗೆ, ಕಾರ್ಮಿಕ ಸಂಘಟನೆಗಳಿಗೆ, ಕಿಸಾನ್ ಸಭಾಗಳಿಗೆ, ವಿದ್ಯಾರ್ಥಿ, ಯುವಜನ, ಮಹಿಳಾ ಸಂಘಟನೆಗಳಿಗೆ ಹೋಗಬೇಕು. ಈ ಮೂಲಕ ಜನ ಸಮೂಹಗಳು ಹೋರಾಟದ ಅಖಾಡಕ್ಕೆ ಬರುವಂತಾಗಬೇಕು.

ಚುನಾವಣಾ ಸಮರದ ಆರಂಭ

ಈ ರಾಜೀನಾಮೆಗಳು ನಾಟಕೀಯ ಪ್ರದರ್ಶನವಲ್ಲ.ಚುನಾವಣೆಯ ಸಂದರ್ಭದಲ್ಲಿ ಬಂದಿರುವ ಇದು ರಾಜೀವ್‌ಗಾಂಧಿ ಮತ್ತು ಅವರ ಪಕ್ಷವನ್ನು ಅಧಿಕಾರದಿಂದ ಕೆಳಗಿಳಿಸುವ ಮಹತ್ವದ ಚುನಾವಣಾ ಸಮರದ ಆರಂಭ. ಸಂಸದೀಯ ಚರ್ಚೆಗಳು, ಕಸರತ್ತುಗಳ ಬದಲು ಈಗ ಪ್ರತಿಗಾಮಿ ಶಕ್ತಿಗಳಿಂದ ಎಲ್ಲಾ ಕಡೆಗಳಿಂದಲೂ ಹಲ್ಲೆಗೊಳಗಾಗಿರುವ ಜನತೆಯ ಮನಸ್ಸು, ಮತ್ತು ಪ್ರಜ್ಞೆಯನ್ನು ನೇರವಾಗಿ ತಲುಪುವ ಕೆಲಸ ನಡೆಯಬೇಕು: ಕಾಂಗ್ರೆಸ್(ಐ) ಆಳ್ವಿಕೆಯ ವಿರುದ್ಧ ದೃಢ ಹೋರಾಟದತ್ತಜನಸಮೂಹಗಳನ್ನು ಗೆಲ್ಲಲು ವಿವಿಧ ರೀತಿಯ ಮಿತ್ರತ್ವ, ಪರಸ್ಪರ ತಿಳುವಳಿಕೆ ಅಗತ್ಯ. ನಿರ್ದಿಷ್ಟ ಪ್ರಶ್ನೆಗಳ ಮೇಲೆ ಪರಸ್ಪರ ಸಂಸದೀಯ ತಿಳುವಳಿಕೆಗಳು, ಕೂಟಗಳು ಇನ್ನೂ ಮುಂದೆ ಅರ್ಥ ಹೀನ. ಈ ಸಮರವನ್ನು ಮುಂದುವರಿಸಲು ಜಾತ್ಯತೀತ ವಿರೋಧ ಪಕ್ಷಗಳು ಮತ್ತು ಎಡ ಪಕ್ಷಗಳ ನಡುವೆ ಒಂದು ದೃಢ ತಿಳುವಳಿಕೆ ಅತ್ಯಗತ್ಯ.

ಅಲ್ಲದೆ ಜನ ಸಮೂಹಗಳನ್ನು ಗೆಲ್ಲುವಲ್ಲಿ, ಅವರ ಆವಶ್ಯಕತೆಗಳು ಮತ್ತು ಬೇಡಿಕೆಗಳಿಗೆ ಪ್ರಾಧಾನ್ಯತೆ ನೀಡಬೇಕು. ಕಳೆದೆರಡು ವರ್ಷಗಳಲ್ಲಿ, ವಿರೋಧ ಪಕ್ಷಗಳು ಬೊಫೋರ್ಸ್‌ಹಗರಣ ದಮೇಲೆಯೇ

ಜಾತ್ಯತೀತ ಪಕ್ಷಗಳು ತಮ್ಮ ಅಗತ್ಯಗಳನ್ನು ಪ್ರತಿಪಾದಿಸುವಲ್ಲಿವಿಫಲಗೊಂಡಿರುವುದನ್ನು ಕಂಡಿರುವ ಈ ಜನ ಸಮೂಹಗಳು ಜಾತಿವಾದಿ, ಕೋಮುವಾದಿ, ಸಂಘಟನೆಗಳತ್ತ ಮುಖ ಮಾಡಿ ಕಾಂಗ್ರೆಸ್(ಐ) ವಿರುದ್ಧ ತಮ್ಮ ಸಿಟ್ಟಿಗೆ ವಿಕೃತ ಅಭಿವ್ಯಕ್ತಿ ನೀಡುತ್ತಿವೆ.

ಜನಸಮೂಹಗಳಿಗೆ ಮನವಿ, ಅವರ ನಡುವೆ ಚಳುವಳಿಯಲ್ಲಿ ಈ ಬೇಡಿಕೆಗಳಿಗೆ, ಕುಂದು ಕೊರತೆಗಳಿಗೆ ಪ್ರಾಧಾನ್ಯತೆ ನೀಡಬೇಕಾಗುತ್ತದೆ. ಈ ಸಂಬಂಧ ರಾಜೀವ್ ಗಾಂಧಿ ಸರಕಾರದ ಧೋರಣೆಗಳನ್ನು ಬಯಲಿಗೆಳೆಯ ಬೇಕಾಗುತ್ತದೆ.

ಜಾತ್ಯತೀತ ವಿರೋಧ ಪಕ್ಷಗಳು ದೌರ್ಬಲ್ಯನೀಗಬೇಕು

ಅತ್ಯಂತ ದಲಿತ ವಿಭಾಗಗಳು ತಮ್ಮಿಂದ ದೂರ ಸರಿಯುತ್ತಿವೆ ಎಂಬುದನ್ನು ರಾಜೀವ್ ಮತ್ತು ಆಳುವ ಕಾಂಗ್ರೆಸ್(ಐ) ಅರಿತುಕೊಂಡಿದ್ದಾರೆ. ಈ ಪ್ರಕ್ರಿಯೆ ಮುಂದುವರಿದರೆ ಮುಂದಿನ ಚುನಾವಣೆಗಳಲ್ಲಿ ಸೋಲು ಖಚಿತ ಎಂದೂ ಅವರಿಗೆ ತಿಳಿದಿದೆ. ಏಕೆಂದರೆ ಕಾಂಗ್ರೆಸ್(ಐ) ಬಗ್ಗೆ ಇರುವ ಭ್ರಮೆಗಳಿಂದಾಗಿ ಈ ವಿಭಾಗಗಳು ಇದುವರೆಗೆ ಕಾಂಗ್ರೆಸ್(ಐ)ನ ಅತ್ಯಂತ ದೃಢ ಚುನಾವಣಾ ಬೆಂಬಲವಾಗಿದ್ದವು. ಆ ಬೆಂಬಲ ಈಗ ಬಿರುಕು ಬಿಡುತ್ತಿದೆ. ಮೀಸಲಾತಿ ಮುಂದುವರಿಕೆಯ, ಮೀಸಲು ಮುದ್ದೆಗಳ ಭರ್ತಿಯ ಭರವಸೆ ಜವಾಹರ್ ಉದ್ಯೋಗ ಯೋಜನೆ, ಪಂಚಾಯತೀ ರಾಜ್ಯ ಮಸೂದೆ ಇವೆಲ್ಲಾ ಈ ಪ್ರಮುಖ ಶಕ್ತಿಗಳ ಬೆಂಬಲ ಗಳಿಸುವ ಅಸ್ತ್ರಗಳು ವಿರೋಧಿ ಜಾತ್ಯತೀತ ಶಕ್ತಿಗಳು ದುರ್ಬಲವಾಗಿರುವುದು, ಜನತೆಯ ಬಳಿ ಸಾರುವಲ್ಲಿ ಹಿಂದೆ ಬಿದ್ದಿರುವುದು ಇಲ್ಲೀ. ಸಂಸದೀಯ ಪ್ರಯತ್ನ ಗಳಲ್ಲೇ ವ್ಯಸ್ತಗೊಂಡಿದ್ದು ಹೋರಾಟದ ಸಾಮೂಹಿಕ ಆಂದೋಲನವನ್ನು ಕಡೆಗಣಿಸ ಲಾಗಿತ್ತು.

ಜಾತ್ಯತೀತ ವಿರೋಧ ಪಕ್ಷಗಳು ಈ ಅಪರಾಧ ಎಸಗಬಾರದು. ಈ ವಿಫಲತೆ ವಿರೋಧ ಪಕ್ಷಗಳು ದೇಶದ ಹಿತಾಸಕ್ತಿಗಳ ಬಗ್ಗೆ ಅಸಡ್ಡೆ ತೋರುತ್ತಿವೆ ಎಂದು ದೂಷಿಸಲು ರಾಜೀವ್ ಗಾಂಧಿಗೊಂದು ಅಮೂಲ್ಯ ಚುನಾವಣಾ ಅಸ್ತ್ರವನ್ನು ಒದಗಿಸಿದಂತಾಗುತ್ತಧೆ

ಈ ಸಮರದ ನಿಜವಾದ ಸಾರ

ಮುಂಬರುವ ಚುನಾವಣಾ ಸಮರ ಕೋಮುವಾದ, ಪ್ರತ್ಯೇಕತಾವಾದದ ವಿರುದ್ಧ ರಾಷ್ಟ್ರೀಯ ಐಕ್ಯತೆ ರಕ್ಷಿಸುವ ಹೋರಾಟ, ಭೂಮಿ ಮತ್ತು ಬಂಡವಾಳದ ಪಟ್ಟಭದ್ರ ಹಿತಾಸಕ್ತಿಗಳಿಂದ ಜನತೆಯನ್ನು ರಕ್ಷಿಸುವ ಸಮರ -ಇದೇ ಈ ಸಮರದ ನಿಜವಾದ ಸಾರ ಎಂಬುದನ್ನು ಜಾತ್ಯತೀತ ಮತ್ತು ಎಡ ಪಕ್ಷಗಳು ಅರಿತುಕೊಳ್ಳಲೇಬೇಕು. ಬಿ.ಜೆ.ಪಿ., ಮುಸ್ಲಿಂ ಲೀಗ್ ನಂತಹ ಕೋಮುವಾದಿ ಶಕ್ತಿಗಳ ಬಗ್ಗೆ ಒಂದು ಸ್ಪಷ್ಟ ನಿಲುವು, ಧೋರಣೆ ಈ ಸಂದರ್ಭದಲ್ಲಿ ಅತ್ಯಗತ್ಯ. ಚುನಾವಣಾ ಲಾಭದ ನಿರೀಕ್ಷೆಯಲ್ಲಿ ಬಿ.ಜೆ.ಪಿ. ಯಂತಹ ಶಕ್ತಿಗಳೊಂದಿಗೆ ರಾಜಿ ಸಂಧಾನದ ಯಾವುದೇ ಪ್ರಯತ್ನ ಜಾತ್ಯತೀತ ವಿರೋಧ ಪಕ್ಷಗಳ ಪ್ರಾಮಾಣಿಕತೆಗೆ ಕುಂದು ತರುತ್ತದೆ.

ಲೋಕಸಭೆಯಿಂದ ವಿರೋಧ ಪಕ್ಷಗಳ ಸದಸ್ಯರ ರಾಜೀನಾಮೆ ಒಂದು ಮಹತ್ವದ ಘಟನೆ. ಅದು ಸಂಸದೀಯ ಹೋರಾಟದಿಂದ ಸಾಮೂಹಿಕ ಚಳುವಳಿ ಮತ್ತು ಕಾರ್ಯಾಚರಣೆಯತ್ತ ಒಂದು ಐಕ್ಯ ತಿರುವು. ಇದು ಈ ಘಟನೆಯ ಮಹತ್ವ. ರಾಜೀವ್‌ಗಾಂಧಿಯ ರಾಜೀನಾಮೆಯನ್ನು ಒತ್ತಾಯಿಸುವುದರೊಂದಿಗೇ ಜನಸಮೂಹಗಳಿಗೆ ನಿಕಟವಾಗಿರುವ ಪ್ರಶ್ನೆಗಳನ್ನು ಎತ್ತಿಕೊಂಡರೆ ಮಾತ್ರವೇ ಈ ಐಕ್ಯ ಕಾರ್ಯಾಚರಣೆಯ ಪೂರ್ಣ ಸಾಧ್ಯತೆಗಳನ್ನು ಉಪಯೋಗಿಸಿಕೊಳ್ಳಲು ಸಾಧ್ಯ.

[illegible]

ಕೋಲಾರ ಜಿಲ್ಲೆಯಾದ್ಯಂತ ಭೂ ಆಕ್ರಮಣ ಚಳುವಳಿ ಭೂಮಾಲೀಕ ಗೂಂಡಾದಾಳಿ - ಬಂಧನಕ್ಕೆ ರೈತ ಸಂಘ ಒತ್ತಾಯ

ಕೋಲಾರ ಜಿಲ್ಲೆಯಗೌರಿಬಿದನೂರು ತಾಲೋಕಿನ ಮರಳೂರು ಗ್ರಾಮದ 72 ಎಕರೆ ಸರ್ಕಾರಿ ಭೂಮಿಯನ್ನುಸಾಗುವಳಿ ಮಾಡಲು ಹೋದ ಕರ್ನಾಟಕ ಪ್ರಾಂತ ರೈತ ಸಂಘದ ರೈತರ ಮೇಲೆ ಇಲ್ಲಿನ ಸ್ಥಳೀಯ ಭೂಮಾಲೀಕ ಹಾಗೂ ಅವರ ಗೂಂಡಾಗಳು ತೀವ್ರ ರೀತಿಯಲ್ಲಿ ಹಲ್ಲೆ ನಡೆಸಿ ಗಾಯಗೊಳಿಸಿದ ಘಟನೆ ನಡೆದಿದೆ. ನಾರಾಯಣರೆಡ್ಡಿ ಹಾಗೂ 8 ಮಂದಿ ಗಾಯಾಳು ರೈತರನ್ನು ಸ್ಥಳೀಯ ಆಸ್ಪತ್ರೆಗೆ ಸೇರಿಸಲಾಗಿದೆ.

ರೈತ ಸಂಘದ ಮುಖಂಡ ಶ್ರೀರಾಮ ರೆಡ್ಡಿಯವರು ಗ್ರಾಮಕ್ಕೆ ಭೇಟಿ ನೀಡಿ ಭೂಮಾಲೀಕರು ಭೂರಹಿತ ರೈತರ ಮೇಲೆ ನಡೆಸಿದ ದೌರ್ಜನ್ಯ ಖಂಡಿಸಿ ತಾಲೋಕು ಕಛೇರಿ ಮುಂದೆ ಸತ್ಯಾಗ್ರಹ ನಡೆಸಲು ನೀಡಿದ ಕರೆಯಂತೆ ಜುಲೈ 24 ರಿಂದ ಸತ್ಯಾಗ್ರಹ ಆರಂಭಗೊಂಡಿದೆ. ಭೂಮಾಲೀಕರ ಕೃತ್ಯವನ್ನು ಖಂಡಿಸಿರುವ ರೈತ ಸಂಘದ ರಾಜ್ಯ ಪ್ರಧಾನ ಕಾರ್ಯ ದರ್ಶಿ ಕಾ॥ ಚಂದ್ರಶೇಖರ ಬಾಳೆಯವರು ದೌರ್ಜನ್ಯ ನಡೆಸಿದ ಭೂಮಾಲೀಕರನ್ನು ಹಾಗೂ ಗೂಂಡಾಗಳನ್ನು ಬಂಧಿಸಿ ಶಿಕ್ಷೆ ಗೊಳಪಡಿಸಬೇಕೆಂದು ರಾಜ್ಯದ ರಾಜ್ಯ ಪಾಲರನ್ನು ಒತ್ತಾಯಿಸಿದ್ದಾರೆ.

ಸರ್ಕಾರಿ ಭೂಮಿಯನ್ನು ಭೂರಹಿತ ಬಡ ರೈತರಿಗೆ ವಿತರಣೆ ಮಾಡಬೇಕೆಂದು ಹಾಗೂ ರೈತರಿಗೆ ಕಿರುಕುಳ ನೀಡುತ್ತಿರುವ ಅರಣ್ಯ ಇಲಾಖೆ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸಿ ಬಡರೈತರು ಸಾಗುವಳಿ ಮಾಡುತ್ತಿರುವ ಭೂಮಿಯಪಟ್ಟಾ ನೀಡಬೇಕೆಂದು ಅವರು ರಾಜ್ಯಪಾಲರನ್ನು ಒತ್ತಾಯಿಸಿದ್ದಾರೆ. ರಾಜ್ಯವ್ಯಾಪಿ ಭೂಮಿಗಾಗಿ ಹೋರಾಟದ ಕರೆಯಂತೆ ನಡೆದ ಈಚಳುವಳಿ ಕೋಲಾರ ಜಿಲ್ಲೆಯಾದ್ಯಂತ ಯಶಸ್ವಿಯಾಗಿ ನಡೆಯುತ್ತಿದೆ. ಜಿಲ್ಲೆ ಯಬಾಗೇಪಲ್ಲಿ, ಶಿಡ್ಲಘಟ್ಟ, ಮುಳಬಾಗಿಲು ತಾಲೋಕುಗಳಲ್ಲಿ ವ್ಯಾಪಿಸಿದೆ. ಅರಣ್ಯ ಇಲಾಖೆ ಅಧಿಕಾರಿಗಳ ದಬ್ಬಾಳಿಕೆ ಭೂಮಾಲೀಕ- ಗೂಂಡಾಗಳದಾಳಿಯಿಂದ ಬಡರೈತರನ್ನು ರಕ್ಷಿಸಿ ಭೂಮಿ ಹಂಚುವ ಕ್ರಮಕ್ಕೆ ಗೊಳ್ಳಬೇಕೆಂದು ರೈತಸಂಘಒತ್ತಾಯಿಸಿದೆ.

ಡೊನೇಷನ್ ವಿರೋಧಿ ಯಶಸ್ವಿ ಹೋರಾಟ

ರಾಯಚೂರು ನಗರದಲ್ಲಿರುವ ಖಾಸಗಿ ಕಾಲೇಜುಗಳಲ್ಲಿ ಪ್ರವೇಶಕ್ಕಾಗಿ . ಅಧಿಕ ಡೊನೇಷನ್ ವಸೂಲಿ ಮಾಡುತ್ತಿದ್ದುದನ್ನು ಪ್ರತಿಭಟಿಸಿ ಎಸ್.ಎಫ್.ಐ. ಹಾಗೂ ಡಿ.ವೈ.ಎಫ್.ಐ. ಜಂಟಿ ಹೋರಾಟ ಸಮಿತಿಯೊಂದನ್ನು ರಚಿಸಿಕೊಂಡು ಹೋರಾಟಕ್ಕಿಳಿದವು. ಇದರ ಪರಿಣಾಮವಾಗಿ ಪ್ರಮುಖ ಕಾಲೇಜುಗಳಲ್ಲಿ ಪ್ರವೇಶವನ್ನು ಪಡೆಗಿಟ್ಟಿಸಲು ಸಾಧ್ಯವಾಯಿತು.

ಆಡಳಿತ ವರ್ಗ ಹೋರಾಟ ಸಮಿತಿ ನಡುವೆ ಏರ್ಪಟ್ಟ ಮಾತುಕತೆಯ ಪರಿಣಾಮವಾಗಿ ಫೀ ಕಡಿಮೆ ಮಾಡಲು ಸಾಧ್ಯವಾಯಿತು. ಈ ಚಳುವಳಿ ರಾಯಚೂರಿನ ವಿದ್ಯಾರ್ಥಿ ಸಮುದಾಯದಲ್ಲಿ ಪ್ರಭಾವ ಬೀರುವಲ್ಲಿಯಶಸ್ವಿಯಾಯಿತು. ಹೋರಾಟ ಸಮಿತಿ ಸಂಚಾಲಕ ಹಾಗೂ ಎಸ್.ಎಫ್.ಐ. ಅಧ್ಯಕ್ಷ ಕಾ॥ಬಸವಂತರಾಯ, ಸಹಸಂಚಾಲಕ ಸುರೇಶ, ಡಿ.ವೈ.ಎಫ್.ಐ.ನ ವೆಂಕಟೇಶಾಹರಾ ಎಸ್.ಎಫ್.ಐ. ಜಿಲ್ಲಾ ಕಾರ್ಯದರ್ಶಿ ಕಾ॥ ರಾಮನಗೌಡ ನೇತೃತ್ವವಹಿಸಿದ್ದರು.

ಹಟ್ಟಿ

ಲಿಂಗಸೂಗೂರುತಾಲೋಕು ಹಟ್ಟಿಯ ಸರ್ಕಾರಿ ಜ್ಯೂನಿಯರ್ ಕಾಲೇಜ್‌ನಲ್ಲಿ ಶಿಕ್ಷಕರ ಹಾಗೂ ಪಿಠೋಪಕರಣಗಳ ಸೌಲಭ್ಯ ಒತ್ತಾಯಿಸಿ ಅಧಿಕಾರಿಗಳಿಗೆ ಮನವಿ ಅರ್ಪಿಸಿದರು.

ಮೈಸೂರ್ ಫೀಡ್ಸ್

ಬ್ರುವರೀಸ್ ಡಿಸ್ಟಲರಿ ಕಾರ್ಮಿಕರ ಮೇಲೆ ಮಾಲೀಕರ ಗೂಂಡಾಗಳು ಮಾರಕಾಸ್ತ್ರಗಳಿಂದ ಹಲ್ಲೆ ನಡೆಸುತ್ತಿರುವಾಗ ಸ್ಥಳದಲ್ಲೇ ಇದ್ದರೂ ಸಬ್ ಇನ್ಸ್‌ಪೆಕ್ಟರ್ ಪಾಲಾಕ್ಷಯ್ಯ ರೌಡಿಗಳನ್ನು ಬಂಧಿಸಿ ಕಾರ್ಮಿಕರಿಗೆ ರಕ್ಷಣೆ ನೀಡಲು ವಿಫಲವಾಗಿರುವುದರಿಂದ ಅವರನ್ನು ಕೂಡಲೇ ವಜಾಗೊಳಿಸಬೇಕೆಂದು ಹಾಗೂ ಘಟನೆ ಬಗ್ಗೆ ವಿಚಾರಣೆ ನಡೆಸ ಬೇಕೆಂದು ಸಂಘದ ಕಾರ್ಯದರ್ಶಿ ಕಾ॥ಆರ್.ಎಂ. ಸೆಲ್ವಮ್ ಒತ್ತಾಯಿ ಸಿದ್ದಾರೆ.

ಟ್ಯಾಕ್ಸಿ ನಿಲುಗಡೆಗೆ ಒತ್ತಾಯ

ಬಂಟ್ವಾಳದಿಂದ ಮಂಗಳೂರು ತರಕಾರಿ ಮಾರುಕಟ್ಟೆಗೆ ಬರುವ ರೈತರಿಗೆ ಮಾರುಕಟ್ಟೆ ಬಳಿ ಇದ್ದ ಟ್ಯಾಕ್ಸಿ ಪಾರ್ಕಿಂಗ್ ಸೌಲಭ್ಯವನ್ನು ನಿಷೇಧಿಸಿರುವುದರಿಂದ ತೊಂದರೆಯುಂಟಾಗಿದೆ. ರೈತರು ಅಗತ್ಯ ಸಾಮಾನುಗಳನ್ನು ಖರೀದಿಸಲು, ಸಾಗಿಸಲು ಅನುಕೂಲವಾಗುವಂತೆ ಕೆಲ ವಾಹನಗಳಿಗಾದರೂ ನಿಲುಗಡೆಗೆ ಅನುಮತಿ ನೀಡಬೇಕೆಂದು ತಾಲೋಕು ರೈತ ಸಂಘದ ಅಧ್ಯಕ್ಷ ಕಾ॥ ಬಿ. ವಾಸುಗಟ್ಟಿ ಒತ್ತಾಯಿಸಿದ್ದಾರೆ.

ವಿಠಲವಾಡಿ ಘಟಕ

ಜುಲೈ 27ರಂದು ವಿಠಲವಾಡಿ ಡಿ.ವೈ.ಎಫ್.ಐ. ಘಟಕ ಉದ್ಘಾಟನೆ ನಡೆಯಿತು.ರಾಜ್ಯ ಸಹ ಕಾರ್ಯದರ್ಶಿ ಕಾ॥ ಆರ್. ಜಯಕುಮಾರ್, ತಾಲೋಕು ಅಧ್ಯಕ್ಷ ವೆಂಕಟೇಶ ಕೋಣೆ, ಮಹಾಬಲವಡೇರ ಹೋಬಳಿ ನಾರಾಯಣ ಚಾರ, ಕೃಷ್ಣ ಸುರೇಶ್ ಮಾತನಾಡಿದರು. ನೂತನ ಸಮಿತಿಗೆ ಅಧ್ಯಕ್ಷರಾಗಿ ಕಾಗೋಪಾಲ, ಉಪಾಧ್ಯಕ್ಷರಾಗಿ ನಂದಿಕುಲಾಲ್, ಬಾಬು, ಕಾರ್ಯದರ್ಶಿಯಾಗಿ ನಾರಾಯಣ ಮುಂತಾದವರು ಆಯ್ಕೆಗೊಂಡರು.

ಪೌರನೌಕರರ ಮುಷ್ಕರ ಅಂತ್ಯ

ಬಳ್ಳಾರಿಜಿಲ್ಲಾ ಪೌರಸೇವಾ ದಿನಗೂಲಿ ನೌಕರರ ಸಂಘ ಹಾಗೂ ನಗರಸಭಾ ಆಡಳಿತ ಅಧಿಕಾರಿಗಳು ಹಾಗೂ ಜಿಲ್ಲಾಧಿಕಾರಿಗಳೊಡನೆ ಏಪ್ರಿಲ್ 20ರಂದು ಒಪ್ಪಂದವೊಂದು ಏರ್ಪಟ್ಟಿದೆ.

ಜಿಲ್ಲಾಧಿಕಾರಿ ಕಛೇರಿ ಎದುರು [illegible] 10 ರಿಂದ ನಡೆಯುತ್ತಿದ್ದ [illegible] ಕಾಲದ ಮುಷ್ಕರ ಅಂತ್ಯಗೊಳಿಸಲಾಗಿದೆ. ಮೇ 1 ರಿಂದ ಅನ್ವಯವಾಗುವಂತೆ ಮೂರು ತಿಂಗಳಿಗೆ 15 ನೌಕರರಿಗೆ ಸಮಾನ ವೇತನ ಸೇವಾ ಹಿರಿತನದ ಆಧಾರದಲ್ಲಿ ಎಲ್ಲಾ ನೌಕರರಿಗೆ ನೀಡಲು ತೀರ್ಮಾನಿಸಲಾಗಿದೆ. ಆರೋಗ್ಯ ನೌಕರರಿಗೆ 24 ದಿನಗಳ ಬದಲಿಗೆ 29 ದಿನಗಳ ವೇತನ ನೀಡಲು ಆಡಳಿತಾಧಿಕಾರಿ ಪ್ರದೀಪ್ ಪುರಿಯ ವರು ಒಪ್ಪಿ ಒಪ್ಪಂದಕ್ಕೆ ಸಹಿ ಹಾಕಲಾಗಿದೆ ಎಂದು ನೌಕರ ಸಂಘದ ಅಧ್ಯಕ್ಷ ಕಾ॥ಸಿ. ರಘುನಾಥ್ ಹೇಳಿಕೆ'ಯಲ್ಲಿ ತಿಳಿಸಿದ್ದಾರೆ.

ಎಸ್.ಎಫ್.ಐ.ಶಿಬಿರ

ಹೂವಿನ ಹಡಗಲಿ ಎಸ್.ಎಫ್.ಐ. ಘಟಕ ತಾಲೋಕು ಮಟ್ಟದ ಅಧ್ಯಯನ ಶಿಬಿರವೊಂದನ್ನು ಮೇ 13 ರಂದು ಸಂಘಟಿಸಿತು. ಎಸ್.ಎಂ.ಕೊಟ್ರೇಶ್, ಹೆಚ್. ಶೇಷಗಿರಿರಾವ್, ಚಂದ್ರಶೇಖರ ಬೆನ್ನೂರ, ಶ್ರೀಕಾಂತ್ ಹವಲ್ದಾರ್, ಪಿ.ಆರ್. ವೆಂಕಟೇಶ ವೀರಸಂಗಯ್ಯ ಮುಂತಾದವರುಗಳು ಉಪನ್ಯಾಸಕರಾಗಿ ಹಾಗೂ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದರು. ವಿ.ಪಿ. ಭಾಷ ಮೊದಲಿಗೆ ಪರಿಚಯಿಸಿ ಕೊನೆಯಲ್ಲಿವಂದನಾರ್ಪಣೆ ಮಾಡಿದರು.

ರಾಜ್ಯದಲ್ಲಿ ಡಿ.ವೈ.ಎಫ್.ಐ.ನಿಂದ ಆಗಸ್ಟ್ 15ರಂದು ಮಾನವ ಸರಪಳಿ

ಡಿ.ವೈ.ಎಫ್.ಐ.ಕರ್ನಾಟಕ ರಾಜ್ಯ ಸಮಿತಿಯ ಸಭೆಯು ಜುಲೈ 15-16ರಂದು ಬೆಂಗಳೂರಿನಲ್ಲಿ ಸೇರಿದಿತು. ರಾಜ್ಯ ಸಮಿತಿಯು ಹಲವು ಮುಖ್ಯ ತೀರ್ಮಾನಗಳನ್ನು ತೆಗೆದುಕೊಂಡಿದೆ.

ಆಗಸ್ಟ್ 15ರಂದು ರಾಷ್ಟ್ರೀಯ ಐಕ್ಯತೆ, ಸಾಮಗ್ರತೆ ಹಾಗೂ ಸ್ವಾತಂತ್ರ್ಯವನ್ನು ಎತ್ತಿ ಹಿಡಿದು ಛಿದ್ರಕಾರಿ ಶಕ್ತಿಗಳ ವಿರುದ್ಧ ರಾಜ್ಯದ ಹಲವು ಪ್ರದೇಶಗಳಲ್ಲಿ ಮಾನವ ಸರಪಳಿ ನಿರ್ಮಿಸಬೇಕೆಂದು ತೀರ್ಮಾನಿಸಿದೆ. ಈಗಾಗಲೇ ಕೆಲವು ಜಿಲ್ಲಾ ಸಮಿತಿಗಳು ಈ ವಿಷಯವಾಗಿ ತೆಗೆದುಕೊಂಡಿರುವ ತೀರ್ಮಾನಗಳು ಅಭಾದಿತವಾಗಿ ನಡೆಯಬೇಕು. ಉಳಿದ ಜಿಲ್ಲೆಗಳಲ್ಲಿ ಮಾನವ ಸರಪಳಿ ನಿರ್ಮಿಸಬೇಕೆಂದು ತೀರ್ಮಾನಿಸಲಾಗಿದೆ.

ಮತದಾನದ ವಯೋಮಿತಿ ಹದಿನೆಂಟಾಗಿರುವುದನ್ನು ಸ್ವಾಗತಿಸಿದೆ. ಆದರೆ ಇದು ಕಾಂಗ್ರೆ ಕೇಂದ್ರ ಸರ್ಕಾರದ ವರದಾನವಲ್ಲ. ಡಿ.ವೈ.ಎಫ್.ಐ ಸೇರಿ ಇತರ ಎಡ ಮತ್ತು ಪ್ರಜಾಸತ್ತಾತ್ಮಕ ಸಂಘಟನೆಗಳ ಹೋರಾಟದ ಫಲವೆಂದು ರಾಜ್ಯ ಸಮಿತಿ ಹೇಳಿದೆ.

ರಾಜ್ಯದಲ್ಲಿ ಖಾತರಿಉದ್ಯೋಗ ನೀಡುವ ನೀರಾವರಿ, ವಿದ್ಯುತ್, ಕಾರ್ಖಾನೆಗಳ ಯೋಜನೆಗಳನ್ನು ಕೇಂದ್ರ ಸರ್ಕಾರ ಜಾರಿ ಮಾಡದೆ, ಮುಚ್ಚಿರುವ ಕಾರ್ಖಾನೆಗಳನ್ನು ಪುನರ್ ಪ್ರಾರಂಭಿಸದೆ, ಮತ್ತು ಖಾಲಿ ಹುದ್ದೆಗಳನ್ನು ಭರ್ತಿಮಾಡದೆ, ಖಾತರಿಯಾಗಿ ಬಡತನದ ರೇಖೆಯ ಕೆಳಗೆಬರುವ ಪ್ರತಿ ಕುಟುಂಬದ ಒಬ್ಬರಿಗೆ ಕೇವಲ 17 ದಿನಗಳು ಉದ್ಯೋಗ ನೀಡಲಾರದ ಜವಾಹರ್‌ರೋಜ್ಗಾರ್ ಚುನಾವಣಾ ತಂತ್ರವೆಂದು ರಾಜ್ಯ ಸಮಿತಿಯು ಭಾವಿಸಿದೆ.

ಹೊಸಪೇಟೆಯಲ್ಲಿ ಸ್ಥಾಪಿಸಲಾಗಿದ್ದ ವಿಜಯನಗರ ಉಕ್ಕಿನ ಕಾರ್ಖಾನೆಯ ಪ್ರಾಜೆಕ್ಟ್ ಎಂಪ್ಲಾಯ್‌ಮೆಂಟ್ ಕಛೇರಿಯನ್ನು ಮುಚ್ಚಲಾಗಿದ್ದು ಉಕ್ಕಿನ ಕಾರ್ಖಾನೆ ಸ್ಥಾಪಿಸಲಾಗದಿರುವುದನ್ನು ಖಂಡಿಸಿದೆ. ರಾಯಚೂರು ಮಾಸ್ಟರ್ ಪ್ಲಾನ್ ಕೂಡಲೇ ಜಾರಿ ಮಾಡಿ ತೊಂದರೆಗೆ ಒಳಗಾಗಿರುವ ನೊಂದವರಿಗೆ ಪರ್ಯಾಯ ವ್ಯವಸ್ಥೆ ಮಾಡ ಬೇಕೆಂದು ಒತ್ತಾಯಿಸಿದೆ.

ಡಿ.ವೈ.ಎಫ್.ಐ. ಸದಸ್ಯತ್ವ ಆಗಸ್ಟ್ 15ರೊಳಗೆ ನೊಂದಾಯಿಸಿ ಮುಗಿಸಬೇಕೆಂದೂ ಸೆಪ್ಟೆಂಬರ್ ತಿಂಗಳಿನಲ್ಲಿ ಎಲ್ಲರಿಗೂ ಶಿಕ್ಷಣ, ಎಲ್ಲರಿಗೂ ಉದ್ಯೋಗ ಬೇಡಿಕೆಯ ಚಳುವಳಿಗೆ ತಯಾರಿ ಮಾಡಿಕೊಳ್ಳ ಬೇಕೆಂದು ಕೋರಿದೆ.

ಸಿ.ಎ.ಜಿ.ವರದಿ-ಸಾಳ್ವೆ ಹೇಳಿಕೆ ಖಂಡನೆ

"ಸಿ.ಎ.ಜಿ. ವರದಿಯನ್ನು ಕಸದಬುಟ್ಟಿಗೆ ಎಸೆಯಿರಿ" ಎಂಬ ಕೇಂದ್ರ ಮಂತ್ರಿ ಎನ್.ಕೆ.ಪಿ.ಸಾಳ್ವೆಯವರ ಹೇಳಿಕೆಯನ್ನು ಆಲ್ ಇಂಡಿಯಾ ಡಿಫೆನ್ಸ್ ಅಂಡ್ ಆಡಿಟ್ ಎಂಪ್ಲಾಯಿಸ್‌ಅಸೋಸಿಯೇಷನ್ ತೀವ್ರವಾಗಿ ಖಂಡಿಸಿದೆ.

ಕರ್ನಾಟಕ ಶಾಖೆಯ ಪ್ರಧಾನ ಕಾರ್ಯದರ್ಶಿ ವನಮಾಮಾಲೈ ರವರು ಪತ್ರಿಕಾ ಹೇಳಿಕೆ ನೀಡಿ ಸರ್ಕಾರದ ಲೆಕ್ಕ ಪರಿಶೋಧಕ ಕಾರ್ಯದಲ್ಲಿ ರಕ್ಷಣಾ ಲೆಕ್ಕ ಪರಿಶೋಧನ ಇಲಾಖೆ ಕೂಡ ಅವಿಬಾಜ್ಯ ಅಂಗವಾಗಿದ್ದು ಸಾಳ್ವೆಯವರ ಬೇಜವಾಬ್ದಾರಿ ಹೇಳಿಕೆ ರಕ್ಷಣಾ ಇಲಾಖೆಯ ಪರಿಶೋಧಕರನ್ನು ಅವಹೇಳನ ಮಾಡಿದಂತಾಗಿದೆ ಎಂದು ಅವರು ಆರೋಪಿಸಿದ್ದಾರೆ.

ಇಲಾಖೆ ತನ್ನ ಜವಾಬ್ದಾರಿ ಹಾಗೂ ಕರ್ತವ್ಯವನ್ನು ವಸ್ತುನಿಷ್ಠವಾದ ನಿಜಸಂಗತಿಯನ್ನು ಹೊರಗೆಡವಿದೆ ಎಂದು ಹೇಳಿದ್ದಾರೆ. 100 ವರ್ಷಗಳ ಪರಂಪರೆಯುಳ್ಳ ಈ ಇಲಾಖೆ ಸಿ ಮತ್ತು ಎ.ಜಿ.ಯ ಅವಿಭಾಜ್ಯ ಅಂಗವಾಗಿ ಕಾರ್ಯ ನಿರ್ವಹಿಸುತ್ತಾ ಬರುತ್ತಿದೆ ಎಂದರು.

ಸಂವಿಧಾನ ರೀತ್ಯ ಸ್ವತಂತ್ರ ಕಾರ್ಯ ನಿರ್ವಹಣೆ ಮಾಡುತ್ತಿರುವ ಇಲಾಖೆಯ ಕಾರ್ಯದಲ್ಲಿ ಹಸ್ತಕ್ಷೇಪ ಮಾಡುವ ಸಾಳ್ವೆಯವರನ್ನು ಸಂಘ ಖಂಡಿಸಿದೆ.

'ಆಡಿಟ್ ಅಂಡ್ ಅಕೌಂಟ್ಸ್ ಎಂಪ್ಲಾಯಿಸ್ ಅಸೋಸಿಯೇಷನ್ ಅಖಿಲ ಭಾರತ ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ.ಎಸ್.ಎಂ.ಎ. ಜಿನ್ನಾರವರು ನೀಡಿರುವ ಅಖಿಲಭಾರತ ಮುಷ್ಕರಕ್ಕೆ ಕರ್ನಾಟಕ ಘಟಕ ತನ್ನ ಪೂರ್ಣಬೆಂಬಲ ವ್ಯಕ್ತಪಡಿಸಿದೆ.

ಬ್ಯಾಂಕ್ ನೌಕರರ ಮುಷ್ಕರ ಬಿ.ಇ.ಎಫ್.ಐ ನಿರ್ಧಾರ

ಐದನೇ ದ್ವಿಪಕ್ಷೀಯ ಒಪ್ಪಂದದಲ್ಲಿ ಎಐಬಿ ಇಎ/ಎನ್‌ಸಿಬಿಇ ಮುಖಂಡರುಗಳು ಬ್ಯಾಂಕು ನೌಕರರಿಗೆ ಮಾಡಿದ ಅನ್ಯಾಯವನ್ನು ಹೋಗಲಾಡಿಸಲು ಮತ್ತು ನೌಕರ ವಿರೋಧಿ ಧೋರಣೆಗಳನ್ನು ವಿರೋಧಿಸಲು ಆಗಸ್ಟ್ ತಿಂಗಳಲ್ಲಿ ಒಂದು ದಿನದ ಮುಷ್ಕರ ಆಚರಿಸ ಬೇಕೆಂದು ಜೂನ್ 23-24ರಂದು ಕಲ್ಕತ್ತಾದಲ್ಲಿ ನಡೆದ, ಜನರಲ್ ಕೌನ್ಸಿಲ್ ಸಭೆ ಸರ್ವಾನುಮತದಿಂದ ನಿರ್ಧರಿಸಿತ್ತು.

ಕೆಲವು ದಿನಗಳ ನಂತರ ನಡೆದ ಪದಾಧಿಕಾರಿಗಳ ಸಭೆಯಲ್ಲಿ, ಐಕ್ಯ ಹೋರಾಟವನ್ನು ಬ್ಯಾಂಕಿಂಗ್ ಉದ್ದಿಮೆಯಲ್ಲಿ ಬೆಳೆಯಿಸುವ ನಿಟ್ಟಿನಲ್ಲಿ ಆಗಸ್ಟ್ 11 ರಂದು ಮುಷ್ಕರ ನಡೆಸಬೇಕೆಂದು ಸೂಚಿಸಿದೆ.

ಉಕ್ಕು, ಕಲ್ಲಿದ್ದಲು,ಇಂಡಿಯನ್ ಆಯಿಲ್, ಇಂಡಿಯನ್ ಏರ್‌ಲೈನ್ಸ್ ಮತ್ತಿತರ ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ ನಡೆದ ಒಪ್ಪಂದಕ್ಕೆ ಹೋಲಿಸಿದರೆ ಬ್ಯಾಂಕಿಂಗ್ ಉದ್ದಿಮೆಯಲ್ಲಿ ತೀರಾ ಕಳಪೆ ಒಪ್ಪಂದ ಆಗಿದ್ದು ಈಗಿನ ಒಪ್ಪಂದಕ್ಕಿಂತ ಶೇಕಡಾ 33ರಷ್ಟು ಜಾಸ್ತಿ ವೇತನವನ್ನು ಪಡೆಯಲಿದ್ದಾರೆ.

ಬಿಇಎಫ್‌ಐ ನ ಸತತವಾದ ಪ್ರಚಾರ ಮತ್ತು ಬ್ಯಾಂಕ್‌ನೌಕರರ ಭಾರಿ ವಿರೋಧದಿಂದಾಗಿ 1988 ಡಿಸೆಂಬರ್ ಮೊದಲ ಭಾಗದಲ್ಲೇಎಐಬಿಇಎ/ಎನ್‌ಸಿಬಿಇ ಸಹಿ ಮಾಡಿದ್ದರೂ ಅಂತಿಮ ಒಪ್ಪಂದವು 1989 ರ ಏಪ್ರಿಲ್ 10ರಂದು ಮಾತ್ರ ಸಹಿ ಕಾಣಲು ಸಾಧ್ಯವಾಯಿತು. ಆದರೆ ಅದು ಸಾಮಾನ್ಯ ನೌಕರರ ಆಕಾಂಕ್ಷೆಯನ್ನು ತಲುಪಲು ಸಾಧ್ಯವಾಗಲಿಲ್ಲ. ಮಾತ್ರವಲ್ಲದೆ ಇತರ ಕೈಗಾರಿಕೆಗಳಲ್ಲಿ ಇನ್ನೂ ಹೆಚ್ಚಿನ ಸೌಲಭ್ಯಗಳನ್ನು ಅಲ್ಲಿನ ನೌಕರರು ಐಕ್ಯ ಹೋರಾಟದ ಮೂಲಕಗಳಿಸಿದ್ದರು.

ಎಐಬಿಇಎ/ಎನ್‌ಸಿಬಿಇ ಮುಖಂಡರು ಒಪ್ಪಂದವನ್ನು ಚಿಂತಾರ್ಹ ಎಂದು ಬಣ್ಣಿಸಿದರೂ ಕೂಡಾ ಬ್ಯಾಂಕ್ ಮಾಲೀಕರು ಅವರ ಪರವಾದ ಯಶಸ್ಸು ಎಂದು ಹೇಳಿಕೊಂಡಿದ್ದಾರೆ.

ಬೇಡಿಕೆಗಳು

★ವೇತನ ರಚನೆಯನ್ನು ಪುನಃ ಹೆಚ್ಚಿಸುವುದು-ಅಧಿಕ ಇನ್‌ಕ್ರಿಮೆಂಟ್ ನೀಡುವುದು:ಪದವೀದರಇನ್‌ಕ್ರಿಮೆಂಟನ್ನು ತಿರುಗಿ ನೀಡುವುದು: ಸಾರಿಗೆ ಭತ್ಯೆ: ಇತರ ಸೌಲಭ್ಯಗಳನ್ನು ಹೆಚ್ಚಿಸುವುದು ಇತ್ಯಾದಿ.

★ ನಾಲ್ಕನೇ ದರ್ಜೆ ನೌಕರರ ಕನಿಷ್ಠ ಮತ್ತು ಗರಿಷ್ಠ ವೇತನ ಪ್ರಮಾಣವನ್ನು 1:2.25 ಕ್ಕೆಏರಿಸುವುದು.

★ ಮೂರನೇ ನಿವೃತ್ತಿ ಸೌಲಭ್ಯವಾಗಿ ಪೆನ್ಷನ್ ಯೋಜನೆಯನ್ನು ಜಾರಿ ಮಾಡುವುದು.

★ಎಲ್ಲರಿಗೂ ಬೋನಸ್

★ ನೌಕರ ವಿರೋಧಿ ನೀತಿಗಳನ್ನು ಒಪ್ಪಂದದಿಂದ ತೆಗೆದು ಹಾಕುವುದು.

★ ವಿರೋಧಿ ನೀತಿಗಳನ್ನು ಒಪ್ಪಂದ ದಿಂದ ತೆಗೆದು ಹಾಕುವುದು.

★ ನೇಮಕಾತಿಗಳ ಮೇಲಿರುವ ನಿರ್ಬಂಧಗಳನ್ನು ತೆಗೆದು ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವುದು.

★ಕಂಪ್ಯೂಟರೀಕರಣ ಮತ್ತು ಯಾಂತ್ರೀಕರಣಗಳನ್ನು ನಿಲ್ಲಿಸುವುದು.

★ಶಿಸ್ತು ಕ್ರಮದ ಹೆಸರಿನಲ್ಲಿ ನೌಕರರನ್ನು ತೊಂದರೆಗೊಳಪಡಿಸುವುದು ಮತ್ತು ಶಿಕ್ಷಿಸುವುದನ್ನು ನಿಲ್ಲಿಸುವುದು.

ಮೇಲ್ಕಾಣಿಸಿದ ಒತ್ತಾಯಗಳ ಮೇಲೆ, ಬ್ಯಾಂಕ್ ನೌಕರರ ಹಿತಾಸಕ್ತಿಯಿಂದ ಅವರನ್ನು ಹೋರಾಟಕ್ಕೆ ಅಣಿ ನೆಡೆಸಿ, ಐಕ್ಯ ಹೋರಾಟದ ಬೆಳವಣಿಗೆಗೆ ಸಹಾಯಕವಾಗ ಬೇಕೆಂದು ಎಐಬಿಇಎ/ಎನ್‌ಸಿಬಿಇ ಮುಖಂಡರಿಗೆ ಜನರಲ್‌ಕೌನ್ಸಿಲ್ ಕರೆನೀಡಿದೆ.

ಸಂಕ್ಷಿಪ್ತ ಸುದ್ದಿಗಳು

ಜೂನ್ 19ರಂದು ಹರಿಹರದ ಜ್ಯೋತಿ ಹೊಂ ಇಂಡಸ್ಟ್ರೀಸ್ ಎದುರು, 22 ರಂದು ಭಾರತ್ ಬೀಡಿಯ 15 ಬ್ರಾಂಚ್ ಗಳಲ್ಲಿ, ಫೈಜ್ ಮತ್ತು ಬಿ.ಕೆ. ಬೀಡಿ ಫ್ಯಾಕ್ಟರಿಗಳ ಎದುರು ಹಾಗೂ ತಾಲೋಕು ಕಛೇರಿ ಎದುರು ಬೀಡಿ ಕಾರ್ಮಿಕರು ದಕ್ಷಿಣವಲಯ ಬೀಡಿ ಕಾರ್ಮಿಕ ಫೆಡರೇಷನ್ ನೀಡಿದ ಕರೆಯಂತೆ ಧರಣಿ ಸತ್ಯಾಗ್ರಹ ನಡೆಸಿದರು.

ಬಂಟ್ವಾಳ

ಬೀಡಿ ಕಾರ್ಮಿಕ ವಾರ್ಷಿಕ ಮಹಾಸಭೆ ಜುಲೈ 2ರಂದು ಸಂಜೀವ ಬಂಗೇರ ಅಧ್ಯಕ್ಷತೆಯಲ್ಲಿ ಜರುಗಿತು. ದ.ಕ. ಜಿಲ್ಲೆಯ ಬೀಡಿ ಮಾಲೀಕರು ಕೇರಳ ಸರ್ಕಾರ ನಿಗಧಿ ಮಾಡಿದ ಕನಿಷ್ಠ ಕೂಲಿಯನ್ನು ನೀಡದ ನೀತಿಯನ್ನು ಖಂಡಿಸಲಾಯಿತು.

ಕಾ॥ಬಿ.ಮಾದವರವರು ಮುಖ್ಯ ಅತಿಥಿಗಳಾಗಿದ್ದರು. ನೂತನ ಸಾಲಿಗೆ ಕಾ॥ ಬಿ.ಹೂವಯ್ಯ (ಅಧ್ಯಕ್ಷ) ರುಕ್ಕಯ್ಯ ಪೂಜಾರಿ, ಗಿರಿಜ (ಉಪಾಧ್ಯಕ್ಷರು) ಸಂಜೀವಬಂಗೇರ (ಕಾರ್ಯದರ್ಶಿ) ಶ್ರೀಮತಿ ವಿಮಲ, ರಾಜೀವಿ (ಸಹ ಕಾರ್ಯದರ್ಶಿಗಳು) ಬಿ.ವಾಸುಗಟ್ಟಿ (ಖಜಾಂಚಿ)ಯವರು ಆಯ್ಕೆಗೊಂಡರು.

ಕಾರಿಗ ನೂರು

ಇಲ್ಲಿನ ಡಿ.ವೈ.ಎಫ್.ಐ. ಘಟಕ ಆರ್.ಬಿ.ಎಸ್.ಎಸ್. ಕಾಲೋನಿ ಜನತೆಗೆ ನಿವೇಶನ, ಕುಡಿಯುವ ನೀರು, ಶೌಚಾಲಯ ಮುಂತಾದ ನಾಗರೀಕ ಸೌಲಭ್ಯ ಒತ್ತಾಯಿಸಿ ಜೂನ್ 12ರಂದು ಹೊಸ ಪೇಟೆ ಸಹಾಯಕ ಆಯುಕ್ತರ ಕಛೇರಿ ಎದುರು ಪ್ರದರ್ಶ ನಡೆಸಿ ಮನವಿ ಅರ್ಪಿಸಿದರು.

ಪಡುಕೋಣೆ

ಜುಲೈ 26ರಂದು ಇಲ್ಲಿನ ಡಿ.ವೈ.ಎಫ್.ಐ. ಮಹಾಸಭೆ ನಡೆಯಿತು. ಆರ್. ಜಯಕುಮಾರ್ ಮುತಿರಾದವರು ಮಾತನಾಡಿದರು. ಸಮಿತಿ ಅಧ್ಯಕ್ಷರಾಗಿ ರಾಜೀವ, ಉಪಾಧ್ಯಕ್ಷರಾಗಿ ಬಾಬು ನಾಯಕ ಕಾರ್ಯದರ್ಶಿಯಾಗಿ ಶ್ರೀಧರ್ ಮುಂತಾದವರು ಆಯ್ಕೆ ಗೊಂಡರು.

ಮಾಸ್ಟರ್ ಪ್ಲಾನ್ ಗೆ ಒತ್ತಾಯ

ರಾಯಚೂರು ತಾಲೋಕು ಡಿ.ವೈ.ಎಫ್.ಐ. ಸಮಿತಿ ನಗರದ ಅಂಡರ್ ಗ್ರೌಂಡ್ ಡ್ರೈನೇಜ್ ಕನೆಷನ್ ಹಾಗೂ ರಸ್ತೆ ಚರಂಡಿ ಮುಂತಾದ ಸಮಸ್ಯೆಗಳ ಪರಿಹಾರಕ್ಕಾಗಿ ರಾಯಚೂರು ನಗರಕ್ಕೆ ಮಾಸ್ಟರ್ ಪ್ಲಾನ್ ಜಾರಿಗೊಳಿಸಲು ಒತ್ತಾಯಿಸಿ ಜುಲೈ 7ರಂದು ತೀನ್ ಚೌಕದಲ್ಲಿ ಧರಣಿ ಸತ್ಯಾಗ್ರಹ ನಡೆಸಿತು.

ಬೋಡೋ ಚಳುವಳಿ ಎತ್ತ ಸಾಗಿದೆ?

ಪ್ರತ್ಯೇಕ ಬೋಡೋ ರಾಜ್ಯಕ್ಕಾಗಿ ಚಳುವಳಿ ತೀವ್ರವಾಗುತ್ತಿದೆ. ಬೋಡೋ ಜನಾಂಗ ಅಸ್ಸಾಂನ ಬಯಲು ಪ್ರದೇಶದಲ್ಲಿ ವಾಸಿಸುವ ಪ್ರಮುಖ ಆದಿವಾಸಿ ಜನಾಂಗ. ರಾಜ್ಯದ ಸುಮಾರು 20ಲಕ್ಷ ಆದಿವಾಸಿ ಜನಸಂಖ್ಯೆಯ ಸುಮಾರು ಶೇಕಡಾ50ರ ಭಾಗ ಬೋಡೋ ಜನಾಂಗದವರೇ.

ಅಸ್ಸಾಂ ಬಯಲು ಪ್ರದೇಶದಲ್ಲಿ ರಂಗಾ, ಮಿಟ್ಟಿಂಗ್, ಪಾಲುಂಗ್ ಮುಂತಾದ ಆದಿವಾಸಿಗಳೂ ವಾಸ ಮಾಡುತ್ತಾರೆ. ಇವರ ಜನಸಂಖ್ಯೆ 8 ಸಾವಿರದಿಂದ ಲಕ್ಷದವರೆಗೆ ಇದೆ. ಅಸ್ಸಾಂನ ಬಯಲು ಪ್ರದೇಶದ ಆದಿವಾಸಿಗಳ ವಿಶೇಷತೆ ಎಂದರೆ, ಅವರು ಆದಿವಾಸೇತರ ಜನಾಂಗಗಳೊಡನೆ ಇದೇ ಪ್ರದೇಶದಲ್ಲಿ ಹಲವಾರು ಶತಕಗಳಿಂದ ವಾಸಿಸುತ್ತಿದ್ದಾರೆ. ಅದೂ ಹೆಚ್ಚಾಗಿ ಒಂದೇ ಹಳ್ಳಿಯಲ್ಲಿ. ಒಂದೇ ರೀತಿಯ ಉತ್ಪಾದನಾ ವಿಧಾನಗಳಲ್ಲಿ ತೊಡಗಿದ್ದಾರೆ. ಗುಡ್ಡನಾಡಿನಲ್ಲಿ ವಾಸಿಸುವ ಆದಿವಾಸಿಗಳಾದ ನಾಗಾ, ಖಾಸಿ, ಗಾರೋಗಳಿಗೆ ಹೋಲಿಸಿದರೆ ಬೋಡೋಗಳ ವಿಶೇಷತೆ ಇದೇ.

ಭಾರತದ ಸಂವಿಧಾನದ 6 ನೇ ಅನುಬಂಧ ಅಸ್ಸಾಂನ ಗುಡ್ಡಗಾಡಿನ ಆದಿವಾಸಿ ಜಿಲ್ಲೆಗಳಿಗೆ ಸ್ವಾಯತ್ತ ಜಿಲ್ಲಾ ಮಂಡಳಿಗಳನ್ನು ಕೊಟ್ಟಿದೆ. ಆದರೆ ಬಯಲು ಪ್ರದೇಶದ ಆದಿವಾಸಿಗಳಿಗೆ ಕೊಟ್ಟಿಲ್ಲ. ಜಾತಿಭೇದವಿರುವ ನಮ್ಮ ಸಮಾಜದಲ್ಲಿ ಆದಿವಾಸಿಗಳನ್ನು ಅತ್ಯಂತ ಕೆಳಸ್ತರದವರನ್ನಾಗಿ ಕಾಣಲಾಗುತ್ತದೆ. ಇವೆಲ್ಲಾ ನಮ್ಮ ಸಮಾಜವನ್ನು ಎತ್ತ ಒಯ್ಯಬಹುದು ಎಂದು ನಮ್ಮ ಸಂವಿಧಾನ ಕರ್ತರು ಗಮನಕ್ಕೆ ತೆಗೆದುಕೊಳ್ಳಲಿಲ್ಲ. ಉದ್ಯೋಗಗಳಲ್ಲಿ ಮೀಸಲಾತಿ ಕೊಡುವುದರಿಂದ ಆದಿವಾಸಿಗಳ ಎಲ್ಲಾ ಸಮಸ್ಯೆಗಳೂ ಪರಿಹಾರವಾಗುತ್ತವೆ ಎಂದು ಅವರು ತಿಳಿದುಕೊಂಡಂತಿದೆ. ಈ ಪ್ರಮಾದದ ಫಲವನ್ನು ನಾವು ಅನುಭವಿಸುತ್ತಿದ್ದೇವೆ.

ಚರಿತ್ರೆಯ ನಿಯಮದ ಪ್ರಕಾರ, ಬಂಡವಾಳಶಾಹಿಯ ಉದಯದ ಜತೆಗೆ ದೇಶದ ಸುಮಾರು 2 ಕೋಟಿ ಆದಿವಾಸಿಗಳಲ್ಲಿ ದೇಶೀಪ್ರಜ್ಞೆ ಜಾಗೃತವಾಗಿದೆ. ಅವರು ತಮ್ಮ ವಿಶಿಷ್ಟ ದೇಶೀಯತೆಯನ್ನು ಗೌರವಿಸಬೇಕು, ಸ್ವಾಯತ್ತತೆ ಮತ್ತು ಸಮಾನತೆಯನ್ನು ದೊರಕಬೇಕು ಎಂದು ಬಯಸುತ್ತಾರೆ. ಈ ಬೆಳವಣಿಗೆಯನ್ನು ಗುರುತಿಸದೆ ನಾವು ಆದಿವಾಸಿ ಸಮಸ್ಯೆಯನ್ನು ಪರಿಹರಿಸುವುದು ಸಾಧ್ಯವಿಲ್ಲ.

ಅಚಿಂತ್ಯ ಭಟ್ಟಾಚಾರ್ಯ

ಬೋಡೋ ಚಳುವಳಿ

ಅಸ್ಸಾಂನ ಬಯಲು ಪ್ರದೇಶದ ಆದಿವಾಸಿಗಳ ಜಾಗೃತಿಯಲ್ಲಿ ದೊಡ್ಡ ಗುಂಪಾದ ಬೋಡೋಗಳು ಮುಂದಿರುವುದರಲ್ಲಿ ಏನೂ ಆಶ್ಚರ್ಯವಿಲ್ಲ. ಈಶಾನ್ಯ ಭಾರತದಲ್ಲಿ ಬೋಡೋ ಅತ್ಯಂತ ಪ್ರಾಚೀನವಾದ ಆದಿವಾಸಿ ಗುಂಪು. ಪ್ರಾಚೀನ ಭಾರತೀಯ ಪುಸ್ತಕಗಳಲ್ಲಿ, ಪುರಾಣಗಳಲ್ಲಿ ಅವರನ್ನು ಕಿರಾತರೆಂದು ಕರೆಯಲಾಗುತ್ತದೆ. ಪ್ರಾಚೀನ ಕಾಲದಲ್ಲೇ ಈ ಗುಂಪು ದಕ್ಷಿಣ ಚೀನಾದಿಂದ ವಲಸೆ ಬಂದು ಉತ್ತರ ಅಸ್ಸಾಂನಲ್ಲಿ ನೆಲೆಸಿತ್ತು. ಇವರ ಒಂದು ಭಾಗ ಹಿಂದೂ ಧರ್ಮವನ್ನು ಅಂಗೀಕರಿಸಿತು. ಅನಂತರ ಇನ್ನೊಂದು ಭಾಗ ಕ್ರಿಶ್ಚಿಯನ್ ಧರ್ಮವನ್ನು ಸ್ವೀಕರಿಸಿತು. ಆದರೆ ಬೋಡೋ ಆದಿವಾಸಿಗಳ ದೊಡ್ಡ ಭಾಗ ತಮ್ಮ ಪ್ರಾಚೀನ ಧರ್ಮವನ್ನೇ ಅನುಸರಿಸಿತು. ಬಹುಸಂಖ್ಯಾತ ಬೋಡೋಗಳು ರಾಜ್ಯದ ಪ್ರಮುಖ ಜನಾಂಗದ ಭಾಷೆ ಮಾತನಾಡಿದರೂ, ಮನೆಯಲ್ಲಿ ತಮ್ಮ ಭಾಷೆಯನ್ನು ಮಾತನಾಡುತ್ತಾರೆ. ಆದರೂ ಆರವತ್ತರ ದಶಕದವರೆಗೂ, ವಿಶಿಷ್ಟ ಜನಾಂಗ ಚಿಕ್ಕದಿದ್ದರೂ, ಅಸ್ಸಾಂ ದೇಶೀಯತೆಯೊಂದಿಗೆ ಬೋಡೋಗಳು ವಿಲೀನವಾಗುತ್ತಾರೆ ಎಂದು ನಿರೀಕ್ಷಿಸಲಾಗಿತ್ತು.

ಈ ಹಂತದಲ್ಲಿ ಆದಿವಾಸಿ ಸಂಘಟನೆ ಸಾಮಾಜಿಕ ಆರ್ಥಿಕ ಸಮಸ್ಯೆಗಳ ನ್ನೆತ್ತಿಕೊಂಡಿತ್ತು. ಇವುಗಳ ನಾಯಕತ್ವ ಕಾಂಗ್ರೆಸ್‌ನ ಕೈಯಲ್ಲಿತ್ತು.

60ರ ದಶಕದಲ್ಲಿ ಪರಿಸ್ಥಿತಿ ತೀವ್ರವಾಗಿ ಬದಲಾಯಿತು. ಆದಿವಾಸಿಗಳ-ಅದರಲ್ಲೂ ವಿದ್ಯಾವಂತ ಪ್ರಯತ್ನವನ್ನೇನನ್ನು ಮಾಡಲಿಲ್ಲ.

ಇಂತಹ ಅನುಭವಗಳ ಆಧಾರದ ಮೇಲೆ ಆದಿವಾಸಿ ನಾಯಕತ್ವದ ಒಂದು ಭಾಗ-ಅದರಲ್ಲೂ ಯುವ ವಿಭಾಗ ಕಾನೂನು ಬದ್ಧ ಪ್ರಜಾಸತ್ತಾತ್ಮಕ ವಿಧಾನಗಳನ್ನು ಗಾಳಿಗೆ ತೂರಿ ನೇರ ಕಾರ್ಯಾಚರಣೆಗೆ ಇಳಿಯಿತು. ಅವರು ಪಿ.ಟಿ.ಸಿ.ನ ನಾಯಕತ್ವವನ್ನು ಅಸ್ಸಾಂನ ಶೇಕಡಾ ಭಾಗವನ್ನು ಪ್ರತ್ಯೇಕಿಸಿ ಪ್ರತ್ಯೇಕ ಬೋಡೋಲ್ಯಾಂಡ್ ರಚಿಸಬೇಕೆಂದರು. ಈ ಚಳುವಳಿಗೆ ನಾಯಕತ್ವವನ್ನು ಬೋಡೋ ವಿದ್ಯಾರ್ಥಿ ಸಂಘಟನೆ (ಎ.ಬಿ.ಎಸ್.ಯು)–

ಬೆಳೆಸಲು ಅಮೆರಿಕನ್ ಮಿಷನ್ನುಗಳು ಮತ್ತು ಮಿಶನರಿ ಸಂಘಟನೆಗಳು ಈ ಚಳುವಳಿ ಗುಪ್ತವಾಗಿ ಕುಮ್ಮಕ್ಕು ನೀಡುತ್ತಿವೆ. ಅಸ್ಸಾಂ ನಂತಹ ಹಲವು ದೇಸೀ ಜನಾಂಗಗಳು ಇರುವ ರಾಜ್ಯದಲ್ಲಿ ಪ್ರತ್ಯೇಕವಾದ ಬೆಳೆಸಲು ಅಮೆರಿಕನ್ ಬ್ರಿಟಿಷ್ ಸಾಮ್ರಾಜ್ಯಶಾಹಿ ಕೂಟ ಪ್ರಯತ್ನಿಸುತ್ತಿದೆ. 40ರ ದಶಕದಲ್ಲಿ ಕೂಪಲ್ಯಾಂಡ್, ಮತ್ತು ಇತ್ತೀಚೆಗೆ ಡಾ|| ಲೀ ರೋಮ್ ಮತ್ತು ಡಾ|| ಮೇಬೆಲ್ ವೇನರ್ ಇಂತಹುದೇ ಪಿತೂರಿಗಳನ್ನು ನಡೆಸಿದ್ದಾರೆ.

ಬೋಡೋಗಳ ರಾಜಕೀಯ ಪಕ್ಷ ಬಯಲುಸೀಮೆ ಆದಿವಾಸಿ ಮಂಡಳಿ (ಪಿ.ಟಿ.ಸಿ) ರಚಿತವಾಯಿತು. ಈ ಪಕ್ಷ ಸ್ವಾಯತ್ತತೆಯ ಬೇಡಿಕೆಯನ್ನು ಮುಂದೊಡ್ಡಿತು.ಅವರ ಭಾಷೆ, ಸಂಸ್ಕೃತಿ, ಭೂಮಿ ಮತ್ತು ಎಲ್ಲಾ ರೀತಿಯಲ್ಲೂ ಸಮಾನತೆಯ ಬೇಡಿಕೆಗಳಿಗೆ ಆದಿವಾಸಿಗಳಲ್ಲಿ ಅಲ್ಪಕಾಲದಲ್ಲೇ ಭಾರೀ ಬೆಂಬಲ ದೊರೆಯಿತು. ಪಿ.ಟಿ.ಸಿ. ಬೋಡೋಗಳಿಗೆ ಸ್ವಾಯತ್ತತೆಯ ಬೇಡಿಕೆ ಅಲ್ಲದೆ, ಉದಯಾಚಲ ಎಂಬ ಪ್ರತ್ಯೇಕ ರಾಜ್ಯ ಬೇಕೆಂಬ ಬೇಡಿಕೆಯನ್ನು ಮುಂದಿಟ್ಟಿತು. ಈ ಬೇಡಿಕೆಯ ಆಧಾರದಮೇಲೆ ಈ ಪಕ್ಷ ರಾಜ್ಯ ವಿಧಾನ ಸಭೆ ಮತ್ತು ಲೋಕಸಭಾ ಚುನಾವಣೆಗಳಲ್ಲಿ 1972ರಿಂದ ಸ್ಥಾನಗಳನ್ನು ಗಳಿಸುತ್ತಾ ಬಂದಿದೆ.

ಚಳುವಳಿಗಳ ಬಗ್ಗೆ ಆಗಾಗ್ಗೆ ಮಾತನಾಡಿದರೂ, ಪಿ.ಟಿ.ಸಿ. ಪಾರ್ಲಿಮೆಂಟರಿ ಪದ್ಧತಿಯನ್ನೇ ಅನುಸರಿಸುತ್ತಿತ್ತು. ಅವರು ಆಳುವ ಪಕ್ಷದೊಂದಿಗೆ ಸಂಬಂಧ ಇರಿಸಿಕೊಂಡಿದ್ದು, ಅವರ ಬೇಡಿಕೆಗಳ ವಿರೋಧಿಗಳ ಬಲಹೀನ ಪರಿಸ್ಥಿತಿಯಲ್ಲಿರುವ ಸಮಯಕ್ಕೆ ಕಾಯುತ್ತಿದ್ದರು. ಆದರೂ ಈ ಪಕ್ಷ ಸ್ವಾಯತ್ತತೆಯ ಹಕ್ಕಿನ ಬಗ್ಗೆ ಆದಿವಾಸಿ ಜನರಲ್ಲಿ ಪ್ರಜ್ಞೆ ಮೂಡಿಸುವಲ್ಲಿ ಯಶಸ್ವಿಯಾಯಿತೆಂದು ಹೇಳಬಹುದು.

80ರ ದಶಕದಲ್ಲಿ ಅಸ್ಸಾಂನಲ್ಲಿ "ವಿದೇಶಿ-ವಿರೋಧಿ" ಚಳುವಳಿ ನಡೆದು, ಎ.ಜಿ.ಪಿ. ಸರಕಾರ ರಚಿತವಾಯಿತು. ಈ ಬೆಳವಣಿಗೆ ಬೋಡೋಗಳಲ್ಲಿ ಆದಿವಾಸಿ ಪ್ರಶ್ನೆಯ ಬಗ್ಗೆ ಧೋರಣೆಯನ್ನು ತೀವ್ರವಾಗಿ ಬದಲಾಯಿಸಿತು.

ಬೋಡೋ ಚಳುವಳಿ - ಹೊಸ ಹಂತ

ಅಸ್ಸಾಂನಿಂದ 'ವಿದೇಶಿಯರನ್ನು ಹೊರದಬ್ಬುವ'ಚಳುವಳಿ ಯಶಸ್ವಿಯಾದ್ದರಿಂದ, ಅಸ್ಸಾಂ ಮತ್ತು ಇಡೀ ದೇಶದ ಆದಿವಾಸಿ ನಾಯಕರಲ್ಲಿ ಒಂದು ಅಂತ ಮನದಟ್ಟಾಯಿತು.ಪ್ರಜಾಸತ್ತಾತ್ಮಕ ವಿಧಾನಗಳ ಬದಲು ಜನಾಂಗ ಉನ್ಮಾದ, ಪ್ರತ್ಯೇಕತಾವಾದ, ರಾಜಕೀಯ ಜೀವನವನ್ನು ಸ್ತಬ್ಧಗೊಳಿಸುವ ವ್ಯಾಪಕ ಹಿಂಸಾಚಾರವನ್ನು ಬೇಡಿಕೆ ಈಡೇರಿಸಲು ಅಧಿಕಾರ ಪಡೆಯಲು ಬಳಸಬಹುದು! ಗುತ್ತೇದಾರಿ ಬಂಡವಾಳಶಾಹೀ ಮತ್ತು ಭೂಮಾಲಕರನ್ನು ಕಾಪಾಡಲು, ಆಳುವ ವರ್ಗಗಳು ಪ್ರಜಾಸತ್ತಾತ್ಮಕ ಶಕ್ತಿಗಳ ಮೇಲೆ ದಾಳಿ ಇಡುತ್ತಿವೆ. ಈ ಪ್ರಯತ್ನದಲ್ಲಿ ಆಳುವ ವರ್ಗಗಳ ಪ್ರತ್ಯೇಕತಾವಾದಿ ಚಳುವಳಿಗಳನ್ನು ಮುಂಚಿಟ್ಟಿದೆ ಬಳಸುತ್ತಿವೆ. ರಾಷ್ಟ್ರೀಯ ಐಕ್ಯತೆಯ ಮಂತ್ರ ಜಪಿಸುವ ಭಾರತದ ಆಳುವ ವರ್ಗಗಳು, ಅನೈಕ್ಯತೆ ಮತ್ತು ಪ್ರತ್ಯೇಕತಾವಾದವನ್ನು ಪ್ರತಿಪಾದಿಸುವ ಎದುರಿಸುವ ಶಕ್ತಿಗಳನ್ನು

ಟಿ.ಪಿ.ಕಯು.ಟಿ.ಎನ್.ಎಂದು ರಚಿಸಿರುವ ಒಡಕು ಗುಂಪು ನೀಡಿದವು. II.ಪಿ.ಟಿ.ಸಿ.ಯು/ಟಿ.ಎನ್.ಎಲ್.ಎಫ್.ಗೆ ಕ್ರಿಶ್ಚಿಯನ್ ಮಿಶನರಿಗಳ ಬೆಂಬಲ ಇದೆಯೆಂದು ಪ್ರತೀತಿ.ಯಾವ ರೀತಿಯಲ್ಲಿ ಬೋಡೋ ಚಳುವಳಿ ವಿಕಾಸಗೊಂಡು ಹರಡಿತು ಎಂಬುದನ್ನು ಪತ್ರಿಕೆಗಳು ವಿವರವಾಗಿ ವರದಿ ಮಾಡಿವೆ. ಹೆಚ್ಚುಕಡಿಮೆ ಸತತ ರೈಲ್ವೇ ಬಂದ್, ರಸ್ತೆ ಸಾರಿಗೆ ರೋಕೋ, ಆರ್ಥಿಕ ದಿಗ್ಬಂಧನ ಆದಿವಾಸಿಗಳಿಗೆ ಬೆದರಿಕೆ ಮತ್ತು ದಾಳಿ ಈ ಹೊಸ ವಿಧಾನಗಳನ್ನು ಚಳುವಳಿ ಬಳಸಿತು. ಕೊಲೆ ಮತ್ತು ವ್ಯಾಪಾರ ಹಿಂಸಾಚಾರ ಇನ್ನೂ ಮುಂದುವರೆಯುತ್ತಿದೆ. ಪೋಲೀಸು ಗೋಲಿಬಾರ್‌ಗಳಲ್ಲಿ ಹಲವರು ಸತ್ತಿದ್ದಾರೆ. ಭವಿಷ್ಯತ್ತಿನಲ್ಲಿ ಇದು ಅಪಾಯಕಾರಿ ಪರಿಸ್ಥಿತಿಯತ್ತ ಸಾಗುತ್ತಿರುವ ಹಾಗೆ ಕಾಣುತ್ತದೆ.

ಆದರೂ ಬೋಡೋ ಚಳುವಳಿಯನ್ನು - ವಿದೇಶೀ ಪಿತೂರಿ ಅಥವಾ ಬರಿಯ ಕಾಂಗ್ರೆಸ್ (ಐ)ನ ಪಿತೂರಿ ಎಂದು ತಳ್ಳಿಹಾಕುವುದು ಸಲ್ಲ. ಚಳುವಳಿ ಹಲವು ನ್ಯೂನತೆಗಳೊಂದಿಗೆ ಆದಿವಾಸಿ ಸಮಸ್ಯೆಯ ಕೆಲವು ತರ್ಕ ಪ್ರಶ್ನೆಗಳನ್ನು ಬಿಂಬಿಸುತ್ತಿದೆ. ಇದರಿಂದಾಗಿ ಇದಕ್ಕೆ ಆದಿವಾಸಿ ಜನತೆಯ ಬೆಂಬಲ ದೊರೆತಿದೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಮುಖ್ಯ ಪ್ರಶ್ನೆ ಇತ್ಯರ್ಥವಾಗಬೇಕಾಗಿದ್ದು ಭಾರತದಲ್ಲಿ ಆದಿವಾಸಿ ಜನತೆಯ ದೇಶೀಯ ಆಕಾಂಕ್ಷೆಗಳು ರಾಷ್ಟ್ರೀಯ ಜೀವನದ ಭಾಗವೆಂದು ಅಂಗೀಕಾರ ಸಲ್ಲುತ್ತದೆಯೇ. ಇತರ ದೇಸೀ ಜನಾಂಗಗಳ ಜತೆ ಸಮಾನತೆ ಸಾಧ್ಯವಾಗುತ್ತದೆಯೇ- ಈ ಪ್ರಶ್ನೆಗಳಿಗೆ ಸಮಾಧಾನಕರ ಉತ್ತರ ಹುಡುಕದೆ, ಆದಿವಾಸಿ ಪ್ರಶ್ನೆಗೆ ಪ್ರಜಾಸತ್ತಾತ್ಮಕ ಪರಿಹಾರ ಕನಸಿನ ಮಾತು.

> ಎ.ಜಿ.ಪಿ. ಸರಕಾರದ ಆದಿವಾಸಿ ನೀತಿ ಕೂಡಾ ಕಾಂಗ್ರೆಸ್ ನೀತಿಗಿಂತ ಭಿನ್ನವಿಲ್ಲ. ಅಲ್ಪಸಂಖ್ಯಾತ ದೇಸೀ ಜನಾಂಗಗಳು ತಮ್ಮ ಸ್ವಂತಿಕೆ ತ್ಯಜಿಸಿ ಬಹುಸಂಖ್ಯಾತ ಜನಾಂಗದೊಂದಿಗೆ ವಿಲೀನಗೊಳ್ಳಬೇಕೆಂಬುದು ಅದರ ಭಾವನೆ. ಆದ್ದರಿಂದ ಆದಿವಾಸಿಗಳಿಗೆ ಸಮಾನತೆ ಅವರ ಸ್ವಂತಿಕೆಯ ರಕ್ಷಣೆಯ ಬೇಡಿಕೆಯನ್ನು ಅದು ತಿರಸ್ಕರಿಸುತ್ತದೆ.

ಚಳುವಳಿ ಸ್ವರೂಪ

ಚಳುವಳಿಗೆ ಆದಿವಾಸಿ ಅದರಲ್ಲೂ ಬೋಡೋಗಳ ಬೆಂಬಲವಿದೆ ಎನ್ನುವುದು ಖಚಿತ. ಆದರೆ ABSU ಕೇಳಿರುವುದು ಬರೀ ಆದಿವಾಸಿ ರಾಜ್ಯವಲ್ಲ. ಪ್ರತ್ಯೇಕ ಬೋಡೋಲ್ಯಾಂಡ್. ಪ್ರಸ್ತುತ ಚಳುವಳಿಯಲ್ಲಿ ಇದರಿಂದಾಗಿಯೇ ಇತರ ಆದಿವಾಸಿಗಳ ಹೆಚ್ಚಿನ ಆಸ್ಥೆ ತೋರಿಸಿಲ್ಲ. ಅಲ್ಲದೆ ಚಳುವಳಿಯ ನಾಯಕತ್ವ ಸಂಕುಚಿತ ಪಂಥವಾದಿ ನಾಯಕರ ಕೈಯಲ್ಲಿದೆ. - ಅವರು ಅಸ್ಸಾಂ ರಾಜ್ಯ ಸರಕಾರ ತಮ್ಮ ಏಕಮಾತ್ರ ವೈರಿ ಎಂದು ಗ್ರಹಿಸಿದ್ದಾರೆ.

ಆದರೆ ಕಳೆದ 40 ವರ್ಷಗಳಲ್ಲಿ ಕಾಂಗ್ರೆಸ್ ಸರಕಾರ 'ಆದಿವಾಸಿ ಪ್ರಶ್ನೆ'ಯ ಮೇಲೆ ಪ್ರತಿಗಾಮಿ ನಿಲುವನ್ನೇ ತಳೆಯುತ್ತಾ ಬಂದಿದೆ. ಎ.ಬಿ.ಎಸ್.ಯು ಇದನ್ನೇನನ್ನು ಗಮನಿಸಿಲ್ಲ. ರಾಜ್ಯ ಸರಕಾರ ವಿರುದ್ಧ ಹೋರಾಟದಲ್ಲಿ ಕೇಂದ್ರದಿಂದ ಬೆಂಬಲ ಪಡೆಯಲು ಪ್ರಯತ್ನಿಸುತ್ತಿದೆ.

ಈ ಅವಕಾಶವನ್ನು ಕಾಂಗ್ರೆಸ್(ಐ) ಮತ್ತು ಕೇಂದ್ರ ಸರ್ಕಾರ ಉಪಯೋಗಿಸಿಕೊಳ್ಳುತ್ತಿದೆ. ಕೇಂದ್ರ ಮಂತ್ರಿ ಸಂತೋಷ ಮೋಹನ ದೇಬ್‌ರ ಬೆಂಬಲೊಳಗಿರುವ ಎ.ಕೆ.ಎಸ್.ಎ. ಎಂಬ ಸಂಘಟನೆ ಎ.ಬಿ.ಎಸ್.ಯು. ಬೇಡಿಕೆಯನ್ನು ಸಾರ್ವಜನಿಕವಾಗಿ ಬೆಂಬಲಿಸಿದೆ. ಕಾಂಗ್ರೆಸ್‌ನ ಉದ್ದೇಶ ಈಗಾಗಲೇ ತೊಂದರೆಯಲ್ಲಿರುವ ಎ.ಜಿ.ಪಿ. ಇದರಿಂದ ಕೊನೆಯದಾಗಿ ಸರ್ಕಾರವನ್ನು ಇನ್ನಷ್ಟು ಬಲಹೀನ ಗೊಳಿಸುವುದು. ಇದರಿಂದ ಕೊನೆಯದಾಗಿ ಸರ್ಕಾರವನ್ನು ವಜಾ ಮಾಡುವ ಉದ್ದೇಶ ಸುಗಮವಾಗಿ ಈಡೇರಿಸಬಹುದು ಎಂದು ಅದರ ಸಂಚು.

ಅಸ್ಸಾಂನಲ್ಲಿ ಪ್ರತ್ಯೇಕತಾವಾದವನ್ನು

'ಬೋಡೋ ರಾಜ್ಯ' ನ್ಯಾಯಯುತ ಬೇಡಿಕೆಯೇ?

ಪ್ರತ್ಯೇಕ ಬೋಡೋ ರಾಜ್ಯ ಅಥವಾ ಅಸ್ಸಾಂ ರಾಜ್ಯದೊಳಗೆ ಸ್ವಾಯತ್ತ ಪ್ರದೇಶ ನ್ಯಾಯಯುತ ಬೇಡಿಕೆಯೇ?

ಎಂಬುದು ಪ್ರಶ್ನೆ. ಅಸ್ಸಾಂನ ಶೇಕಡಾ ಜನಸಂಖ್ಯೆ ಆದಿವಾಸಿಗಳದು. ಆದರೆ ರಾಜ್ಯದ ಆದಿವಾಸಿಗಳು ಹದಿನಾಲ್ಕು ಜಿಲ್ಲೆಗಳಲ್ಲಿ ಹರಿದುಹಂಚಿಹೋಗಿದ್ದಾರೆ ಒಂದೇ ಒಂದು ಸಬ್‌ಡಿವಿಜನ್‌ನಲ್ಲಿ ಆದಿವಾಸಿ ಬಹುಸಂಖ್ಯಾತರಾಗಿದ್ದಾರೆ- ಶೇಕಡಾ 65 ರಷ್ಟು. ನಾಲ್ಕು ಇತರ ಸಬ್‌ಡಿವಿಜನ್‌ಗಳಲ್ಲಿ ಶೇಕಡಾ 28-39 ರಷ್ಟು ಇದ್ದಾರೆ. ಹೆಚ್ಚಿನ ಸಬ್‌ಡಿವಿಜನ್‌ಗಳಲ್ಲಿ ಈ ಶೇಕಡಾವಾರು ಇನ್ನೂ ಕಡಿಮೆ ಶೇಕಡಾ 1 ರಷ್ಟು ಕಡಿಮೆ ಇರುವುದು ಇದೆ. ಆದಿವಾಸಿ ಬಹುಸಂಖ್ಯಾತ ಸಬ್‌ಡಿವಿಜನ್‌ನಲ್ಲೂ, ಬೋಡೋ ಜನಾಂಗ ಬಹುಸಂಖ್ಯಾತರಾಗಿಲ್ಲ. ಮಿಟ್ಟಿಂಗ್ ಆದಿವಾಸಿಗಳು ಬಹುಸಂಖ್ಯಾತರಾಗಿದ್ದಾರೆ. ಆದ್ದರಿಂದ ಪ್ರತ್ಯೇಕ ಬೋಡೋ ರಾಜ್ಯಕ್ಕೆ ಯಾವುದೇ ಆಧಾರವಿಲ್ಲ. ಎ.ಬಿ.ಎಸ್.ಯು ಕೇಳುತ್ತಿರುವ ಪ್ರದೇಶದಲ್ಲಿ ಬೋಡೋ ರಾಜ್ಯ ರಚಿಸಿದರೆ, ಆ ರಾಜ್ಯದಲ್ಲೇ ಬೋಡೋಗಳು ಅಲ್ಪಸಂಖ್ಯಾತರಾಗುತ್ತಾರೆ- ಶೇಕಡಾ 25ರಷ್ಟು. ಆದ್ದರಿಂದ ಬೋಡೋ ಸಮಸ್ಯೆಗೆ ಪ್ರತ್ಯೇಕ ರಾಜ್ಯಪರಿಹಾರವಲ್ಲ.

ಪರಿಹಾರ ಅಸ್ಸಾಂ ರಾಜ್ಯದ ಚೌಕಟ್ಟಿನೊಳಗೆ ಹುಡುಕಬೇಕಾಗುತ್ತದೆ.

ಸರ್ಕಾರದ ಪಾತ್ರ

ಎ.ಜಿ.ಪಿ. ಸರ್ಕಾರದ ಆದಿವಾಸಿ ನೀತಿ, ಕಾಂಗ್ರೆಸ್‌ಗಿಂತ ಬಹಳಷ್ಟು ಬೇರೆ ಇಲ್ಲ. ಎ.ಜಿ.ಪಿ. ಯ ಪ್ರಕಾರ ಅಲ್ಪ ಸಂಖ್ಯಾತ ದೇಸೀ ಜನಾಂಗಗಳು ತಮ್ಮ ಸ್ವಂತಿಕೆ ಮರೆತು ಬಹುಸಂಖ್ಯಾತರೊಂದಿಗೆ ವಿಲೀನವಾಗಬೇಕು.ಆದ್ದರಿಂದ ಸಮಾನತೆ ಸಂಸ್ಕೃತಿಯ ರಕ್ಷಣೆಯ ಬೇಡಿಕೆಯನ್ನು ಅದು ಸಂಪೂರ್ಣವಾಗಿ ನಿರಾಕರಿಸುತ್ತದೆ. ದಮನಿಸುತ್ತದೆ. ಬಹಳಷ್ಟು ಸಮಯ ರಾಜಕೀಯ ಮಾತುಕತೆಯೇ ನಡೆಯಲಿಲ್ಲ. ಎ.ಜಿ.ಪಿ. ದಮನದಿಂದ ಈ ಸಮಸ್ಯೆ ಪರಿಹಾರವಾಗುವುದು ಎಂದು ತಿಳಿದಂತಿತ್ತು. ಈ ಮಾತುಕತೆಯಲ್ಲಿ ಕೇಂದ್ರ ಸರ್ಕಾರ ಪಾಲ್ಗೊಳ್ಳುವುದಕ್ಕೂ ಅವರ ವಿರೋಧವಿದೆ.

ಕೇಂದ್ರ ಸರ್ಕಾರದ ಪ್ರಶ್ನಾರ್ಹ ಪಾತ್ರವಿದ್ದಾಗ್ಯೂ, ಅದನ್ನು ಮಾತುಕತೆಗಳಿಂದ ಹೊರಗಿಡುವುದು ಸಾಧುವಲ್ಲ.

ಬಂದೂಕಿನಿಂದ ಸಮಸ್ಯೆ ಪರಿಹರಿಸುವುದು ಸಾಧ್ಯವಿಲ್ಲ ಎಂದು ಎ.ಜಿ.ಪಿ.ಗೆ ಮನದಟ್ಟಾಗಬೇಕು ಇನ್ನೂ ಅದರಲ್ಲಿ ಸಫಲವಾಗಿಲ್ಲ. ನಾಗಾ ಮತ್ತು ಮಿಜೋಗಳ ಮೇಲೆ ಅತ್ಯಂತ ಬರ್ಬರ ದಮನದ ನಂತರವೂ, ಅವರ ಜತೆಗೆ ಮಾತುಕತೆಗೆ ಕೇಂದ್ರ ತೊಡಗಬೇಕಾಯಿತು. ಅವರ ರಾಜಕೀಯ ಸ್ವಾಯತ್ತತೆಯ ಬೇಡಿಕೆಗೆ ಮಣಿಯಬೇಕಾಯಿತು. ಈ ಅನುಭವವನ್ನು ಎ.ಜಿ.ಪಿ. ಮನಗಾಣಬೇಕು.

ನಮ್ಮ ಪಕ್ಷದ ಧೋರಣೆ

ನಮ್ಮ ಪಕ್ಷದ ಧೋರಣೆಯ ಪ್ರಕಾರ ಆದಿವಾಸಿಗಳ ಸ್ವಾಯತ್ತತೆ, ಇತರ ದೇಸಿ ಜನಾಂಗಗಳ ಜತೆ ಸಮಾನತೆ, ಸಾಂಸ್ಕೃತಿಕ ಸ್ವಂತಿಕೆಯನ್ನು ಕಾಯ್ದುಕೊಳ್ಳುವುದು-ಇದರ ಬಗ್ಗೆ ತಕ್ಕ ರಾಜಕೀಯ ಮತ್ತು ಸಂವೈಧಾನಿಕ ಕ್ರಮಗಳನ್ನು ಕೈಗೊಳ್ಳಬೇಕು. ಬಡತನ ಮತ್ತು ಸಂಕಷ್ಟಗಳಲ್ಲಿ ಮುಳುಗಿರುವ ಆದಿವಾಸಿಗಳಿಗೆ ಆರ್ಥಿಕ ಬೆಳವಣಿಗೆಗೆ ಅವಕಾಶ ಕಲ್ಪಿಸಿಕೊಡಬೇಕು. ಇಂಡಿಯಾದಂತಹ ಹಲವು ದೇಸಿ ಜನಾಂಗಗಳಿರುವ ದೇಶದಲ್ಲಿ, ತಮ್ಮ ಸಾಂಸ್ಕೃತಿಕ ಸ್ವಂತಿಕೆ ಕಾಯ್ದುಗೊಳ್ಳದೆ ಆಳುವ ವರ್ಗಗಳು ಹೇರುವ ಆರ್ಥಿಕ ಬೆಳವಣಿಗೆ ಯೋಜನೆಗಳು ತಮ್ಮನ್ನು ಮುಟ್ಟುವುದಿಲ್ಲವೆಂದು ಆದಿವಾಸಿ ಜನತೆ ಕಂಡುಕೊಂಡಿದೆ. ಹೆಚ್ಚಿನ ಸಂದರ್ಭಗಳಲ್ಲಿ ಪ್ರತ್ಯೇಕ ರಾಜ್ಯ ಸಾಧ್ಯವಿಲ್ಲವಾದರೂ, ಸ್ವಾಯತ್ತ ಜಿಲ್ಲಾ ಸಮಿತಿಗಳು ಮತ್ತು ಹಲವು ಹಂತಗಳಲ್ಲಿ ಸ್ವಯಂಆಡಳಿತ ವ್ಯವಸ್ಥೆ ಆದಿವಾಸಿಗಳ ಆಕಾಂಕ್ಷೆಗಳನ್ನು ಪೂರೈಸಬಲ್ಲುದು. ನಮ್ಮ ಪಕ್ಷ ಇತರ ಎಡ ಮತ್ತು ಜಾತ್ಯಾತೀತ ಶಕ್ತಿಗಳೊಂದಿಗೆ ಈ ಧೋರಣೆಯನ್ನು ಜನತೆಯ ಮುಂದಿಟ್ಟಿದೆ. ಇದರ ಆಧಾರದ ಮೇಲೆ ಸಮಸ್ಯೆ ಪರಿಹರಿಸುವಂತೆ ಸರ್ಕಾರವನ್ನು ಒತ್ತಾಯಿಸಿದೆ. ಇದನ್ನು ಜಾರಿಗೊಳಿಸುವುದರಿಂದ ಅಸ್ಸಾಂನ್ನು ಇನ್ನೂ ವಿಘಟಿಸುವುದನ್ನು ತಪ್ಪಿಸಬಹುದು. ಅಲ್ಲದೆ ಈ ಚಳುವಳಿಯಿಂದ ಉಂಟಾಗಬಹುದಾದ ರಾಷ್ಟ್ರೀಯ ಐಕ್ಯತೆಯ ಕುಸಿತವನ್ನು ತಡೆಯಬಹುದು.

ಪಕ್ಷ ರಾಜ್ಯದ ಬಹುಸಂಖ್ಯಾತ 'ಅಸ್ಸಾಮಿ' ದೇಸಿ ಜನಾಂಗದ ಪ್ರಜಾಸತ್ತಾವಾದಿ ವಿಭಾಗಗಳಿಗೆ ಮನವಿ ಮಾಡಿದೆ. ಈ ಚಳುವಳಿಗೆ ನ್ಯಾಯಯುತ ಪರಿಹಾರದತ್ತವಾಗಿ ಜನಾಭಿಪ್ರಾಯ ಬದಲಾಗುತ್ತಿದೆ. ಇದು ಚಳುವಳಿಗಾರರ ಮೇಲೆ, ಸರ್ಕಾರದ ಮೇಲೆ ಎಷ್ಟು ಪರಿಣಾಮ ಬೀರಬಹುದೆಂದು ನೋಡಬೇಕಾಗಿದೆ.

> ಜಾತಿಭೇದವುಳ್ಳ ನಮ್ಮ ಸಮಾಜದಲ್ಲಿ ಆದಿವಾಸಿಗಳನ್ನು ಅತ್ಯಂತ ಕೆಳಸ್ತರದವರನ್ನಾಗಿ ಕಾಣಲಾಗುತ್ತದೆ. ಇವೆಲ್ಲಾ ನಮ್ಮ ಸಮಾಜವನ್ನು ಎತ್ತ ಒಯ್ಯಬಹುದು ಎಂದು ನಮ್ಮ ಸಂವಿಧಾನಕರ್ತರು ಗಮನಕ್ಕೆ ತೆಗೊಳ್ಳಲಿಲ್ಲ, ಉದ್ಯೋಗದಲ್ಲಿ ಮೀಸಲಾತಿ ಆದಿವಾಸಿಗಳ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸುತ್ತದೆ ಎಂದು ಅವ್ರು ತಿಳಿದು ಕೊಂಡಿದ್ದಂತಿದೆ. ಈ ಪ್ರಮಾದದ ಫಲವನ್ನೀಗ ನಾವು ಅನುಭವಿಸುತ್ತಿದ್ದೇವೆ.

> ಬೋಡೋ ಚಳುವಳಿಯ ನಾಯಕತ್ವದ ಸಂಕುಚಿತ ಪಂಥವಾದಿ ನಿಲುವನ್ನು ಕಾಂಗ್ರೆಸ್(ಐ) ಮತ್ತು ಕೇಂದ್ರ ಸರಕಾರ ಉಪಯೋಗಿಸಿ ಕೊಳ್ಳುತ್ತಿದೆ. ಈಗಾಗಲೇ ತೊಂದರೆಯಲ್ಲಿರುವ ಎ.ಜಿ.ಪಿ. ಸರಕಾರವನ್ನು ಕೊನೆಯದಾಗಿ ಅದನ್ನು ಇನ್ನಷ್ಟು ಅಸ್ಥಿರಗೊಳಿಸುವುದು, ವಜಾಮಾಡುವ ಉದ್ದೇಶವನ್ನು ಅದು ಹೊಂದಿದಂತಿದೆ.

ಸರಕಾರಿ ಭೂಮಿಗಾಗಿ ರಾಜ್ಯಾದ್ಯಂತ ಹೋರಾಟ

ಹೋರಾಟಗಳು

ರಾಷ್ಟ್ರದ ಎಡ ಪಕ್ಷಗಳು ಬೆಂಬಲಿಸುವ ಏಳು ರೈತ-ಹಾಗೂ ಕೃಷಿಕೂಲಿಕಾರ ಸಂಘಟನೆಗಳ ಕರೆಯ ಮೇರೆಗೆ, ರಾಜ್ಯದಲ್ಲಿ ಪ್ರಾಂತ ರೈತ ಸಂಘ ಜಂಟಿಯಾಗಿ ಚರ್ಚೆ ಮಾಡಿ, ಜಿಲ್ಲಾವಾರು ಅಭ್ಯಾಸದೊಂದಿಗೆ, ಸಂಘಟನಾ ಪರಿಸ್ಥಿತಿಯನ್ನಾಧರಿಸಿ ಚಳುವಳಿ ರೂಪಿಸಲು ಮೇ ಕಳೆದ ಕೆಲವು ದಿನಗಳಿಂದ ರಾಜ್ಯದ ಹಲವಾರು ಪ್ರದೇಶಗಳಲ್ಲಿ ಅತಿ ಹೆಚ್ಚಿನ ಮಳೆಯಿಂದ, ನೆರೆಹಾವಳಿಯಿಂದ ಬಹಳಷ್ಟು ಹಾನಿಯಾಗಿದ್ದು, ಹಾನಿಗೊಳಗಾದವರಿಗೆ ಸಾಲದಲ್ಲೇ ಪರಿಹಾರ ನೀಡಬೇಕೆಂದು ರಾಜ್ಯ ಸಮಿತಿ ಸರ್ಕಾರವನ್ನು ಒತ್ತಾಯಿಸಿದೆ. 20ರಂದು ಕರೆ ನೀಡಲಾಯಿತು. ಮಳೆಗಾಲ ಈಗಾಗಲೇ ಶುರುವಾಗಿದ್ದು, ಭೂಮಿ ಹಿಡಿದ ರೈತರು ಬಿತ್ತನೆ ಕಾರ್ಯದಲ್ಲಿ ಹೆಚ್ಚು ಆಸಕ್ತರಾಗಿದ್ದ ಕಾರಣ, ಭೂಮಿ ಹಿಡಿದವರಿಗೆ ಪಟ್ಟಾ ಚಳುವಳಿಗಿಂತಲೂ ಹೆಚ್ಚು ಭೂಮಿ ಹಿಡಿಯುವ ಚಳುವಳಿ ತೀವ್ರಗತಿಯಲ್ಲಿ ರಾಜ್ಯದಲ್ಲಿ ಬೆಳೆದು ಬರುತ್ತಿದೆ.

ಸೌಂದತ್ತಿ ತಾಲೂಕಿನಲ್ಲಿ ತಲ್ಲೂರ ದೇಸಾಯಿ 5000/ಎಕರೆ ಜಮೀನು ಉಳುಮೆ ಮಾಡುತ್ತಿದ್ದಾನೆ. ಅದರ ಪಕ್ಕದಲ್ಲಿ ಕಂದಾಯ ಇಲಾಖೆಯ 1000/ ಎಕರೆ ಸಿ ಮತ್ತು ಡಿ ಭೂಮಿಯಿದೆ. ಇದರಲ್ಲಿ ರಾಮಾಪುರ ಹಾಗೂ ರಾಮಾಪುರ ತಂಡಾದ ರೈತರು ಕಳೆದ 1972ರಿಂದ ಸಾಗುವಳಿ ಮಾಡುತ್ತಾ ಬಂದಿದ್ದಾರೆ. ಆದರೆ ಬರಗಾಲ ಹಾಗೂ ಬೇಸಿಗೆಯಲ್ಲಿ ಜೀವನಾಧಾರಕ್ಕೆ ಬಾಂಬೆ, ಶೋಲಾಪುರ ಹಾಗೂ ಗೋವಾಕ್ಕೆಹೋಗುವುದನ್ನು ಬಳಸಿಕೊಂಡು, ಅರಣ್ಯ ಇಲಾಖೆಯವರು ಸಸಿನೆಡುವ ಕೆಲಸ ಮಾಡುತ್ತಾ ಬಂದಿದ್ದಾರೆ. ರೈತರು ಮರಳಿ ಬಂದು ಸಾಗುಮಾಡಲು ಲಂಚ ಪಡೆದು ಅವಕಾಶ ಕೊಡುತ್ತಿದ್ದರು. ಇದರ ಜೊತೆಗೆ ಕಟ್ಟಿಗೆ ಎಲ್ಲಿಂದ ತಂದರೂ ಅದಕ್ಕೆ 2/ರೂ ಲಂಚ, ರೈತರ ಮನೆಯಲ್ಲಿರುವ ಪೇಕೆ, ದನ ಗಳಿಗೂ ಪ್ರತಿ ತಿಂಗಳ 5/ರೂ ದಂತೆ ಲಂಚ, ಜೊತೆಗೆ ವಾರಕ್ಕೊಂದು ಹೊರೆ ಪುಕ್ಕಟೆಯಾಗಿ ಕಟ್ಟಿಗೆ ಅರಣ್ಯ ಅಧಿಕಾರಿಗಳಿಗೆ ಕೊಡಬೇಕು.

ಭೂಮಿ ಹೋರಾಟ ಕುರಿತು 30 ಹಳ್ಳಿಗಳಲ್ಲಿ ಸಾಗು ಮಾಡಿದ ರೈತರಿಗೆ ಪಟ್ಟಾ ಕೊಡುವ ಪ್ರಶ್ನೆಗಾಗಿ ಬೆಳಗಾಂ ಜಿಲ್ಲಾ ಸಮಿತಿ ಸಂಘಟಿಸುವಾಗ, ಈ ರೈತರ ಸಂಪರ್ಕ ಬಂದು ಲಂಚ ಕೊಡದೆ ಈ ವರ್ಷ ಸಾಗುಮಾಡಲು ಕರೆ ಕೊಡಲಾಯಿತು. 6-8-89ರಂದು ಬಿತ್ತಲು ಹೋದ ರೈತರನ್ನು ಬಂಧಿಸಿ ಬಿಡುಗಡೆ ಮಾಡಲಾಯಿತು.7-8-89ರಂದು ಮರಳಿ ಕಾ॥ ಎಲ್.ಎಸ್.ನಾಯಕ್ ಅವರ ನೇತೃತ್ವದಲ್ಲಿ ಬಿತ್ತಲು ಹೋದ 101ಜನರನ್ನು ಬಂಧಿಸಿ ಹಿಂಡಲಗಾ ಜೈಲಿಗೆ ಕಳಿಸಲಾಯಿತು. ಅದರಲ್ಲಿ 28, ಜನ ಮಹಿಳೆಯರು ಬಾಣಂತಿಯರು ಒಳಗೊಂಡಿದ್ದರು. ಹಲವಾರು ಕ್ರಿಮಿನಲ್‌ಮೊಕದ್ದಮೆಗಳನ್ನು ಹಾಕಿ ರೈತರನ್ನು ಹೆದರಿಸಲು ಅರಣ್ಯ ಇಲಾಖೆ ಪ್ರಯತ್ನಿಸಿತು. ರಾಜ್ಯ ಸಮಿತಿ ಸಹಾಯದೊಂದಿಗೆ ಜಿಲ್ಲಾ ಸಮಿತಿಯು ಸೌಂದತ್ತಿಯಲ್ಲಿ 21-7-89ರಂದು ಪ್ರತಿಭಟನಾ ರ್‍ಯಾಲಿಯನ್ನು ನಡೆಸಿತು. ಜೈಲಿನಲ್ಲಿರುವ ರೈತರು ಅರ್ಧ ದಿನ ಉಪವಾಸ ಸತ್ಯಾಗ್ರಹವನ್ನು ನಡೆಸಿದರು. 24-7-89ರಂದು ರೈತರನ್ನು ಕೋರ್ಟಿಗೆ ತಂದಾಗ, ನೂರಾರು ಮಹಿಳೆಯರು, ಮಕ್ಕಳು ಮುಂದಿನ ಹೋರಾಟಕ್ಕಾಗಿ ಕೋರ್ಟಿನ ಆವರಣದಲ್ಲಿ ಸೇರಿದ್ದರು. ಪರಿಸ್ಥಿತಿಯನ್ನು ಅರಿತ ಮ್ಯಾಜಿಸ್ಟ್ರೇಟರು ರೈತರು ಜೇಲಿನಲ್ಲಿದ್ದ ಹದಿನಾರು ದಿವಸವನ್ನು ಶಿಕ್ಷೆಯೆಂದು ಘೋಷಿಸಿ ಬಿಡುಗಡೆ ಮಾಡಿದರು. ರೈತರನ್ನು ಮೊಕದ್ದಮೆಯಲ್ಲಿ ಸೇರಿಸಿ ವರ್ಷವಿಡೀ ಕೋರ್ಟಿಗೆ ಅಲೆಯುವಂತೆ ಮಾಡಲು ಹವಣಿಸಿದ್ದ ಅರಣ್ಯ ಇಲಾಖೆಯ ಭ್ರಷ್ಟ ಅಧಿಕಾರಿಗಳಿಗೆ ನಿರಾಶೆಯಾಯಿತು. ಜೇಲಿನಿಂದ ಹೊರಗೆ ಬಂದ ರೈತರು ಹೆಚ್ಚು ಉತ್ಸಾಹಿತರಾಗಿದ್ದು, ಭೂಮಿಗೆ ಮರು ಪ್ರವೇಶಕ್ಕೆ ತಯಾರಿ ಮಾಡುತ್ತಿದ್ದಾರೆ.

ಭೂಮಾಲೀಕ ಗೂಂಡಾದಾಳಿಯಿಂದ ಭೂಮಿ ಹಿಡಿದ ರೈತರ ಮೇಲೆ ಹಲ್ಲೆ ಜೀವ ರಕ್ಷಿಸಲು ಕೋರಿ, ಜಿಲ್ಲಾಧಿಕಾರಿಗೆ 36ಜನ ಮಹಿಳೆಯರಿಂದ ಮಂಗಲ ಸೂತ್ರದ ಅಡವು ರಾಯಚೂರು ಜಿಲ್ಲೆಯ ಗಂಗಾವತಿ ತಾಲೋಕಾದಲ್ಲಿ ಹತ್ತಾರು ಸಾವಿರ ಎಕರೆ ಫಲವತ್ತಾದ ನೀರಾವರಿ ಭೂಮಿಯನ್ನು ಭೂಮಾಲೀಕರು ಸಾಗುವಳಿ ಮಾಡುತ್ತಿದ್ದಾರೆ. ಭೂರಹಿತರಿಗೆ ಪಟ್ಟಾ ಸಿಕ್ಕಿದ್ದರೂ ಸಾಗುವಳಿ ಮಾತ್ರ ಭೂಮಾಲೀಕರೇ ಮಾಡುತ್ತಿದ್ದಾರೆ. ರಾಷ್ಟ್ರವ್ಯಾಪಿ ಚಳುವಳಿಯ ಹಿನ್ನಲೆಯಲ್ಲಿ ಗಂಗಾವತಿ ತಾಲೋಕಿನ ಭೂಮಿಯ ಪ್ರಶ್ನೆಯನ್ನು ಕೈಗೆತ್ತಿಕೊಳ್ಳಲು ರಾಯಚೂರು ಜಿಲ್ಲಾ ರೈತ ಸಂಘಟನೆಗಳು ತೀರ್ಮಾನಿಸಿತು. ಭಟ್ರಂಚಿನಾಳ ಗ್ರಾಮದಲ್ಲಿ ಅಕ್ರಮವಾಗಿ ಸಾಗು ಮಾಡುತ್ತಿದ್ದ ಶಿವರಾಯಪ್ಪ ಭೂಮಾಲೀಕನಾಗಿದ್ದು, ಅದರ ಪಕ್ಕದ ಸರಕಾರಿ ಭೂಮಿಯನ್ನು ಸಾಗುಮಾಡಲು ಹೋದ ಭೂರಹಿತರ ಮೇಲೆ ಗುಂಡಾ ದಾಳಿಯನ್ನು ನಡೆಸಿದರು.

ಇದನ್ನು ಪ್ರತಿಭಟಿಸಿ ಜಿಲ್ಲಾದಿಕಾರಿಯನ್ನು ರೈತರು ಘೇರಾವ್ ಮಾಡಿದರು. ನಂತರ ಪಕ್ಕದ ಹಳ್ಳಿಯ ರೈತರನ್ನು ಸಂಘಟಿಸಿ ಪಕ್ಕದ ಭೂಮಿಯನ್ನು ಹಿಡಿಯುವುದರ ಜೊತೆಗೆ, ಭೂಮಾಲೀಕ ಅಕ್ರಮಬದ್ಧವಾಗಿ ಹಿಡಿದ ಭೂಮಿಯಲ್ಲಿ 9/ಎಕರೆಯನ್ನು ಹಿಡಿದು 36ಜನರಿಗೆ ಹಂಚಲಾಯಿತು. ಗೂಂಡಾದಾಳಿಯನ್ನು ತಡೆಗಟ್ಟಲು, ಗಂಗಾವತಿಯಲ್ಲಿ 5-7-89ರಂದು ಪ್ರತಿಭಟನಾ ಮೆರವಣಿಗೆ ನಡೆಸಿ ತಹಸೀಲ್ದಾರರಿಗೆ ಮನವಿಯನ್ನು ಸಲ್ಲಿಸಿ ಹಿಡಿದ ಭೂಮಿಗೆ ಪಟ್ಟಾ ಒದಗಿಸಲು ಮತ್ತು ಭೂಮಿ ಹಿಡಿದ ರೈತರಿಗೆ ರಕ್ಷಣೆ ಒದಗಿಸಲು ಒತ್ತಾಯಿಸಲಾಯಿತು. ಅದೇ ದಿನ ಜಿಲ್ಲೆಯ ಕುಷ್ಟಗಿ, ಸಿಂಧನೂರಿನಲ್ಲಿ ಪ್ರತಿಭಟನಾ ಧರಣಿಯನ್ನು ನಡೆಸಲಾಯಿತು. 6-7-89ರಂದು 36 ಭೂಹಿಡಿದ ರೈತರ ಹೆಂಡಂದಿರು ತಮ್ಮ ಮಂಗಲಸೂತ್ರವನ್ನು ಹಾಗೂ ಬಳೆ'ಗಳೊಂದಿಗೆ ರಾಯಚೂರು ನಗರದಲ್ಲಿ ಪ್ರದರ್ಶನ ನಡೆಸಿ ಜಿಲ್ಲಾಧಿಕಾರಿಗೆ ಮನವಿ ಹಾಗೂ ಮಂಗಳಸೂತ್ರ ಮತ್ತು ಬಳೆಯನ್ನು ಅರ್ಪಿಸಿದರು. ಕೂಡಲೇ ಜಿಲ್ಲಾಧಿಕಾರಿಗಳು ಕೊಪ್ಪಳ ಸಹಾಯಕ ಕಮೀಶನರಿಗೆ ಮುಂದಿನ ಕ್ರಮಕ್ಕೆ ತಂತಿ ಸಂದೇಶ ಕೊಡಲಾಗಿ, ಅಧಿಕಾರಿಗಳು ಭೂಮಿಯಲ್ಲಿ ಭೂಮಾಲೀಕ ಹೋಗದಂತೆ ತಡೆದಿದ್ದಾರೆ. ಹಾಗೂ ಗೂಂಡಾದಾಳಿ ನಿಂತಿದ್ದು, ರೈತರಲ್ಲಿ ಹೊಸ ಭರವಸೆಯನ್ನು ಪಡೆಯಲು ಸಾಧ್ಯವಾಗಿದೆ. ಕೂಡಲೇ ಆ ಭೂಮಿಯಲ್ಲಿ ಸಾಗು ಮಾಡಲು ಜಿಲ್ಲಾ ಸಮಿತಿ ಕರೆ ಕೊಟ್ಟಿದೆ.

<u>ಕೆ.ಪಿ.ಸಿ.ಸಿ. (ಐ) ಅಧ್ಯಕ್ಷ ವೀರೇಂದ್ರ ಪಾಟೀಲರ ಅಳಿಯನಿಂದ ಭೂರಹಿತರಿಗೆ ಹಂಚಿದ ಭೂಮಿಯಲ್ಲಿ ಅಕ್ರಮ ಸಾಗುವಳಿ ಮಾಡುತ್ತಿದ್ದು, ಭೂಮಿ ಸಾಗು ಮಾಡಲು ಹೋದ ರೈತರನ್ನು ಅಧಿಕಾರಿಗಳಿಂದ ತಡೆ.</u>

ಚಿಂಚೋಳಿ ತಾಲೂಕಿನಲ್ಲಿ ಸರಕಾರಿ ಭೂಮಿಯನ್ನು ಭೂರಹಿತರಿಗೆ ಹಂಚಿಕೊಟ್ಟು, ಪಟ್ಟಾ ಕೊಡಲಾಗಿದೆ. ಆದರೆ ಪಟ್ಟಾ ಕೊಟ್ಟಿಲ್ಲ. ಭೂಮಾಲೀಕರೇ ಸಾಗು ಮಾಡುತ್ತಿದ್ದಾರೆ. ಪ್ರಾಂತ ರೈತ ಸಂಘದ ಜಿಲ್ಲಾ ಸಮಿತಿ ಒಂಭತ್ತು ಸ್ಥಳಗಳಲ್ಲಿ ಭೂಮಿ ಹೋರಾಟ ರೂಪಿಸಲು ತೀರ್ಮಾನಿಸಿದ್ದು, ಚಿಂಚೋಳಿಯಲ್ಲಿ ಕೆ.ಪಿ.ಸಿ.ಸಿ. (ಐ) ಅಧ್ಯಕ್ಷ ವೀರೇಂದ್ರ ಪಾಟೀಲರ ಅಳಿಯ ಜಿಲ್ಲಾಪರಿಷತ್ ಸದಸ್ಯರು ಭೂರಹಿತರಿಗೆ ಹಂಚಿದ ಭೂಮಿಯನ್ನು ಹಲವಾರು ವರ್ಷಗಳಿಂದ ಸಾಗು ಮಾಡುತ್ತಾ ಬಂದಿದ್ದಾರೆ. ಪ್ರಾಂತರೈತ ಸಂಘದ ಮುಖಂಡತ್ವದಲ್ಲಿ 500ಜನ ರೈತರು ಭೂಮಿಯಲ್ಲಿ ಬಿತ್ತನೆ ಮಾಡಲು ಹೋಗಲಾಗಿ, ಡಿ.ವೈ.ಎಸ್.ಪಿ. ಹಾಗೂ ಸಹಾಯಕ ಕಮೀಶನರ್ ಅವರುಗಳು ಬಂದು ಒಂದು ವಾರದಲ್ಲಿ ಸಮಸ್ಯೆಯನ್ನು ಇತ್ಯರ್ಥ ಮಾಡವುದಾಗಿ ಆಶ್ವಾಸನೆ ಕೊಟ್ಟಿದ್ದಾರೆ.

ನಂತರ ಬಹಿರಂಗ ಸಭೆ ನಡೆದು ಒಂದು ಸಾವಿರ ಜನ ರೈತರು ಪಾಲುಗೊಂಡಿದ್ದಾರೆ.

ಕೋಲಾರ ಜಿಲ್ಲೆಯ ಬಾಗೇಪಲ್ಲಿ, ಗೌರಿಬಿದನೂರು ತಾಲೋಕಿನಲ್ಲಿ ಕಾಂಗ್ರೆಸ್ ಪಕ್ಷದ ಭೂಮಾಲೀಕರಿಂದ ಭೂಮಿ ಹಿಡಿಯಲು ಹೋದ ರೈತರ ಮೇಲೆ ಹಲ್ಲೆ, ಅಧಿಕಾರಿಗಳಿಂದ ಭೂಮಾಲೀಕರಿಗೆ ಎಲ್ಲಾ ರೀತಿಯ ಸಹಾಯಬಾಗೇಪಲ್ಲಿ ತಾಲೂಕಿನ ಪೆಸಲಪರ್ತಿಯಲ್ಲಿ 200/ ಎಕರೆಯಷ್ಟು ಸರಕಾರಿ ಭೂಮಿಯನ್ನು ಹತ್ತಾರು ವರ್ಷಗಳಿಂದ ಕಾಂಗ್ರೆ ಮುಖಂಡರಾದ ರಾಮಕೃಷ್ಣರೆಡ್ಡಿ ಹಾಗೂ ರಂಗಾರೆಡ್ಡಿ ಭೂಮಾಲೀಕರು ಅಕ್ರಮವಾಗಿ ಸಾಗು ಮಾಡುತ್ತಿದ್ದಾರೆ. ಪ್ರಾಂತ ರೈತ ಸಂಘ ಅದನ್ನು ಹಿಡಿದು ಸಾಗು ಮಾಡಲು ಹೋದಾಗ, ಇತರೆ ರೈತರನ್ನು ಎತ್ತಿಕಟ್ಟಿ ಹಲ್ಲೆ ನಡೆಸಲಾಗಿದೆ. ಜೊತೆಗೆ ಜಿಲ್ಲೆಯ ಎಲ್ಲಾ ಅಧಿಕಾರಿಗಳು ಶಾಮೀಲಾಗಿ ಕಾ॥ ಶ್ರೀ ರಾಮರೆಡ್ಡಿ ಪ್ರಾಂತ ಕೃಷಿಕೂಲಿಕಾರ ಸಂಘಟನೆ ರಾಜ್ಯ ಕಾರ್ಯದರ್ಶಿಗಳನ್ನು ಸೇರಿಸಿ ಹನ್ನೆರಡು ಮಂದಿಯ ಮೇಲೆ ಕ್ರಿಮಿನಲ್ ಮೊಕದ್ದಮೆ ಹೂಡಿದ್ದಾರೆ. ಇದನ್ನು ಪ್ರತಿಭಟಿಸಿ ಧರಣಿ ಸತ್ಯಾಗ್ರಹ ನಡೆಸಲು ಕರೆ ಕೊಡಲಾಗಿದೆ.

ಗೌರಿಬಿದನೂರು ತಾಲೂಕಿನ ಮರಳೂರು ಗ್ರಾಮದ 72%ಎಕರೆಭೂಮಿ ರೈತರಿಗೆ ಹಂಚಿದ್ದು, ಅದೇ ಭೂಮಿಯನ್ನು ಜಿಲ್ಲಾಧಿಕಾರಿ ಹಾಲು ಉತ್ಪಾದಕರ ಸೊಸೈಟಿಗೆ ಕೊಡಲಾಗಿದೆ.

ಇದನ್ನು ಪ್ರತಿಭಟಿಸಿ ರೈತರು ಸಾಗುಮಾಡಲು ಹೋಗಲಾಗಿ ಭೂಮಾಲೀಕರ ಗೂಂಡಾದಾಳಿ ನಡೆದಿದೆ, ಅದನ್ನು ಪ್ರತಿಭಟಿಸಿ ಧರಣಿ ಸತ್ಯಾಗ್ರಹ ನಡೆದಿದೆ.

10-8-89ರಂದು ರಾಜ್ಯ ಮುಖಂಡರಿಂದ ಗೌರಿಬಿದನೂರಲ್ಲಿ ಬಹಿರಂಗ ಸಭೆ ನಡೆಸಿ ಮುಂದಿನ ಕಾರ್ಯಕ್ರಮವನ್ನು ಘೋಷಿಸಲು ತೀರ್ಮಾನಿಸಲಾಗಿದೆ.

ಇತರ ಜಿಲ್ಲೆಗಳಲ್ಲಿ ಭೂಮಿ ಹೋರಾಟಕ್ಕೆ ತಯಾರಿ

ಬೆಂಗಳೂರು, ಬಳ್ಳಾರಿ, ಶಿವಮೊಗ್ಗಾ, ಬಿಜಾಪುರ, ದಕ್ಷಿಣ ಕನ್ನಡ, ಧಾರವಾಡ ಜಿಲ್ಲೆಗಳಲ್ಲಿ ಹೋರಾಟಕ್ಕೆ ವ್ಯಾಪಕ ತಯಾರಿ ನಡೆದಿದೆ..

ಚಂದ್ರಶೇಖರ ಬಾಳೆ
ಪ್ರಾಂತ ರೈತ ಸಂಘ
ರಾಜ್ಯ ಪ್ರಧಾನ ಕಾರ್ಯದರ್ಶಿ

ಇ.ಎಂ.ಎಸ್. ಸಭೆಯಲ್ಲಿ ಅಡಚಣೆ

ಕಾಂಗ್ರೆನ ಹತಾಶೆಯ ಸೂಚನೆ

ಜುಲೈ 27 ರಂದು ದೆಹಲಿ ವಿಶ್ವವಿದ್ಯಾಲಯದಲ್ಲಿ ಸಿ.ಪಿ.ಐ. (ಎಂ) ಪ್ರಧಾನಕಾರ್ಯದರ್ಶಿ ಕಾ॥ ಇ.ಎಂ.ಎಸ್. ನಂಬೂದರಿಪ್ಪಾಡ್ ಉದ್ದೇಶಿಸಿ ಮಾತನಾಡುತ್ತಿದ್ದ ಒಂದು ಸಭೆಯನ್ನು ಭಂಗ ಗೊಳಿಸಲು ಕಾಂಗ್ರೆ ವಿದ್ಯಾರ್ಥಿಗಳು ಪ್ರಯತ್ನಿಸಿರುವುದನ್ನು ಸಿ.ಪಿ.ಐ(ಎಂ) ಪಾಲಿಟ್ ಬ್ಯೂರೋ ಖಂಡಿಸಿದೆ.

ಇ.ಎಂ.ಎಸ್. "ರಾಜೀನಾಮೆಗಳು ಮತ್ತು ನಂತರ" ಎಂಬ ವಿಷಯದ ಮೇಲೆ ಮಾತನಾಡಲು ವಿಶ್ವವಿದ್ಯಾಲಯಕ್ಕೆ ಹೋಗಿದ್ದರು. ಸಭೆಯನ್ನು ಅಸ್ತವ್ಯಸ್ತಗೊಳಿಸುವ ಕಾಂಗ್ರೆ ಬೆಂಬಲಿಗರ ಯತ್ನವನ್ನು ಸಭಿಕರೇ ತಡೆದಾಗ ಅವರು ಕಲ್ಲು ತೂರಲಾರಂಭಿಸಿದರು. ಸಭಾಂಗಣದ ಹೊರಗೆ ಕಬ್ಬಿಣದ ಸಲಾಕೆಗಳಿಂದ ಹಲ್ಲೆ ನಡೆಸಿದರು. ಇದರಿಂದ ಮೂವರು ವಿದ್ಯಾರ್ಥಿಗಳು ಗಾಯಗೊಂಡರು ಆದರೂ ಸಭೆ ಮುಂದುವರೆಯಿತು.

ವಿರೋಧಿ ಲೋಕಸಭಾ ಸದಸ್ಯರ ರಾಜೀನಾಮೆಗೆ ಜನತೆಯ ಬೆಂಬಲವನ್ನು ಕಂಡ ಕಾಂಗ್ರೆನ ಹತಾಶ ಭಾವನೆಯನ್ನು ಈ ಗೂಂಡಾ ಹಲ್ಲೆ ಸೂಚಿಸುತ್ತದೆ ಎಂದಿರುವ ಪಾಲಿಟ್ ಬ್ಯೂರೋ ಕಾಂಗ್ರೆ ಬೆಂಬಲಿಗರ ಈ ಪ್ರಜಾಪ್ರಭುತ್ವ ವಿರೋಧಿ ಹಾಗೂ ಛಿದ್ರಕಾರಿ ತಂತ್ರಗಳ ವಿರುದ್ಧ ಪ್ರತಿಭಟಿಸಬೇಕೆಂದು ಎಲ್ಲಾ ಜನ ವಿಭಾಗಗಳಿಗೆ ಕರೆ ನೀಡಿದೆ.

ಲೋಕಸಭಾ ಸದಸ್ಯರು ರಾಜೀನಾಮೆ

ಸಿ.ಎ.ಜಿ ವರದಿ ಬೊಫೋರ್ಸ್ ವ್ಯವಹಾರವನ್ನು ನಿಷ್ಕರ್ಷೆಯಾಗಿ ತೀರ್ಮಾನಿಸುವ ವರದಿ, ಕಳೆದ ಎರಡು ವರ್ಷಗಳಿಂದ ಬೊಫೋರ್ಸ್ ಪಾವತಿಗಳ ಬಗ್ಗೆ ರಾಜೀವ ಗಾಂಧಿ ಮತ್ತು ಅವರ ಸಹಯೋಗಿಗಳ ಅಡಚಣೆಯೊಡ್ಡುವ ತಂತ್ರ, ಬಾರಿ-ಬಾರಿಗೆ ನಿಲುವುಗಳ ಬದಲಾವಣೆ, ಮುಚ್ಚಿ ಹಾಕುವ ಒಡ್ಡೊಡ್ಡಾದ ಪ್ರಯತ್ನಗಳು ಮತ್ತು ನೇರ ಸುಳ್ಳುಗಳನ್ನು ಅಂತಿಮವಾಗಿ ಬಯಲಿಗೆಳೆದಿದೆ. ಕನಿಷ್ಠ 64ಕೋಟಿ ರೂಗಳನ್ನು ಬೊಫೋರ್ಸ್ ಕಮಿಷನ್ ಆಗಿ ಕೆತ್ತಿದೆ ಎಂಬುದನ್ನು ಸರ್ಕಾರವು ಸೇರಿದಂತೆ ಸಂಬಂಧಪಟ್ಟ ಎಲ್ಲರೂ ಒಪ್ಪಿದಾರೆ. ಆರಂಭದ ಹಂತದಲ್ಲಿ ಮತ್ತೆ ಮತ್ತೆ ಇದನ್ನು ಬಹಳ ತೀವ್ರವಾಗಿ ನಿರಾಕರಿಸಲಾಗಿತ್ತು. ಜಂಟಿ ಸಂಸದೀಯ ಸಮಿತಿಯನ್ನು ಕಮಿಷನ್ ಪಡೆದವರ ಗುರುತಿನ ಬಗ್ಗೆ ವ್ಯಾಪಾರಿ ಗುಪ್ತತೆಯನ್ನು ಇಟ್ಟುಕೊಳ್ಳುವ ಬೊಫೋರ್ಸ್‌ನ ಹಕ್ಕನ್ನು ರಕ್ಷಿಸಲಷ್ಟೇ ಬಳಸಲಾಯಿತು. ಬೊಫೋರ್ಸ್ ಕಮಿಷನ್ ಪಾವತಿ ಬಗ್ಗೆ ಸ್ಫೋಟಕ ವಿವರಗಳುಳ್ಳ ಪ್ರಮಾಣಿತ ದಸ್ತಾವೇಜುಗಳನ್ನು ಒಂದು ವರ್ಷಕ್ಕೂ ಹಿಂದೆ 'ಹಿಂದೂ' ಪತ್ರಿಕೆ ಪ್ರಕಟಿಸಿದ್ದರೂ ಸಿಬಿಐ ಏನೂ ಮಾಡಿಲ್ಲ. ಸರ್ಕಾರ ಒಡ್ಡಿದ ಆತಂಕಗಳನ್ನೆಲ್ಲಾ ಎದುರಿಸಿಯೂ ಮೂರು ವರ್ಷ ವಾಸ್ತವ ಸಂಗತಿಗಳ ಬೆನ್ನಟ್ಟಿ ಸದ್ದಿಲ್ಲದೆ ಹಾಗೂ ನಿರಂತರ ಪ್ರಯತ್ನ ನಡೆಸಿದ ಸಿ.ಎ.ಜಿ. ಬೊಫೋರ್ಸ್ ವ್ಯವಹಾರದ ಅತ್ಯಂತ ತೀವ್ರ ಹಾಗೂ ಸಮಗ್ರ ದೋಷಾರೋಪಣೆಯನ್ನು ಮಂಡಿಸಿದ್ದಾರೆ.

ಸಿ.ಎ.ಜಿ. ಸಂವಿಧಾನದ ಪ್ರಕಾರ ಸ್ಥಾಪಿಸಿದ ಸರ್ವೋಚ್ಚ ಲೆಕ್ಕ ಪರಿಶೋಧಕ ಸಂಘಟನೆ. ಇದರ ವರದಿಗಳಿಗೆ ಒಂದು ತಜ್ಞರ ಸಮಿತಿಯ ವರದಿಯ ಸ್ಥಾನಮಾನ ಇದೆ. ಇದಕ್ಕೆ ಸಂಸದೀಯ ತೀರ್ಪಿನ ಅಗತ್ಯವಿಲ್ಲ. ಬೋಫೋರ್ಸ್ ವ್ಯವಹಾರದ ಬಗ್ಗೆ ಸಿಎಜಿಯ ವರದಿಯ ನಂತರ ಈ ವ್ಯವಹಾರವನ್ನು ರಕ್ಷಣಾ ಮಂತ್ರಿಯಾಗಿ ಸ್ವತಃ ನಿರ್ವಹಿಸಿದ ಪ್ರಧಾನ ಮಂತ್ರಿಗೆ ಒಂದು ಪ್ರಜಾಪ್ರಭುತ್ವದಲ್ಲಿರುವ ಏಕೈಕ ದಾರಿ ಎಂದರೆ ರಾಜೀನಾಮೆ ನೀಡುವುದು. ರಾಜೀವಗಾಂಧಿ ರಾಜಕೀಯ ಔಚಿತ್ಯತೆಯ ಯಾವುದೇ ಲಕ್ಷಣ ತೋರುವುದಂತಿರಲಿ, ಸಿ.ಎ.ಜಿ. ಯ ಮೇಲೆ ಒಂದು ಅಸಹ್ಯ ಹಲ್ಲೆಗಳ ಮೇಳಗಾನವನ್ನೇ ಹರಿಯ ಬಿಟ್ಟರು. ಕಳೆದ ಕೆಲವು ವರ್ಷಗಳಲ್ಲಿ ಒಂದೊಂದಾಗಿ ಸಂಸತ್ತು ರಾಷ್ಟ್ರಪತಿ ಸ್ಥಾನ, ನ್ಯಾಯಾಂಗ, ರಾಜ್ಯಪಾಲ ಹುದ್ದೆ, ಚುನಾವಣಾ ಆಯೋಗ ಹೀಗೆ ಪ್ರತಿಯೊಂದು ಸಂವೈಧಾನಿಕ ಸಂಸ್ಥೆಯನ್ನು ಹೀಗಳೆಯಲು ಮತ್ತು ಅಪಮೌಲ್ಯಗೊಳಿಸಲು ಪ್ರಯತ್ನಿಸಲಾಗಿದೆ. ಈಗ ಆಳುವ ಪಕ್ಷ ಚರ್ಚೆಯ ನೆವದಲ್ಲಿ ಸ್ವತಃ ಡಾ॥ ಬಿ.ಆರ್. ಅಂಬೇಡ್ಕರವರೇ "ಬಹುಶಃ ಸಂವಿಧಾನದಲ್ಲಿ ಅತ್ಯಂತ ಮಹತ್ವದ ಅಧಿಕಾರಿ" ಎಂದು ವರ್ಣಿಸಿದ ಮಹಾ ನಿಯಂತ್ರಕ ಮತ್ತು ಲೆಕ್ಕ ಪರಿಶೋಧಕರ ಮೇಲೆ ದುಷ್ಟ ಹಲ್ಲೆ ನಡೆಸುತ್ತಿದೆ.

ಶ್ರೀಮತಿ ಇಂದಿರಾಗಾಂಧಿಯ ಹತ್ಯೆಯ ಹಿನ್ನಲೆಯಲ್ಲಿನ ಪರಿಸ್ಥಿತಿಯಲ್ಲಿ ಆಳುವ ಪಕ್ಷಗಳಿಸಿದ ಅಭೂತ ಪೂರ್ವ ಬಹುಮತವನ್ನು ವಿರೋಧ ಪಕ್ಷಗಳ ದನಿಯನ್ನು ಹಿಸುಕಲು ಮಾತ್ರವಲ್ಲ, ದೀರ್ಘ ಪರಂಪರೆಗಳನ್ನೇ ತುಳಿದುಹಾಕಲು ದುರುಪಯೋಗ ಪಡಿಸಿಕೊಳ್ಳಲಾಗುತ್ತದೆ. ಸಾರ್ವಜನಿಕ ಲೆಕ್ಕ ಪತ್ರ ಸಮಿತಿಯ ಅಧ್ಯಕ್ಷರ ಅಸಮಂಜಸ ನೇಮಕದ ವಿರುದ್ಧ ಪ್ರತಿಭಟನೆಯಾಗಿ ಸಮಸ್ತ ವಿರೋಧ ಪಕ್ಷಗಳು ಸಂಸತ್ತಿನ ಎಲ್ಲಾ ಹಣಕಾಸು ಸಮಿತಿಗಳಿಂದ ತಮ್ಮ ಸದಸ್ಯರನ್ನು ಹಿಂತೆಗೆದುಕೊಂಡಾಗಲೂ ಆಳುವ ಪಕ್ಷದ ಪ್ರಜಾಸತ್ತಾತ್ಮಕ ಆತ್ಮಸಾಕ್ಷಿಗೆ ಏನೂ ತಟ್ಟಲಿಲ್ಲ. ಕಾಂಗ್ರೆಸ್(ಐ)ನ ಸಂಖ್ಯಾತ್ಮಕ ಬಹುಮತವನ್ನು ಸಿ.ಎ.ಜಿ. ಯನ್ನು ದೂಷಿಸಲು ಮತ್ತು ಅವರ ತನಿಖೆಗಳನ್ನು ಶೂನ್ಯಗೊಳಿಸಲು ಬಳಸಲಾಗುತ್ತಿದೆ. ಸಿ.ಎ.ಜಿ. ವರದಿಯೊಂದಿಗೆ ಈಗ ಪೂರ್ಣಗೊಂಡಿರುವ ಭೊಫೋರ್ಸ್ ವ್ಯವಹಾರ ಕುರಿತು ಬಯಲಾದ ಸಂಗತಿಗಳು ಪ್ರಸ್ತುತ ಸರ್ಕಾರ ದೇಶದ ಭದ್ರತೆ, ಸಮಗ್ರತೆ ಮತ್ತು ಸಾರ್ವಭೌಮತೆಗೆ ಅತ್ಯಂತ ಗಂಭೀರ ರೀತಿಯಲ್ಲಿ ಭಂಗ ತರುತ್ತಿದೆ ಎಂಬುದು ಸಿದ್ಧಗೊಂಡಂತಾಗಿದೆ. ಈ ಸರಕಾರ ಆಳುವ ತನ್ನ ಹಕ್ಕನ್ನು ಕಳಕೊಂಡಿದೆ. ಪ್ರಧಾನ ಮಂತ್ರಿಯವರು ರಾಜಿನಾಮೆಯನ್ನಾಯ ಬದ್ಧ ಬೇಡಿಕೆಯನ್ನು ಒಪ್ಪಿಕೊಂಡಿಲ್ಲವಾದ್ದರಿಂದ ಮತ್ತು ಲೋಕಸಭೆ ಈಗ ಜನತೆಯ ಅಭೀಪ್ಸೆಯನ್ನು ಪ್ರತಿಬಿಂಬಿಸಲ್ಲವಾದ್ದರಿಂದ ಅಥವಾ ಪ್ರತಿನಿಧಿಸುವುದಿಲ್ಲವಾದ್ದರಿಂದ ನಮ್ಮ ಪಕ್ಷದ ಲೋಕಸಭಾ ಸದಸ್ಯರು ರಾಜೀನಾಮೆ ನೀಡುತ್ತಾರೆ.

ಆದರೆ ರಾಜ್ಯಸಭೆ ಒಂದು ನಿರಂತರ ಸಂಸ್ಥೆಯಾದ್ದರಿಂದ ನಾವು ಈ ಭ್ರಷ್ಟ ಮತ್ತು ಅಸಮರ್ಥ ಸರಕಾರವನ್ನು ವಿರೋಧಿಸಲು ಬದ್ಧರಾಗಿದ್ದೇವೆ ಎಂದು ಒತ್ತಿ ಹೇಳುತ್ತೇವೆ. ಈ ಸರ್ಕಾರ ರಾಜ್ಯಗಳ ಅಧಿಕಾರಗಳನ್ನು ಅತಿಕ್ರಮಿಸುವ ಪಂಚಾಯಿತಿರಾಜ್ ಮತ್ತು ನಗರ ಸ್ಥಳಗಳಿಗೆ ಸಂಬಂಧ ಪಟ್ಟ ಶಾಸನಗಳು ಸೇರಿದಂತೆ ಅದರ ಎಲ್ಲಾ ಸರ್ವಾಧಿಕಾರಿ ಮತ್ತು ಜನ ವಿರೋಧಿ ಕ್ರಮಗಳನ್ನು ಪ್ರತಿರೋಧಿಸುವುದನ್ನು ಮುಂದು ವರಿಸುತ್ತೇವೆ.

ಈ ಜಂಟಿ ಠರಾವಿಗೆ ತೆಲುಗು ದೇಶಂ, ಜನತಾದಳ, ಸಿ.ಪಿ.ಐ (ಎಂ), ಸಿ.ಪಿ.ಐ, ಬಿ.ಜೆ.ಪಿ., ಡಿ.ಎಂ.ಕೆ, ಎ.ಜೆ.ಪಿ, ಕಾಂಗ್ರೆಸ್ (ಎಸ್), ಫಾರ್ವರ್ಡ್ ಬ್ಲಾಕ್, ಅಕಾಲಿದಳ, ಪಿ.ಡಬ್ಲ್ಯು.ಪಿ. ಮತ್ತು ಆರ್.ಎಸ್.ಪಿ. ಸಹಿ ಹಾಕಿದ್ದವು.

Printed and published by P.RAMACHANDRA RAO on behalf of communist party of India (Marxist), Karnataka State committee L-56, K.V. Temple Street, Sulthanpet, Bangalore-560 053. Phone.No. 75331. Editor. P.RAMACHANDRA RAO. Managerial Office; C/O Kriya Prakashana, Shobha Lodge Complex, 5th main Road, Gandhinagar, Bangalore-560 009.